ಗೌರಿ ಲಂಕೇಶರ
ಲಂಕೇಶ್
ಏಪ್ರಿಲ್ 4, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಕುಮ್ಮಿ ರೇವು

ಕಾಳಗ!

ೂಸ ಧಾರಾವಾಹಿ
ಮ್ ಕಾರ್ಬೆಟ್‌ನ
ೋಹನದ ನರಭಕ್ಷಕ

ಹುಬ್ಬಳ್ಳಿ: ಸಿದ್ಧಾರೂಢ ಮಠದಲ್ಲಿ ಹೆಗ್ಗಣಗಳು


ಂಗಳೂರು:
ಕೆಟ್ ಬೆಟ್ಟು
ಟ್ಟ ಕಟ್ಟು!



ಕಿಲ್ಲರ್ ಕ್ರಿಕೆಟ್

ಕಂಫರ್ಟ್ ಜೋನಿನ ಸಮಾಜವಾದಿ ಮತ್ತು ಕ್ರಾಂತಿಕಾರಿ ಭಗತ್ ಸಿಂಗ್





ಈ ದೇಶದ ನ್ಯಾಯಪರರೆಲ್ಲರಿಗೂ ಸದಾ ಆದರ್ಶವಾಗಿರುವ ಭಗತ್ ಸಿಂಗ್ ಹುತಾತ್ಮನಾಗಿ ಇದೇ ಮಾರ್ಚ್ 23 ಕ್ಕೆ 76 ವರ್ಷಗಳಾಗುತ್ತವೆ. ಆತ ಬದುಕಿದ್ದರೆ ಈ ವರ್ಷಕ್ಕೆ ಆತನಿಗೆ ನೂರು ತುಂಬುತ್ತಿತ್ತು. ಆದ್ದರಿಂದಲೇ ದೇಶದೆಲ್ಲೆಡೆ ಸಮಾಜವಾದಿ, ಶೋಷಣೆ ರಹಿತ ಸಮಾಜದ ಕನಸನ್ನು ಕಾಣುತ್ತಿರುವ ಎಲ್ಲ ಸಮಾನ ಮನಸ್ಕರು ಈ ಮಾರ್ಚ್ 23 ರ ಸಂದರ್ಭವನ್ನು ಈ ದೇಶವನ್ನು ನವ ವಸಾಹತುಶಾಹಿಗಳಿಂದ ಮತ್ತು ಸ್ಥಳೀಯ ಶೋಷಕರಿಂದ ವಿಮೋಚನೆ ಮಾಡುವುದು ಹೇಗೆ ಎಂಬ ವಿವೇಚನೆಯ ದಿನವನ್ನಾಗಿ ಆಚರಿಸಿದರು. ಈ ಆಶಯಗಳನ್ನು ಹೊಂದಿರುವವರ ಚಿಂತನಾಧಾರೆಗಳೇನೇ ಇದ್ದರೂ ಸಮಾನ ಶತ್ರುವಿನ ವಿರುದ್ಧದ ಹೋರಾಟದಲ್ಲಿ ಸಮಾನ ಕನಸಿನಲ್ಲಿ ಒಂದಾಗಲು ಐಕ್ಯ ಹೋರಾಟಗಳನ್ನು ರೂಪಿಸುವ ಪ್ರಯತ್ನವನ್ನೂ ಮಾಡುತ್ತಿದ್ದಾರೆ. ಮಾರ್ಚ್ 23, ಈ ದೇಶ ಸಮಾಜವಾದಿಯಾಗಬೇಕೆಂಬ ಕನಸು ಕಂಡಿದ್ದ ಖ್ಯಾತ ಸಮಾಜವಾದಿ ನಾಯಕರಾದ ರಾಮಮನೋಹರ ಲೋಹಿಯಾರವರ ಜನ್ಮದಿನವೂ ಆಗಿರುವುದರಿಂದ ಹಾಗೂ ಭಗತ್‌ಸಿಂಗ್ ಮತ್ತು ಲೋಹಿಯಾರ ಆಶಯಗಳಲ್ಲಿ ಹಲವು ಸಮಾನತೆಗಳಿರುವುದರಿಂದ ಅವೆರಡನ್ನೂ ಒಟ್ಟಿಗೇ ಆಚರಿಸಲು ಕೆಲವರು ಮುಂದಾಗಿದ್ದಾರೆ. ಈ ಪ್ರಕ್ರಿಯೆಯಲ್ಲಿ ಹೋರಾಟದ ಕಣದಲ್ಲಿರುವ ಮಾರ್ಕ್ಸ್‌ವಾದಿಗಳು ಮತ್ತು ಲೋಹಿಯಾವಾದಿಗಳು ಜೊತೆಗೂಡಿಯೇ ಉತ್ತರ ಕರ್ನಾಟಕದಲ್ಲಿ ಹಲವು ಕಾರ್ಯಕ್ರಮಗಳನ್ನು ಸಂಘಟಿಸಿದ್ದಾರೆ.



- ಶಿವಸುಂದರ್ -

ಆದರೆ ಕಂಫರ್ಟ್ ಜೋನಿನಲ್ಲಿರುವ ಕೆಲವು ಸಮಾಜವಾದಿ ಪಂಡಿತರು ಮಾತ್ರ ಆ ಬಗೆಯ ಯಾವ ಕ್ರಿಯೆಯಲ್ಲೂ ಭಾಗವಹಿಸುವುದಿಲ್ಲ, ಬದಲಿಗೆ ಎಲ್ಲಾ ಪ್ರಗತಿಪರ ಸಂಘಟನೆಗಳ ಶಕ್ತಿ ಪ್ರತಿಗಾಮಿ ಶಕ್ತಿಗಳೆದುರು ಕುಸಿದು ಹೋಗುತ್ತಿರುವ ಹೊತ್ತಿನಲ್ಲಿ ಅದರ ಕಸುವನ್ನು ಹೆಚ್ಚಿಸುವುದು ಹೇಗೆ ಎಂಬ ಬಗ್ಗೆಯೂ ಗಂಭೀರವಾಗಿ ಬದ್ಧತೆಯಿಂದಲೂ ಚಿಂತಿಸುವುದಿಲ್ಲ. ಬದಲಿಗೆ ಉದ್ದಕ್ಕೂ, ಈ ಎಲ್ಲಾ ಪ್ರಯತ್ನಗಳನ್ನು ಪ್ರಭುತ್ವದ ಕಣ್ಣಿನಿಂದಲೇ ನೋಡುತ್ತಾರೆ. ಹೀಗಾಗಿ ಅಂತಿಮವಾಗಿ ಅವರ ಎಲ್ಲಾ ಕ್ರಿಯೆ ಮತ್ತು ನಿಷ್ಕ್ರಿಯೆಗಳು ಪ್ರಗತಿಪರತೆಯ ಸಂಘಟನೆಗೆ ಇಂಬುಗೊಡದೆ, ಉಳ್ಳವರ ಹಿತ ಕಾಯುವ ಪ್ರಭುತ್ವ ಮತ್ತಷ್ಟು ಕ್ರೂರಿಯಾಗಲೂ ಮಾತ್ರ ಸಹಕಾರಿಯಾಗಿದೆ. ಕಂಫರ್ಟ್ ಜೋನಿನಲ್ಲಿರುವ ಕರ್ನಾಟಕದ ಕೆಲವು ಸಮಾಜವಾದಿಗಳೆನಿಸಿಕೊಂಡವರು ಇತಿಹಾಸದುದ್ದಕ್ಕೂ ವಹಿಸಿರುವ ಪಾತ್ರ ಇದೇ. ಆದರೆ ಅವರೇ ಆರಾಧಿಸುವ ಲೋಹಿಯಾ ನಂತರ ಸಮಾಜವಾದಿ ಚಳವಳಿಯ ಐಕಾನ್ ಆಗಿದ್ದ ಕಿಷನ್ ಪಟ್ನಾಯಕರು ಮಾತ್ರ ಜಾಗತೀಕರಣದ ಮತ್ತು ಕೋಮುವಾದಿ ಫ್ಯಾಸೀಕರಣದ ವಿರುದ್ಧ ಹೋರಾಟದಲ್ಲಿ ಈ ಬಗೆಯ ಸಂಕುಚಿತವಾದಕ್ಕೆ ವಿರುದ್ಧವಾಗಿದ್ದರು.

ಅಂತಹ ಒಂದು ಪ್ರಕ್ರಿಯೆಗೆ ನಾನೇ ಸಾಕ್ಷಿಯೂ ಆಗಿದ್ದೆ. 2004 ರಲ್ಲಿ WSF ಎಂಬ ಹೆಸರಲ್ಲಿ ಜಾಗತೀಕರಣ ವಿರೋಧಿ ಹೋರಾಟಗಳನ್ನೆಲ್ಲ ನುಂಗಲು ಹೊರಟಿದ್ದ ಸಾಮ್ರಾಜ್ಯಶಾಹಿ ಸಂಚಿನ ವಿರುದ್ಧ ಮುಂಬೈನಲ್ಲಿ ಗಾಂಧಿವಾದಿಗಳು, ಸಮಾಜವಾದಿಗಳು ಮತ್ತು ತೀವ್ರ ಎಡಪಂಥೀಯ ವಾದಿಗಳು MR-2004 ಎಂಬ ಪ್ರತಿರೋಧವನ್ನು ಕಟ್ಟಿದ್ದರು. ಅದರ ಹಿಂದಿನ ಎಲ್ಲಾ ತರ್ಕಗಳನ್ನು ಕಿಶನ್ ಪಟ್ನಾಯಕ್ ಅವರು ಒಪ್ಪದಿದ್ದರೂ ಅದು ಮೂಡಿಸುವ ಎಚ್ಚರಕ್ಕೆ ಯಾವುದೇ ಮಡಿವಂತಿಕೆ ತೋರದೆ ಬೆಂಬಲ ಸೂಚಿಸಿದ್ದರು ಹಾಗೂ ಭಾಗವಹಿಸಿದ್ದರು. ಹಾಗೆ ನೋಡಿದರಲ್ಲಿ ಕಿಶನ್ ಪಟ್ನಾಯಕರು ಜಾಗತೀಕರಣ ವಿರೋಧಿ ಹೋರಾಟದಲ್ಲಿ ಹೊಸ ಸ್ನೇಹಿತರ ಅನ್ವೇಷಣೆಯಲ್ಲಿದ್ದರು. ಯಾಕೆಂದರೆ ಅವರ ಬಹುಪಾಲು ಹಳೆಯ ಸ್ನೇಹಿತರು ಜಾಗತೀಕರಣದ ಭರಾಟೆಯಲ್ಲಿ ಕೊಚ್ಚಿಹೋಗಿದ್ದರು ಅಥವಾ ಅದಕ್ಕೆ ಸಿದ್ಧರಾಗಿದ್ದರು!



ಇಷ್ಟೆಲ್ಲಾ ಏಕೆ ಹೇಳಬೇಕಾಯಿತೆಂದರೆ ಲೋಹಿಯಾ, ಗಾಂಧಿ ಮತ್ತು ಮಾರ್ಕ್ಸ್‌ವಾದಿ ಚಿಂತನೆ ಉಳ್ಳ ಹಾಗೂ ಹಲವಾರು ವರ್ಷಗಳಿಂದ ಬೀದಿಗಿಳಿದು ಹೋರಾಟವನ್ನು ನಡೆಸುತ್ತಿರುವ ಸಮಾಜವಾದಿ ಚಿಂತನಾ ವೇದಿಕೆ, ಕರ್ನಾಟಕ ಸೌಹಾರ್ದ ವೇದಿಕೆ, ಭೂಮಿ ಬೇಕು-ರೈತ ಆಂದೋಲನ ಸಮಿತಿ ಸಂಘಟನೆಗಳು ಇದೇ ಮಾರ್ಚ್ 23ರಂದು ಗೋಕಾಕ್‌ನಲ್ಲಿ ಭಗತ್ ಸಿಂಗ್ ಮತ್ತು ಲೋಹಿಯಾ ಚಿಂತನೆಗಳ ಸಮಾವೇಶವನ್ನು ಏರ್ಪಡಿಸಿದ್ದರು. ಅದರ ಸಂಘಟಕರಲ್ಲೂ ಲೋಹಿಯಾವಾದಿ ಹಾಗೂ ಮಾರ್ಕ್ಸ್‌ವಾದಿಗಳಿದ್ದರು. ಭಾಷಣಕಾರರಲ್ಲೂ ಇದ್ದರು. ಕರಪತ್ರ ಇನ್ನಿತ್ಯಾದಿ ಪ್ರಚಾರ ಸಾಮಗ್ರಿಗಳಲ್ಲಿ ವ್ಯಕ್ತವಾದ ಆಶಯಗಳಲ್ಲೂ ಸಹ ಈ ಐಕ್ಯ ಹೋರಾಟದ ತುಡಿತ ಸ್ಪಷ್ಟವಾಗಿ ವ್ಯಕ್ತವಾಗಿತ್ತು. ಇದನ್ನು ಕಾಣಲಾಗದ ಕಂಫರ್ಟ್ ಜೋನಿನ ಸಮಾಜವಾದಿ ಗಾವಿಲರಾದ ಡಿ.ಎಸ್. ನಾಗಭೂಷಣರವರು ಈ ಪ್ರಯತ್ನ ಸಮಾಜವಾದಿ ಚಳವಳಿಗೇ ಬಂದೊದಗಿರುವ ಅತ್ಯಂತ ದೊಡ್ಡ ಗಂಡಾಂತರವೆಂದು ಲೊಚಗುಟ್ಟಿದ್ದಾರೆ.

ಗೋಕಾಕ್‌ನಲ್ಲಿ ಇತ್ತೀಚಿನ ವರ್ಷಗಳಲ್ಲಿ ಧಾರ್ಮಿಕ ಮತ್ತು ಪುಢಾರಿ ರಾಜಕಾರಣದ ಸಭೆಗಳನ್ನು ಬಿಟ್ಟರೆ ಜನರ ಬದುಕು ಮತ್ತು ಭವಿಷ್ಯದ ಗಂಭೀರ ಚಿಂತನೆ ನಡೆಸಿದ ಮೊಟ್ಟ ಮೊದಲ ಸಭೆ ಇದಾಗಿತ್ತು. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಸಂಘ ಪರಿವಾರದ ಫ್ಯಾಸಿಸ್ಟ್ ಶಕ್ತಿಗಳು ದುಡಿಯುವ ಜನರನ್ನು ಒಡೆಯುತ್ತಾ ವಿಶ್ವಾಸ ವಿಧ್ವಂಸ ನಡೆಸುತ್ತಿರುವಾಗ ಈ ಭಾಗದಲ್ಲಿ ಈ ವರೆಗೂ ಕಂಫರ್ಟ್ ಜೋನಿನಲ್ಲಿರುವ ಯಾವ ಶಕುನದ ಹಕ್ಕಿಗಳೂ ಯಾವುದೇ ಪರ್ಯಾಯ ಕಾರ್ಯಕ್ರಮವನ್ನೂ ರೂಪಿಸಿರಲಿಲ್ಲ. ಗೋಕಾಕ್‌ನಲ್ಲಿ ಸಹಾ ಇತ್ತೀಚೆಗಷ್ಟೆ ಹಿಂದೂ ಸಮಾಜೋತ್ಸವವೆಂಬ ಸಮಾಜದ್ರೋಹಿ ಸಮ್ಮೇಳನ ನಡೆದಿದ್ದು ಅಲ್ಲಿ ಈ ಬಗೆಯ ಸಭೆ ನಡೆಸಲು ಸೈದ್ಧಾಂತಿಕ ಮಡಿವಂತಿಕೆಯನ್ನು ಮೀರಿದ ಜನಪರ ಕಾಳಜಿ, ಬೌದ್ಧಿಕ ಜ್ಞಾನಕ್ಕಿಂತ ಮಿಗಿಲಾದ ತ್ಯಾಗ ಮತ್ತು ಧೈರ್ಯವಂತಿಕೆ ಬೇಕಿತ್ತು. ಗೋಕಾಕ್‌ನಲ್ಲಿ ಈ ಕಾರ್ಯಕ್ರಮ ಸಂಘಟಿಸಿದ ಸಂಘಟಕರು ಈ ಎಲ್ಲಾ ಬದ್ಧತೆಗಳನ್ನು ಮೈಹೊತ್ತಿ ಕೊಂಡು ಇಡೀ ಉತ್ತರ ಕರ್ನಾಟಕದಲ್ಲಿ ವಿಚಾರ ಜಾಗೃತಿ ಮೂಡಿಸುತ್ತಿದ್ದಾರೆ.



ಈ ಕಾರ್ಯಕ್ರಮದ ಸಂಘಟಕರಲ್ಲಿ ಒಬ್ಬರಾದ ಖ್ಯಾತ ಚಿಂತಕ ಹಾಗೂ ಪತ್ರಕರ್ತರಾದ ಬಸವರಾಜ ಸೂಳಿಬಾವಿಯವರನ್ನು ಎಲ್ಲಾ ಗಣ್ಯಮಾನ್ಯ ಲೋಹಿಯಾವಾದಿಗಳೂ ಮತ್ತು ಮಾರ್ಕ್ಸ್‌ವಾದಿಗಳೂ ಒಟ್ಟು ಸೇರಿ ಬಂಡಾಯ ಸಾಹಿತ್ಯ ಸಂಘಟನೆಯ ಸಂಚಾಲಕರನ್ನಾಗಿ ಆಯ್ಕೆ ಮಾಡಿದ್ದರು. ಈಗ ಅವರನ್ನು ಮತ್ತು ಅವರ ಸ್ನೇಹಿತರನ್ನು ನಾಗಭೂಷಣರು ಭೂಗತ ಕಮ್ಯುನಿಸ್ಟರ ಲೆಕ್ಕಕ್ಕೆ ಸೇರಿಸುತ್ತಿದ್ದಾರೆ. ಅತ್ಯಂತ ಕಾಳಜಿಯಿಂದ ನಡೆಸಿದ ಕಾರ್ಯಕ್ರಮವನ್ನು ಕುತಂತ್ರದ ಲೆಕ್ಕಕ್ಕೆ ಸೇರಿಸುತ್ತಿದ್ದಾರೆ. ಅಷ್ಟು ಮಾತ್ರವಲ್ಲದೆ, ಕಾರ್ಯತಂತ್ರವಿರುವುದೇ ಕುತಂತ್ರವೆಂಬಂತೆ ಭೂಗತರಾಗುವುದೇ ಅಪರಾಧವೆಂಬಂತೆ, ಕಮ್ಯುನಿಸ್ಟ್ ಸಿದ್ಧಾಂತವೇ ಕ್ರಿಮಿನಲ್ ಕ್ರಿಯೆ ಎಂಬಂತೆ ಚಿತ್ರಿಸುತ್ತಿದ್ದಾರೆ. ತುರ್ತು ಪರಿಸ್ಥಿತಿಯಲ್ಲಿ ಎಷ್ಟು ಜನ ಲೋಹಿಯಾ ವಾದಿಗಳು ಭೂಗತರಾಗಲಿಲ್ಲ? ವಂಶ ಪಾರಂಪರ್ಯ ಪ್ರಜಾತಂತ್ರವಿರೋಧಿ ರಾಜಕಾರಣವನ್ನು ಸೋಲಿಸಲು ಲೋಹಿಯಾರವರು ರಾಜಕೀಯ ಕಾರ್ಯತಂತ್ರಗಳನ್ನು ಬಳಸಲಿಲ್ಲವೇ? ಕಾರ್ಯತಂತ್ರ ಭೂಗತವಾಗಿರಲಿ ಅಥವಾ ಐಕ್ಯ ರಂಗವೇ ಆಗಿರಲಿ, ಮುಖ್ಯವಾಗ ಬೇಕಾಗಿರುವುದು ಅದು ತತ್ವಬದ್ಧವೋ, ಪ್ರಗತಿಗೆ ಪೂರಕವೋ ಎಂಬುದು ತಾನೇ?

ಅಂದು ಗೋಕಾಕ್‌ನಲ್ಲಿ ನಡೆದ ಸಭೆಯಲ್ಲಿ ಹಿರಿಯ ಗಾಂಧೀವಾದಿಗಳಾದ ಕೋ. ಚೆನ್ನಬಸಪ್ಪನವರು, ಹಿರಿಯ ಮಾರ್ಕ್ಸ್‌ವಾದಿ ಚಿಂತಕ ಡಾ. ಜಿ. ರಾಮಕೃಷ್ಣರವರು, ಲೋಹಿಯಾ ಮತ್ತು ಮಾರ್ಕ್ಸ್ ಇಬ್ಬರ ಬಗ್ಗೆಯೂ ಸಮನ್ವಯ ಭಾವವನ್ನೇ ಇಟ್ಟುಕೊಂಡಿರುವ ಕವಯತ್ರಿ ಡಾ. ವಿನಯಾ ಮತ್ತು ರಾಷ್ಟ್ರ ಪ್ರಶಸ್ತಿ ವಿಜೇತ ಯುವ ಚಿತ್ರನಿರ್ದೇಶಕ ಕೇಸರಿ ಹರವೂ ಮತ್ತು ನಾನು ಭಾಗವಹಿಸಿದ್ದೆವು. ಹಿರಿಯರಾದ ಚೆನ್ನಬಸಪ್ಪ ಮತ್ತು ರಾಮಕೃಷ್ಣರವರು ಯಾವುದೇ ಭಿಡೆಯಿಲ್ಲದೆ ಸಂಘಪರಿವಾರದ ಹುನ್ನಾರಗಳನ್ನು ತರಾಟೆಗೆ ತೆಗೆದುಕೊಂಡರು ಮತ್ತು ಐಕ್ಯ ಹೋರಾಟದ ಅಗತ್ಯದ ಬಗ್ಗೆ ಮಾತಾಡಿದರು.

ಕಿಷನ್ ಪಟ್ನಾಯಕರಂತೆ ಈ ಇಳಿವಯಸ್ಸಿನಲ್ಲೂ ಈ ಹಿರಿಯರು ಸಹಾ ಜಾಗೃತಿಗಾಗಿ ಕ್ರಿಯೆಯಲ್ಲಿ ತೊಡಗಿಕೊಂಡಿದ್ದಾರೆ. ಕಿಷನ್ ಪಟ್ನಾಯಕರಂತೆ ಇವರೂ ಸಹಾ ಶುಷ್ಕ ಪಾಂಡಿತ್ಯಗಳನ್ನು ಮೀರಿದ ಮಾನವೀಯತೆ ಮತ್ತು ಸಿದ್ಧಾಂತಕ್ಕೆ ಬದ್ಧರಾದ ಐಕ್ಯ ಕಾರ್ಯಾಚರಣೆಯ ಬಗ್ಗೆ ವಿಶ್ವಾಸ ಹೊಂದಿದ್ದಾರೆ. ಹೀಗಾಗಿ ಅವರಿಗೆ ಈ ಕಾರ್ಯಕ್ರಮದಲ್ಲಿ ಯಾವ ಕುತಂತ್ರವೂ ಕಂಡಿಲ್ಲ. ಅಪಾಯವೂ ಕಂಡಿಲ್ಲ. ಆದರೆ ನಾಗಭೂಷಣರಿಗೆ ಮಾತ್ರ ಇದು ಅಪಾಯ ಏಕೆನಿಸುತ್ತಿದೆ ಎಂಬುದನ್ನು ಅವರ ಸ್ವ-ವಿಮರ್ಶೆಗೆ ಬಿಟ್ಟುಬಿಡೋಣ.

ಸಮಾನ ದುಃಖಿಗಳು ಸಮಾನ ಶತ್ರುವಿನ ವಿರುದ್ಧ ಐಕ್ಯರಂಗಕ್ಕೆ ಮುಂದಾಗದಂತೆ ನೋಡಿಕೊಂಡಿರುವುದೇ ಪ್ರಭುತ್ವದ ಮತ್ತು ಪ್ರತಿಗಾಮಿ ಶಕ್ತಿಗಳ ವಿಜಯವನ್ನು ಸೂಚಿಸುತ್ತದೆ.

ಭಗತ್ ಸಿಂಗ್ ತನ್ನ 23ನೇ ವಯಸ್ಸಿನಲ್ಲೇ ಪರಿಪೂರ್ಣ ಮಾರ್ಕ್ಸ್‌ವಾದಿಯಾಗಿದ್ದನೋ ಇಲ್ಲವೋ ಎಂಬ ಮತ್ತೊಂದು ಜಿಜ್ಞಾಸೆಯನ್ನು ಮಾನ್ಯ ಸಮಾಜವಾದಿ ಚಿಂತಕರಾದ ಡಿ.ಎಸ್. ನಾಗಭೂಷಣರವರು ಎತ್ತಿದ್ದಾರೆ.

ಬದುಕು ಮತ್ತು ಸಮಾಜವನ್ನು ಚಲನಶೀಲವೆಂದು ಅರ್ಥ ಮಾಡಿಕೊಳ್ಳುವ ಯಾವ ಮಾರ್ಕ್ಸ್‌ವಾದಿಯೂ ಸ್ವತಃ ಮಾರ್ಕ್ಸ್ ಕೂಡಾ ಪರಿಪೂರ್ಣತೆಯ ಕ್ಲೈಮನ್ನು ಮಾಡುವುದಿಲ್ಲ. ಆದರೆ ಅಂದಿನ ಯುಗಮಾನಕ್ಕೆ ಅತ್ಯಂತ ಕ್ರಾಂತಿಕಾರಿಯಾದ — ಅಂದರೆ ಬಾಂಬು ಬಂದೂಕಲ್ಲ — ಬದಲಿಗೆ ಅಂದಿನ ಕಾಲಘಟ್ಟದಲ್ಲಿ ನಿಜವಾದ ವಿಮೋಚನೆಯೆಡೆಗೆ ಕೊಂಡೊಯ್ಯಬಹುದಾದ ಚಿಂತನೆಗಳನ್ನು ಭಗತ್ ಸಿಂಗ್ ಹೊಂದಿದ್ದ. ಅದು ಸ್ವಾತಂತ್ರ್ಯಾನಂತರವೂ ಪ್ರಭುತ್ವವನ್ನು ಭೂಮಾಲಿಕರು ಮತ್ತು ಬಂಡವಾಳಶಾಹಿಗಳೆ ನಿಯಂತ್ರಿಸಬಹುದಾದ ಸ್ವಾತಂತ್ರ್ಯ ನಿಜವಾದ ಸ್ವಾತಂತ್ರ್ಯವೇ ಅಲ್ಲ ಎನ್ನುವ ಸೈದ್ಧಾಂತಿಕ ಗ್ರಹಿಕೆ. ಭಗತ್‌ಸಿಂಗನ ಈ ತಿಳಿವಳಿಕೆಯೇ ನವ ವಸಾಹತುಶಾಹಿಯ ಈ ಕಾಲಘಟ್ಟದಲ್ಲಿ ಇನ್ನೂ ಹೆಚ್ಚಿನ ಅಗತ್ಯವಿದೆ. ಕಿಷನ್ ಪಟ್ನಾಯಕರಿಗೂ, ಮೇಧಾ ಪಾಟ್ಕರ್‌ರಿಗೂ, ಅರುಂಧತಿ ರಾಯರಿಗೂ ಅಂದರೆ ಚಳವಳಿಯಲ್ಲಿ ಬೆರೆತಿರುವ ಆಚರಣಾಶೀಲ ಸಮಾಜವಾದಿಗಳೆಲ್ಲರಿಗೂ ಈ ಸತ್ಯ ಅರಿವಾಗಿದೆ. ಆದರೆ ರಾಜಕೀಯ ಪ್ರಬುದ್ಧತೆಯನ್ನು ಕೇವಲ ವಯಸ್ಸಿನ ಹಿರಿತನದೊಂದಿಗೆ ಸಮೀಕರಿಸಿ ಅರ್ಥಮಾಡಿಕೊಳ್ಳುವ ನಾಗಭೂಷಣರ ಸಮಾಜವಾದಿ ತಿಳಿವಳಿಕೆ ಮಾತ್ರ ರಾಜಕೀಯ ಶೈಶವದಲ್ಲೇ ಉಳಿದುಬಿಟ್ಟಿರುವುದು ದುರಂತ.

ಆದ್ದರಿಂದಲೇ ಕಳೆದ 60 ವರ್ಷಗಳಲ್ಲಿ ಪ್ರಭುತ್ವದ ವಿರುದ್ಧದ ಹೋರಾಟಗಳಲ್ಲಿ "ಸೆರೆಮನೆ, ಗುದ್ದಲಿ ಮತ್ತು ಓಟುಗಳು" ವಿಮೋಚನೆ ನೀಡಲು ವಿಫಲವಾಗಿರುವಾಗ ಹೊಸ ದಾರಿಯ ಅನ್ವೇಷಣೆಯನ್ನು ಎಲ್ಲಾ ನೈಜ ಸಮಾಜವಾದಿಗಳೂ ನಡೆಸಿದ್ದಾರೆ. ಈ ನಿಟ್ಟಿನ ಪ್ರಯತ್ನಗಳ ಪ್ರಾರಂಭಕ್ಕೆ ಈಗಾಗಲೇ ತಡವಾಗಿದೆ. ಅದಕ್ಕೆ ಪ್ರತಿಯಾಗಿ ಕಂಫರ್ಟ್ ಜೋನಿನಲ್ಲಿರುವವರು ಮಾತ್ರ ಅದ್ಯಾವುದೇ ಸಿದ್ಧಾಂತವಾದಿಗಳಾಗಿದ್ದರೂ ಅವೆಲ್ಲವನ್ನೂ ಮರೆಸುವಷ್ಟು ಆಪ್ತಮಿತ್ರರಾಗಿಬಿಟ್ಟಿದ್ದಾರೆ. ಇದು ಇಂದಿನ ಸಂದರ್ಭ.


ಈ ಸಂಕ್ರಮಣ ಸಂದರ್ಭದಲ್ಲಿ ಹೊಸ ಸ್ನೇಹಿತರು, ಹೊಸ ಐಕ್ಯ ರಂಗ, ಸಮಾನ ಆಶಯದೆಡೆ ಬದ್ಧತೆ ಇವುಗಳು ಚಳವಳಿಯನ್ನು ಮುನ್ನಡೆಸಬೇಕಾಗಿದೆ. ಅದಕ್ಕೆ ಅಡ್ಡಿಯಾಗುವ ಮಡಿವಂತಿಕೆ ಅದು ಸಮಾಜವಾದಿ ಬ್ರಾಂಡಿನದೇ ಆಗಿದ್ದರೂ ಮೂಲಭೂತವಾದದಂತೆ ಪ್ರತಿಗಾಮಿಯಾಗಿಬಿಡುತ್ತದೆ. ಮಿಕ್ಕಿದ್ದು ಅವರವರ ಸ್ವ-ವಿಮರ್ಶೆಗೆ ಬಿಟ್ಟ ವಿಷಯ.

No Comments



"ಹಿಂದಿಯಂತೆ ಕನ್ನಡದ ಶ್ರೇಷ್ಠ ಸಾಹಿತಿಗಳು ಚಿತ್ರರಂಗಕ್ಕೆ ಬಂದರೆ ಕನ್ನಡ ಚಿತ್ರರಂಗದ ಭವಿಷ್ಯ ಇನ್ನಷ್ಟು ಉಜ್ವಲವಾಗಲಿದೆ."

- ಜಯಂತ ಕಾಯ್ಕಿಣಿ



"ಕನ್ನಡ ಶಿಕ್ಷಕರಿಗೇ ಕನ್ನಡ ತಿಳಿಯದ ಸ್ಥಿತಿ ಇದೆ."

-ಜಿ. ವೆಂಕಟಸುಬ್ಬಯ್ಯ

"ಕ್ರಿಕೆಟಿನ ಬಗ್ಗೆ ಇಷ್ಟೆಲ್ಲಾ ಉನ್ಮಾದಗಳು ಉಂಟಾಗುತ್ತಿರುವುದು ಮಾಧ್ಯಮಗಳಿಂದ. ಇದರಿಂದ ಜನ ಭಾವೋನ್ಮತ್ತರಾಗಿದ್ದಾರೆ. ಇದಕ್ಕೆ ಆಟಗಾರರೂ ಕಾರಣ. ಅಭ್ಯಾಸ ಪಂದ್ಯಗಳಿಗಿಂತ ಹಣ ಬರುವ ಪಂದ್ಯಗಳಲ್ಲೇ ಅವರಿಗೆ ಆಸಕ್ತಿ."

- ಜಿ. ಆರ್. ವಿಶ್ವನಾಥ್

ನಂಬಿದ್ರೆ ನಂಬಿ ಬಿಟ್ರೆ ಬಿಡಿ



"ಕಾವೇರಿ ವಿಷಯವನ್ನು ಶೀಘ್ರವೇ ಬಗೆಹರಿಸುವ ನಿಟ್ಟಿನಲ್ಲಿ ಕೂಡಲೇ ತಮಿಳುನಾಡು ಮುಖ್ಯಮಂತ್ರಿಗಳೊಂದಿಗೆ ಚರ್ಚೆ ನಡೆಸಲಾಗುವುದು."

-ಎಚ್. ಡಿ. ಕುಮಾರಸ್ವಾಮಿ




"ಗಾಂಧಿ ಕುಟುಂಬದ ಯಾರಾದರೂ ಅಂದು ಅಧಿಕಾರದಲ್ಲಿದ್ದಿದ್ದರೆ ಖಂಡಿತಾ ಬಾಬ್ರಿ ಮಸೀದಿ ಒಡೆಯಲು ಬಿಡುತ್ತಿರಲಿಲ್ಲ."

- ರಾಹುಲ್ ಗಾಂಧಿ

"ಅನಿಸುತಿದೆ ಏಕೋ ಇಂದು... ಗೀತೆ ನನ್ನ ಬದುಕಿಗೆ ಹೊಸ ತಿರುವು ಕೊಟ್ಟಿದೆ"

- ಜಯಂತ ಕಾಯ್ಕಿಣಿ

ವಾರದ ಅಪಮಾನ



"ನಂದಿಗ್ರಾಮದಲ್ಲಿ ಏನೇ ನಡೆದಿದ್ದರೂ ನಾವು ಬುದ್ಧದೇವ ಭಟ್ಟಾಚಾರ್ಯರನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಾಯಿಸುವುದಿಲ್ಲ. ಅವರು ಪಶ್ಚಿಮ ಬಂಗಾಳದ ಜನರಿಂದ ಆಯ್ಕೆ ಆದವರು."

- ಪ್ರಕಾಶ್ ಕಾರಟ್

ವಾರದ ವಿವೇಕ

"ಭ್ರಾಂತಿ ಕಳೆಯದೇ ವಿವೇಕ ಮೂಡದು."


- ಎಬ್ಬಿನ್

ವಾರದ ಅನ್ಯಾಯ

"ಗೃಹ ಬಳಕೆ ಅಥವಾ ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲಿ ಹಣದ ಅವಶ್ಯಕತೆ ಉಂಟಾದಾಗ ಪತಿ ತನ್ನ ಪತ್ನಿಯ ಮನೆಯಿಂದ ಹಣ ಪಡೆದರೆ ಅದನ್ನು ವರದಕ್ಷಿಣೆ ಎಂದು ಅರ್ಥೈಸಲಾಗದು"

- ಸುಪ್ರೀಂಕೋರ್ಟಿನ ಇತ್ತೀಚಿನ ತೀರ್ಮಾನ.

ವಾರದ ಅವಿವೇಕ



"ಚಿಕ್ಕಂದಿನಿಂದ ಎಲ್ಲಾ ಮತಧರ್ಮಗಳು ಹೇಳುವುದು ಒಂದೇ ಎಂಬ ಅಭಿಪ್ರಾಯವನ್ನು ಮೂಡಿಸಲಾಗಿದೆ. ಹೀಗಾಗಿ ಇಸ್ಲಾಂನಲ್ಲಿರುವ ಕ್ರೌರ್ಯವನ್ನು ನಾವು ಅರ್ಥ ಮಾಡಿಕೊಳ್ಳುವ ಗೋಜಿಗೇ ಹೋಗಿಲ್ಲ."

- ಎಸ್. ಎಲ್. ಭೈರಪ್ಪ

ಕ್ರಿಕೆಟಿಗರು ಬಳೆ ತೊಡಲಿ ಎಂದವರಿಗೆ.....



ಕಂಡಹಾಗೆ

ಅಮೆರಿಕದಲ್ಲಿರುವ ಮಿತ್ರ ಹರಿ ಇ-ಮೇಲ್ ಮೂಲಕ ಕಳುಹಿಸಿರುವ ಭಾರತದ ಕ್ರಿಕೆಟ್ ತಂಡದ ಚಿತ್ರದೊಂದಿಗೆ ಈ ಬರಹ ಇದೆ.

ಕಾಮ್ರೆಡ್‌ಗಳಿಗೆ ಅಭಿನಂದನೆಗಳು.

ನೀವೆಲ್ಲ ಈ ಕಾರಣಗಳಿಗೆ ನಮ್ಮಲ್ಲಿ ಹೆಮ್ಮೆ ಮೂಡಿಸಿದ್ದೀರಿ:

1. ಬಂಡವಾಳಶಾಹಿಗಳ ಮೆರೆದಾಟವನ್ನು ಜಾಗ್ರತೆಯಿಂದ ಸಮಾಪ್ತಿಗೊಳಿಸಿದ್ದಕ್ಕೆ.

2. 'ಉದಾರೀಕರಣ'ದ ಜಪ ಮಾಡುತ್ತಿರುವ ಭಾರತದಲ್ಲಿ ಒಂದೇ ಏಟಿಗೆ 400 ಕೋಟಿ ರೂಪಾಯಿಗಳ ನಷ್ಟವನ್ನು ಉಂಟು ಮಾಡಿದ್ದಕ್ಕೆ.

3. ಬಂಡವಾಳಶಾಹಿಗಳ ಏಜೆಂಟರಂತಿರುವ ಐಟಿ, ಎನ್‌ಆರ್‌ಐಗಳ ಅಹಂ ಅನ್ನು ಟುಸ್ ಎನಿಸಿದ್ದಕ್ಕೆ.

4. ಭಾರತದ ಬಡ ಜನರ ಹುಚ್ಚನ್ನು ಬಿಡಿಸಿದ್ದಕ್ಕೆ.

ಆಗಲೇ ಭಾರತದ ಕ್ರಿಕೆಟ್ ತಂಡ ವಿಶ್ವಕಪ್ ಸ್ಪರ್ಧೆಯಿಂದ ಹೊರಬಿದ್ದಿದ್ದು-ಅಥವಾ ನಾಲಾಯಕ್



ಎಂದು ಹೊರದೂಡಲ್ಪಟ್ಟಿದ್ದು- ನನಗೆ ತುಂಬಾ ಸಂತೋಷ ತಂದಿತ್ತು. ನಾನೇನು ಕ್ರಿಕೆಟ್ ದ್ವೇಷಿ ಅಲ್ಲ, ಆದರೆ ಕ್ರಿಕೆಟ್ ಇವತ್ತು ಒಂದು ಕ್ರೀಡೆಯಾಗಿ ಉಳಿಯದೆ ಒಂದು ದೊಡ್ಡ ಪೀಡೆಯಾಗಿ ಬೆಳೆದಿರುವುದೇ ಅಸಮಾಧಾನಕ್ಕೆ ಕಾರಣ. ಕ್ರಿಕೆಟ್ ಆಟಗಾರರ ಅಹಂ, ಅವರನ್ನು ವೈಭವೀಕರಿಸುವ ಮಾಧ್ಯಮಗಳು, ಕೋಟ್ಯಂತರ ರೂಪಾಯಿಗಳನ್ನು ಚೆಲ್ಲಿ ಆಟಗಾರರನ್ನು ತಮ್ಮ ಕೈಗೊಂಬೆಗಳಂತೆ ಮಾಡಿಕೊಂಡಿರುವ ಬೃಹತ್ ಕಂಪನಿಗಳು, ಪ್ರತಿ ಬಾರಿ ತಮ್ಮ ಕೈಲಿದ್ದ ಹಣವನ್ನೆಲ್ಲ ಬಾಜಿ ಕಟ್ಟಿ ತಮ್ಮ ಜೀವನವನ್ನೇ ಬಲಿ ತೆಗೆದುಕೊಳ್ಳುವ ಅಮಾಯಕರು, ಹಣಕ್ಕೋಸ್ಕರ ತಮ್ಮನ್ನೇ ಮಾರಿಕೊಂಡು ಮ್ಯಾಚ್ ಫಿಕ್ಸಿಂಗ್‌ನಲ್ಲಿ ಮುಳುಗುವ ಆಟಗಾರರು... ಇದೆಲ್ಲಾ ಕ್ರಿಕೆಟ್ ಬಗ್ಗೆ ಹೇಸಿಗೆ ಹುಟ್ಟಿಸದೇ ಇರುತ್ತದೆಯೇ?

ಸಚಿನ್ ತೆಂಡೂಲ್ಕರ್‌ನನ್ನೇ ತೆಗೆದುಕೊಳ್ಳಿ. ಈತ ಕ್ರಿಕೆಟ್‌ನಲ್ಲಿ ಎಷ್ಟು ಪರಿಣಿತನೋ ಹಾಗೆಯೇ ಬೇರೆ ಕ್ರೀಡೆಗಳಲ್ಲೂ ಪರಿಣಿತರಿದ್ದಾರೆ. ಅಷ್ಟೇ ಅಲ್ಲ ಈತನಿಗಿಂತಲೂ ಹೆಚ್ಚು ನೈತಿಕತೆ, ಸಾಮಾಜಿಕ ಜವಾಬ್ದಾರಿಯನ್ನು ಹೊಂದಿರುವವರೂ ಇದ್ದಾರೆ. ಆದರೆ ಕ್ರಿಕೆಟ್ ಎಂಬ ಮೋಹಿನಿಯ ಮುಂದೆ ಬೇರೆಲ್ಲರೂ ನಗಣ್ಯರಾಗಿ ಸಚಿನ್ ತೆಂಡೂಲ್ಕರ್‌ನ ಸಾಧನೆಯೇ ಹೆಚ್ಚೆಂದು, ಆತನೇ ನಮ್ಮ ಯುವ ಜನರಿಗೆ ರೋಲ್ ಮಾಡೆಲ್ ಎಂದು ಬಿಂಬಿಸಲಾಗಿದೆ. ವರ್ಷಕ್ಕೆ 300 ಕೋಟಿ ರೂಪಾಯಿಗಳನ್ನು ದುಡಿದರೂ ತನ್ನ ವಿದೇಶಿ ಕಾರ್ ಮೇಲೆ ತೆರಿಗೆ ವಿನಾಯ್ತಿಯನ್ನು ಕೊಡಬೇಕೆಂದು ಸರ್ಕಾರಕ್ಕೆ ಅರ್ಜಿ ಸಲ್ಲಿಸುವ, ಅಪೇಕ್ಷಿಸಿದ್ದಷ್ಟೂ ರನ್‌ಗಳನ್ನು ಪಡೆಯಲಾಗದಿದ್ದಾಗ ಸರ್ಪದೋಷವಾಗಿದೆ ಎಂದು ಪೂಜೆ ಮಾಡಿಸುವ, ಕೋಟ್ಯಂತರ ರೂಪಾಯಿ ಪಡೆದು ಕೋಕಾಕೋಲಾದಂತಹ ವಿಷವನ್ನು ಯುವ ಜನತೆ ಕುಡಿಯುವಂತೆ ಪ್ರೋತ್ಸಾಹಿಸುವ ಸಚಿನ್ ತೆಂಡೂಲ್ಕರ್ ಅದು ಹೇಗೆ ರೋಲ್ ಮಾಡೆಲ್ ಆಗುತ್ತಾನೆ?

ಇದನ್ನೇ ಭಾರತದ ತಂಡದ ಪ್ರತಿಯೊಬ್ಬರ ಬಗ್ಗೆಯೂ ಹೇಳಬಹುದು. ಅಂದ ಹಾಗೆ, ತಂಡದ ಸದಸ್ಯರ ಬಗ್ಗೆ ಇರಲಿ, ಬಿಸಿಸಿಐ ಇಡೀ ತಂಡವನ್ನೇ ಖಾಸಗಿ ಸಂಸ್ಥೆಗೆ ಮಾರಿಕೊಂಡಿರುವಂತೆ ಕಾಣಿಸುತ್ತದೆ. ನೀವು ಗಮನಿಸಿದ್ದೀರಾ, ಇದೇ ವಿಶ್ವಕಪ್‌ನಲ್ಲಿ ಆಡುತ್ತಿರುವ ಇತರೆ ದೇಶದ ಕ್ರಿಕೆಟಿಗರ ಸಮವಸ್ತ್ರದ ಮೇಲೆ ಆ ದೇಶದ ಹೆಸರು ದೊಡ್ಡದಾಗಿದ್ದು ಅದರ ಪ್ರಾಯೋಜಕ ಸಂಸ್ಥೆಯ ಹೆಸರು ಯಾವುದೋ ಒಂದು ಮೂಲೆಯಲ್ಲಿರುತ್ತೆ, ಆದರೆ ನಮ್ಮ 'ಬಾಯ್ಸ್ ಇನ್ ಬ್ಲೂ' ಧರಿಸುವ ಸಮವಸ್ತ್ರ ನೋಡಿದರೆ ಅದು ಭಾರತ ದೇಶದ ತಂಡವೋ ಅಥವಾ ಸಹಾರಾ ಕಂಪನಿಯ ತಂಡವೋ ಎಂಬ ಗೊಂದಲ ಮೂಡಿಸುವಂತಿದೆ.

ಯಾವುದೇ ಕ್ರೀಡೆ ಅದನ್ನು ಆಡುವವರಲ್ಲಿ ಮತ್ತು ನೋಡಿ ಆನಂದಿಸುವವರಲ್ಲಿ ಕ್ರೀಡಾ ಮನೋಭಾವವನ್ನು ಬೆಳೆಸಬೇಕು. ಆದರೆ ಕ್ರಿಕೆಟ್ ಬಗ್ಗೆ ನಮ್ಮ ಜನರಲ್ಲಿ ಎಂತಹ ಭಾವನೆಗಳು ಹೆಚ್ಚಾಗುತ್ತಿವೆ ಎಂದು ಗಮನಿಸಿದರೆ ಶಾಕ್ ಆಗುತ್ತೆ. ಭಾರತದ ತಂಡ ಗೆಲ್ಲಲಿ ಎಂದು ನಡೆಸುವ ಹೋಮಗಳಿಗೆ, ಪೂಜೆಗಳಿಗೆ ಲೆಕ್ಕವಿದೆಯೇ? ಇದ್ಯಾವುದಕ್ಕಾದರೂ ಅರ್ಥವಿದೆಯೇ?

ಇನ್ನೊಂದು ಮುಖ್ಯವಾದ ಅಂಶ ಯಾವುದು ಗೊತ್ತಾ? ಅಕಸ್ಮಾತ್ ಪಾಕಿಸ್ತಾನ ಮತ್ತು ಆಸ್ಟ್ರೇಲಿಯಾದ ನಡುವೆ ನಿರ್ಣಾಯಕ ಪಂದ್ಯ ಏರ್ಪಟ್ಟರೆ, ಭಾರತೀಯ ಕ್ರಿಕೆಟ್ ಅಭಿಮಾನಿಗಳು ಏಷಿಯನ್ ಟೀಂ ಆದ ಪಾಕಿಸ್ತಾನದ ಬದಲಾಗಿ ಆಸ್ಟ್ರೇಲಿಯಾದವರೇ ಗೆಲ್ಲಲಿ ಎಂದು ಪ್ರಾರ್ಥಿಸುವುದು! ಆದರೆ ಅದೇ ಫುಟ್‌ಬಾಲ್ ಪಂದ್ಯದಲ್ಲಿ ಏನಾಗುತ್ತದೆ ನೋಡಿ. ಯೂರೋಪಿನ ಒಂದು ದೇಶದ ತಂಡ ಮತ್ತು ಲ್ಯಾಟಿನ್ ಅಮೆರಿಕಾದ ಒಂದು ದೇಶದ ತಂಡದ ನಡುವೆ ಅಂತಿಮ ಪಂದ್ಯ ಏರ್ಪಟ್ಟರೆ ಆಗ ಆಯಾ ಪ್ರದೇಶಗಳ ಜನರು ತಮ್ಮ ದೇಶದ ಗಡುವುಗಳನ್ನು ಮರೆತು ತಮ್ಮ ಹತ್ತಿರದ ತಂಡವನ್ನೇ ಬೆಂಬಲಿಸುತ್ತಾರೆ. ಇದ್ಯಾಕೆ ಭರತ ಖಂಡದ ಜನರಿಗೆ ಸಾಧ್ಯವಾಗುವುದಿಲ್ಲ? ಏಕೆಂದರೆ ಇವತ್ತು ಕ್ರಿಕೆಟ್ ಎಂಬ ಕ್ರೀಡೆಯನ್ನು ತಮ್ಮ ಕೋಮು ದ್ವೇಷ, ಜನಾಂಗೀಯ ದ್ವೇಷವನ್ನು ಸಾಧಿಸಿಕೊಳ್ಳುವ ಒಂದು ಸಾಧನೆಯನ್ನಾಗಿ ಪರಿವರ್ತಿಸಿರುವುದರಿಂದ. ಇಷ್ಟಾದ ಮೇಲೂ ಕ್ರಿಕೆಟ್ ಅನ್ನು ಒಂದು ಕ್ರೀಡೆ ಎಂದು ಆನಂದಿಸಲಾದೀತೆ?

ಮೊನ್ನೆ ಭಾರತ ಸೋತಿದ್ದರಿಂದ ಎಲ್ಲೆಲ್ಲೂ ಪ್ರತಿಭಟನೆಗಳಾದವು. ಅಂತಹ ಒಂದು ಪ್ರತಿಭಟನೆಯಲ್ಲಿ ಯಾವನೋ ಒಬ್ಬ ತಲೆ ಕೆಟ್ಟವನು "ಭಾರತದ ಕ್ರಿಕೆಟಿಗರು ಬಳೆ ತೊಡಲಿ" ಎಂದನಂತೆ. ಈ ಮಾತಿನಲ್ಲಿನ ಪುರುಷರ ಅಹಂ ಮನೋಭಾವವನ್ನು ಸದ್ಯಕ್ಕೆ ಪಕ್ಕಕ್ಕಿಟ್ಟು ನೋಡೋಣ.

ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾಗವಹಿಸುತ್ತಿರುವುದು ಕೇವಲ 16 ದೇಶಗಳ ತಂಡಗಳು; ಮಾತ್ರವಲ್ಲ, ಒಂದು ತಂಡದ ಮೇಲೆ ಜಯ ಸಾಧಿಸಿ, ಇನ್ನೆರಡು ತಂಡಗಳ ಮುಂದೆ ಶರಣಾಗಿ ಬಂದಿದ್ದಾರೆ ಭಾರತದ ಕ್ರಿಕೆಟ್ ತಂಡದ 15 ವೀರ ಪುರುಷರು!

ಇವರ ಘನಸಾಧನೆಗೆ ಹಲವು ಮಹಿಳಾ ಕ್ರೀಡಾಪಟುಗಳ ಸಾಧನೆಗಳನ್ನು ಹೋಲಿಸಿ ನೋಡಿ. 201 ದೇಶಗಳು ಭಾಗವಹಿಸಿದ್ದ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಅಂಜು ಬಾಬಿ ಜಾರ್ಜ್ ಕಂಚಿನ ಪದಕ ಗೆದ್ದಿದ್ದಳು. ಕರ್ಣಂ ಮಲ್ಲೇಶ್ವರಿ ಎಂಬ ಮತ್ತೋರ್ವ ಮಹಿಳೆ ಒಲಿಂಪಿಕ್ಸ್‌ನಲ್ಲಿ, ಏಷ್ಯಾಡ್‌ನಲ್ಲಿ ವರ್ಲ್ಡ್ ಚಾಂಪಿಯನ್‌ಶಿಪ್‌ನಲ್ಲಿ ಪದಕಗಳನ್ನು ಗೆದ್ದಿದ್ದಾಳೆ. ಈ ಮಹಿಳೆಯರಿಗೆ ರಾಹುಲ್ ದ್ರಾವಿಡ್‌ಗೆ ಸಿಗುವಷ್ಟು ಪ್ರಚಾರವೂ ಇಲ್ಲ, ಸಚಿನ್ ತೆಂಡೂಲ್ಕರ್ ಗಳಿಸುವಷ್ಟು ಹಣವೂ ಇಲ್ಲ, ದೋನಿಗೆ ಸಿಗುವಷ್ಟು ಪ್ರೋತ್ಸಾಹವೂ ಇಲ್ಲ. ಕ್ರಿಕೆಟಿಗರಂತೆ ಈ ಮಹಿಳೆಯರ್‍ಯಾರೂ 'ಬ್ರಾಂಡ್'ಗಳಾಗಿಲ್ಲ, ರೂಪದರ್ಶಿಗಳಾಗಿಲ್ಲ. ಆದರೆ ವೈಯಕ್ತಿಕವಾಗಿ, ದೇಶಕ್ಕಾಗಿ ತಮ್ಮ ಸಾಮರ್ಥ್ಯ, ಅಡಚಣೆಗಳನ್ನು ಮೀರಿ ಸಾಧಿಸಿದ್ದಾರೆ, ದೇಶಕ್ಕೆ ಹೆಮ್ಮೆ ತಂದಿದ್ದಾರೆ. ಈ ಮಹಿಳೆಯರ ಸಾಧನೆಯ ಮುಂದೆ ಎಲ್ಲಾ ಸೌಲಭ್ಯ, ಐಶ್ವರ್ಯ, ಬೆಂಬಲವಿದ್ದರೂ ಭಾರತದ ಕ್ರಿಕೆಟಿಗರು ಕಿಸಿದಿರುವುದು ಅಷ್ಟಕ್ಕಷ್ಟೇ!

ಯಾರಿಗೆ ಗೊತ್ತು ಮುಂದಿನ ಬಾರಿ ಸಚಿನ್, ರಾಹುಲ್, ದೋನಿ, ಇತ್ಯಾದಿಗಳು ನಿಜವಾಗಲೂ ಬಳೆ ತೊಟ್ಟರೆ ಮಾತ್ರ ಈ ಮಹಿಳೆಯರು ನಮಗೆ ತಂದಿರುವಷ್ಟು ಗೌರವವನ್ನು ಹೆಮ್ಮೆಯನ್ನು ತಂದುಕೊಟ್ಟಾರು!

ಅದೇನೆ ಇರಲಿ ಈ ಸೋಲಿನಿಂದಾಗಿ ಕ್ರಿಕೆಟ್ ಎಂಬ ಪೀಡೆ ಸೃಷ್ಟಿಸಿದ್ದ ಸಾಮೂಹಿಕ ಸನ್ನಿ ಕಡಿಮೆಯಾಗಿದ್ದಂತೂ ಸಂತೋಷದ ಸಂಗತಿಯೇ....

-ಗೌರಿ ಲಂಕೇಶ್



ಕಾವೇರಿ ವಿವಾದ-ಒಂದು ಸಂವಾದ

- ಕಾವೇರಿ ತೀರ್ಪನ್ನು ಏಕೆ ವಿರೋಧಿಸಬೇಕು?
- ಏನನ್ನು ವಿರೋಧಿಸಬೇಕು?
- ಕಾರ್ಯಸಾಧು ಪರಿಹಾರವೇನು?
- ಈ ನಿಟ್ಟಿನಲ್ಲಿ ಸರ್ಕಾರ ಹಾಗೂ ಜನತೆ ತತ್‌ಕ್ಷಣ ಮಾಡಬೇಕಾದುದೇನು?

ಈ ಎಲ್ಲಾ ಗಹನ ಹಾಗೂ ತುರ್ತು ವಿಷಯಗಳ ಬಗ್ಗೆ ಚರ್ಚಿಸಲು ಮತ್ತು ಮುಂದಿನ ಗೊತ್ತು-ಗುರಿಗಳ ಬಗ್ಗೆ ಪರಾಮರ್ಶೆ ನಡೆಸಲು ಲಂಕೇಶ್ ಬಳಗ ಒಂದು ಸಂವಾದ ಸಭೆಯನ್ನು ಏರ್ಪಡಿಸಿದೆ.

ನಿಮ್ಮೆಲ್ಲರಿಗೂ ಆತ್ಮೀಯ ಸ್ವಾಗತ

ಸಂವಾದಕ್ಕೆ ಪೂರಕ ಮಾಹಿತಿ-ವಿಶ್ಲೇಷಣೆ ಒದಗಿಸುವವರು
ಪ್ರೊ. ಎಚ್.ಎಲ್. ಕೇಶವಮೂರ್ತಿ
ಡಾ. ವಾಸು
ಶಿವಸುಂದರ್

ದಿನಾಂಕ: ಬುಧವಾರ, ಮಾರ್ಚ್ 28, 2007
ಸಮಯ: ಸಂಜೆ 5.30
ಸ್ಥಳ: 'ಲಂಕೇಶ್'
ನಂ. 9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು

ಕ್ರಿಕೆಟ್ ಬೆಟ್ಟಿಂಗ್

ಬೆಂಗಳೂರಿಗೆ ಸದ್ದಿಲ್ಲದೇ ಕಾಲಿಟ್ಟ ಕ್ರಿಕೆಟ್ ಬೆಟ್ಟಿಂಗ್ ಪಿಡುಗನ್ನು ತಂದವರ್ಯಾರು? ಅದರ ಆಳ ಎಂಥದ್ದು? ಎಷ್ಟು ಕೋಟಿಯ ಆಮದನಿಯ ದಂಧೆಯದು? ಇತ್ಯಾದಿ ಪ್ರಶ್ನೆ ಗಳನ್ನು ಕೆದಕುತ್ತಾ ಹೋದರೆ ಮೊದಲಿಗೆ ನೆನಪಾಗುವವರೇ; ಬೆಂಗಳೂರಿನ ಪ್ಯಾಲೇಸ್ ಆರ್ಚರ್ಡ್‌ನ ಮುದಿ ಬೆಟ್ಟರ್ ವಿಷ್ಣು ಸಹಾನಿ ಮತ್ತು ಶೇಷಾದ್ರಿಪುರದ ಹರಾಮಿ ನರಹರಿ!

ಮೊನ್ನೆ ಮಾರ್ಚ್ 24ರ ನಡುರಾತ್ರಿ ವಿಶ್ವಕಪ್‌ನ ಲೀಗ್ ಪಂದ್ಯಾವಳಿಯಲ್ಲಿ ಶ್ರೀಲಂಕಾ ವಿರುದ್ಧ ಭಾರತ ಸೋತಿದ್ದೇ ತಡ ಆಘಾತ ತಾಳದೇ ಹೈದರಾಬಾದಿನ ಪಿ. ರಾಜು ಎಂಬಾತ ಆತ್ಮಹತ್ಯೆ ಮಾಡಿಕೊಂಡನಲ್ಲ.

ಆತನ ಹೆಣದ ಮುಂದೆ ಕುಳಿತು ಆತನ ಪತ್ನಿ ಕವಿತಾ ಎದೆಬಡಿದುಕೊಳ್ಳುತ್ತಿರುವ ಚಿತ್ರವೊಂದನ್ನು ಪ್ರಜಾವಾಣಿ ಪ್ರಕಟಿಸಿತಲ್ಲ-


ಸಂಪತ್‌ಕುಮಾರ್

ನಿಜಕ್ಕೂ ಇದು ಕ್ರಿಕೆಟ್‌ನ ವ್ಯಾಮೋಹಕ್ಕೋ ಭಾರತದ ಮೇಲಿನ ಅಭಿಮಾನಕ್ಕೋ ನಡೆದ ಆತ್ಮಹತ್ಯೆ ಎಂದುಕೊಂಡಿದ್ದೀರಾ?

ತಪ್ಪುತಪ್ಪು! ಟೀಮ್ ಇಂಡಿಯಾದ ವೈಫಲ್ಯಕ್ಕಿಂತಲೂ ಹೈದರಾಬಾದಿನ ರಾಜುಗಾದ ದೊಡ್ಡ ಆಘಾತವೆಂದರೆ ಅದು ಕ್ರಿಕೆಟ್ ಬೆಟ್ಟಿಂಗ್‌ನಲ್ಲಾದ ಲುಕ್ಸಾನು!

ಶ್ರೀಲಂಕಾ ವಿರುದ್ಧ ಇಂಡಿಯಾ ಗೆದ್ದೇ ಗೆಲ್ಲುತ್ತದೆ ಮತ್ತು ಸೂಪರ್ ಎಂಟರ ಘಟ್ಟಕ್ಕೆ ಅದು ಬಂದೇ ತೀರುತ್ತದೆ ಎಂದು ಮನೆ ಮಠವನ್ನೇ ಅಡವಿಟ್ಟು ಲಕ್ಷಗಟ್ಟಲೇ ಬೆಟ್ಟಿಂಗ್ ಮಾಡಿದವನಿಗೆ ಆತ್ಮಹತ್ಯೆಯಲ್ಲದೇ ಇನ್ಯಾವ ಮಾರ್ಗ ವಿದ್ದೀತು?


ಯಾರ ಪುಣ್ಯವೋ ಏನೋ; ಸದ್ಯ ಬೆಂಗಳೂರಿನಲ್ಲಿ ಇಂಥದೊಂದು ಕ್ರಿಕೆಟ್ ಆತ್ಮಹತ್ಯೆ ನಡೆದಿಲ್ಲವಲ್ಲ!

ಅಂದಹಾಗೆ ಈ ಬಾರಿಯ ವಿಶ್ವಕಪ್ ಒಂದಕ್ಕೇ ಬೆಂಗಳೂರೊಂದರಲ್ಲೇ ಸರಿಸುಮಾರು ಮುನ್ನೂರು ಕೋಟಿಯ ಕ್ರಿಕೆಟ್ ಬೆಟ್ಟಿಂಗ್ ನಡೆದಿತ್ತೆಂದರೆ ನಂಬುತ್ತೀರಾ? ಶಿವಮೊಗ್ಗ, ದಾವಣಗೆರೆ, ಹುಬ್ಬಳ್ಳಿ, ಮೈಸೂರು, ಬೆಳಗಾವಿಗಳ ಪುಡಿ ಪುಡಿ ಕ್ರಿಕೆಟ್ ಬುಕ್ಕಿಗಳೆಲ್ಲ ಸೇರಿಬಿಟ್ಟರೆ ಕರ್ನಾಟಕವೊಂದರಲ್ಲೇ ಕ್ರಿಕೆಟ್ ಮೇಲೆ ಕಟ್ಟಿದ ಬಾಜಿಯ ಮೊತ್ತ ಹತ್ತಿರತ್ತಿರ ಐನೂರು ಕೋಟಿಯಾದೀತು!

ಎಂಥವರಿಗೂ ಇದು ಉತ್ಪ್ರೇಕ್ಷೆಯ ಲೆಕ್ಕಾಚಾರ ವೆನಿಸಬಹುದು. ಆದರೆ ಮುಂಬಯಿಯ ನಟೋರಿಯಸ್ ಕ್ರಿಕೆಟ್ ಬುಕ್ಕಿಗಳಾದ ಜಯಂತ್ ಪುರಿಯಾ ಮತ್ತು ಕಿರಣ್‌ಭಾಯಿ ಎಂಬಿಬ್ಬರ ಮಹಿಮಾಟನ್ನು ಬಲ್ಲ ಮುಂಬಯಿಯ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಕೊಟ್ಟ ಹೇಳಿಕೆಯಷ್ಟೆ.

ಹೀಗೆ ಮನೆ ಮಾರಿ, ಸಾಲ ತಂದು, ಕೂಡಿಟ್ಟದ್ದನ್ನೆಲ್ಲಾ ಕ್ರಿಕೆಟ್ ಬಾಜಿಗೆ ಸುರಿದವರೆಲ್ಲ ಮಾರ್ಚ್ ಇಪ್ಪತ್ನಾಲ್ಕರ ನಡುರಾತ್ರಿಯ ದುರಂತದ ನಂತರ ಎದೆಎದೆ ಚಚ್ಚಿಕೊಳ್ಳುತ್ತಿದ್ದಾರೆ. ಶ್ರೀಲಂಕಾ ವಿರುದ್ಧ ಇಂಡಿಯಾ ಹೀನಾಯವಾಗಿ ಸೋತ ದುಃಖಕ್ಕಿಂತಲೂ ಕಟ್ಟಿದ ಬೆಟ್ಟಿಂಗ್ ಮಣ್ಣು ಪಾಲಾದ ಆಘಾತವಿದೆಯಲ್ಲ ಅದು ಇನ್ನೂ ಭೀಕರ!

ಹಾಗಂಥ ಮುಂಬಯಿಯ ಕ್ರಿಕೆಟ್ ಬಾಜಿಕೋರರಾಗಲಿ ಅವರ ಬೆಂಗಳೂರಿನ ಏಜೆಂಟರಾಗಲಿ ಮುಳುಗಿಲ್ಲ. ಅವರದು ಹಬ್ಬದೂಟ. ಜನ ಬೀದಿಗೆ ಬಿದ್ದರೆ ತಾನೇ ಬೆಟ್ಟಿಂಗ್‌ಕೋರರು ಉದ್ಧಾರವಾಗೋದು?



ಶಿಬು

ಸದ್ಯ ಬೆಂಗಳೂರಿಗೆ ಸದ್ದಿಲ್ಲದೇ ಕಾಲಿಟ್ಟ ಕ್ರಿಕೆಟ್ ಬೆಟ್ಟಿಂಗ್ ಪಿಡುಗನ್ನು ತಂದವರ್ಯಾರು? ಅದರ ಆಳ ಎಂಥದ್ದು? ಎಷ್ಟು ಕೋಟಿಯ ಆಮದನಿಯ ದಂಧೆಯದು? ಇತ್ಯಾದಿ ಪ್ರಶ್ನೆಗಳನ್ನು ಕೆದಕುತ್ತಾ ಹೋದರೆ ಮೊದಲಿಗೆ ನೆನಪಾಗುವವರೇ ಬೆಂಗಳೂರಿನ ಪ್ಯಾಲೇಸ್ ಆರ್ಚರ್ಡ್‌ನ ಮುದಿ ಬೆಟ್ಟರ್ ವಿಷ್ಣು ಸಹಾನಿ ಮತ್ತು ಶೇಷಾದ್ರಿಪುರದ ಹರಾಮಿ ನರಹರಿ!

ಈ ಪೈಕಿ ನರಹರಿಯದು ಹೀನಾತಿಹೀನ ಹಿನ್ನೆಲೆಯೇ ಸರಿ. ಇಲ್ಲಿಗೆ ಹತ್ತು ವರ್ಷದ ಹಿಂದೆ ಮಲ್ಲೇಶ್ವರದ ಸಂಪಿಗೆ ಟಾಕೀಸ್ ಎದುರಿನ ಕಾರ್ಪೊರೇಷನ್ ಪಾರ್ಕಿನಲ್ಲಿ ತಿರುಬೋಕಿಯಂತೆ ಕೂತಿರುತ್ತಿದ್ದ ಈ ನರಹರಿ ಅಲ್ಲಿ ಲೀಲಾಜಾಲವಾಗಿ ನಡೆಸುತ್ತಿದ್ದದ್ದು ಮಟ್ಕಾ ದಂಧೆಯನ್ನು!

ದಿನವೊಂದಕ್ಕೆ ಕನಿಷ್ಠವೆಂದರೂ ಮುನ್ನೂರು ಮಂದಿ ಅಮಾಯಕರಿಗೆ ಮಟ್ಕಾ ದಂಧೆಯಿಂದಲೇ ಟೋಪಿ ಹಾಕುತ್ತಿದ್ದ ನರಹರಿಯನ್ನು ಯಾವತ್ತು ಸಿಸಿಬಿ ಪೊಲೀಸರು ಎಳೆದೊಯ್ದು ರಿಪೇರಿ ಮಾಡಿದರೋ, ಆವತ್ತೇ ಅವನು ಕಂಡು ಕೊಂಡದ್ದು 'ಕ್ರಿಕೆಟ್ ಬೆಟ್ಟಿಂಗ್' ಎಂಬ ಪ್ರೈಮರಿಯಂದೇ, ಬರೀ ಬಾಯಿಮಾತಿನಲ್ಲೇ ವ್ಯವಹಾರ ಕುದುರಿಸಿ ದಿನವೊಂದಕ್ಕೆ ಕೋಟಿಗಟ್ಟಲೇ ಹಣಗಳಿಸುವ ದಂಧೆಯನ್ನು!

ಇದಕ್ಕೆ ಸರಿಯಾಗಿ ಆತನಿಗೆ ಮುಂಬಯಿ ಕ್ರಿಕೆಟ್ ಮಾಫಿಯಾದ ಲಿಂಕು ಸಿಕ್ಕಿತ್ತು. ಮುಂಬಯಿಯ ಘಾಟ್ಕೋಪರ್‌ನ ಜಯಂತ್ ಪುರಿಯಾ ಮತ್ತು ಬಾಂದ್ರಾದ ಕಿರಣ್‌ಭಾಯಿ ಇಬ್ಬರೂ ದುಬೈ ಡಾನ್ ಛೋಟಾ ಶಕೀಲ್‌ನ ಗುಪ್ತ ಏಜಂಟರೆಂಬ ಬಗ್ಗೆ ಎರಡು ಮಾತಿಲ್ಲ. ಶುರುವಿನಲ್ಲಿ ಹವಾಲಾ ದಂಧೆಯಲ್ಲಿದ್ದ ಇವರಿಬ್ಬರನ್ನೂ ಬೆಂಗಳೂರಿನ ನರಹರಿಗೆ ಪರಿಚಯಿಸಿ ಕೊಟ್ಟವನು ಪ್ಯಾಲೇಸ್ ಆರ್ಚರ್ಡ್‌ನ ವೃದ್ಧ ಬೆಟ್ಟರು ವಿಷ್ಣು ಸಹಾನಿ. ಕ್ರಿಕೆಟ್ ಬಾಜಿಯಲ್ಲೇ ಕೋಟ್ಯಾಧಿಪತಿಯಾದ ವಿಷ್ಣು ಸಹಾನಿ ತಾನೇ ನೇರವಾಗಿ ಕ್ರಿಕೆಟ್ ಬೆಟ್ಟಿಂಗ್ ನಡೆಸದೇ ಅದನ್ನು ಚಿಕ್ಕಪೇಟೆಯ ಆರ್.ಟಿ. ಸ್ಟ್ರೀಟ್‌ನ ನಟೋರಿಯಸ್ ಮಾರ್ವಾಡಿ ಹರೀಶ್ ಜೈನ್ ಎಂಬಾತನ ಮೂಲಕ ನಡೆಸುತ್ತಾನೆ.



ರಾ. ಸೋಮನಾಥ್

ಈ ಹರೀಶ್ ಜೈನ್ ಪ್ರಾರಂಭದಲ್ಲಿ ಇದೇ ಆರ್.ಟಿ ಸ್ಟ್ರೀಟ್‌ನಲ್ಲಿ ತನ್ನದೊಂದು ಗೋಲ್ಡನ್ ಜ್ಯುವೆಲ್ಲರ್ಸ್ ಎಂಬ ದುಖಾನು ತೆರೆದಿದ್ದ. ಕ್ರಮೇಣ ಅದರ ಮಹಡಿಯ ಮೇಲೊಂದು ಇಸ್ಪೀಟ್ ಕ್ಲಬ್ಬು ತೆರೆದ. ಅದೂ ಆಯ್ದ ವ್ಯಕ್ತಿಗಳಷ್ಟೇ ಎಂಟ್ರಿ ಸಾಧ್ಯವಿದ್ದ ಭರ್ಜರಿ ಇಸ್ಪೀಟು ಅಡ್ಡೆ. ಅಲ್ಲಿಗೆ ಬರುತ್ತಿದ್ದ ಮಾರ್ವಾಡಿ ಜುಗಾರಿಗಳು ಮತ್ತು ಲಂಪಟ ಬಾಜಿಕೋರರಿಗೆಲ್ಲ ಕ್ರಿಕೆಟ್ ಬೆಟ್ಟಿಂಗ್‌ನ ಹುಚ್ಚು ಹಿಡಿಸಿದ ಹರೀಶ್ ಜೈನ್ ತನ್ನ ಹೊಸ ದಂಧೆಗೆ ಗಾಡ್‌ಫಾದರ್ ಆಗಿ ಆಯ್ದುಕೊಂಡಿದ್ದು ಮಾರ್ಕೆಟ್ ದೇವಿಯನ್ನು!

ಹೀಗೆ ವಿಸ್ತರಿಸಿದ ವಿಷ್ಣು ಸಹಾನಿ ಮತ್ತು ಹರೀಶ್ ಜೈನ್‌ನ ವಂಚಕ ಜಾಲಕ್ಕೆ ಕಾಲಕ್ರಮೇಣ ಗಾಂಧಿ ಬಜಾರ್‌ನ ಡಿವಿಜಿ ರಸ್ತೆಯ ಪೂಜಾ ಫ್ಯಾಷನ್ ಮಾಲೀಕ ಸಂಪತ್‌ರಾಜ್ ಜೈನ್, ವಿವೇಕ್‌ನಗರದ ದೌಲತ್ ರಾಮ್‌ನ ಮಗ ಜಗದೀಶ್ ಕುಮಾರ್, ರಾಜಾಜಿನಗರದ ಮುಲ್ಕ್‌ರಾಮ್‌ನ ಮಗ ವಿನೋದ್, ಶಿವಾಜಿನಗರದ ಗೋಕುಲ್‌ರಾಂನ ಮಗ ಶ್ಯಾಂಲಾಲ್, ಮತ್ತಿಕೆರೆಯ ಹರಿಹರ ಯಾದವ್‌ನ ಪುತ್ರ ರಾಂಸಿಂಗ್, ಸಾರಕ್ಕಿಯ ಚಿಕ್ಕಣ್ಣಯ್ಯನ ಮಗ ದೇವರಾಜ್ ಅವರುಗಳೆಲ್ಲ ನಾಮುಂದು-ತಾಮುಂದು ಎಂಬಂತೆ ಸದಸ್ಯರಾಗಿ ಬಿಟ್ಟರು.


ಅಲೋಕ್ ಕುಮಾರ್

ಸದರಿ ಖದೀಮ ಮಾರ್ವಾಡಿಗಳ ಮೋಸದ ಬಲೆಯಲ್ಲಿ ನುಸುಳಿದ ಪಾಪಿ ಕನ್ನಡಿಗರೆಂದರೆ ಸಾರಕ್ಕಿಯ ದೇವರಾಜ್ ಮತ್ತು ಮತ್ತಿಕೆರೆಯ ರಾಂಸಿಂಗ್ ಮಾತ್ರ!


ಬೆಟ್ಟಿಂಗ್ ದೊರೆ ನರಹರಿ

ಕ್ರಿಕೆಟ್ ಮ್ಯಾಚ್‌ಗಳ ಸೀಸನ್ನು ಶುರುವಾಗಿದ್ದೇ ನಗರದ ಐಶಾರಾಮಿ ಹೋಟೆಲ್ ಒಂದನ್ನು ಬಾಡಿಗೆಗೆ ಹಿಡಿದು ಟೀವಿ ಮುಂದೆ ಕೂತರೆಂದರೆ, ಅವರ ಮೊಬೈಲು, ಲ್ಯಾಂಡ್ ಫೋನುಗಳಿಗೆ ಬಿಡುವೇ ಇಲ್ಲ. ಇಂಡಿಯಾ-ಶ್ರೀಲಂಕಾ ಮ್ಯಾಚ್ ಶುರುವಾಗುತ್ತಿದ್ದಂತೆ ನಿರ್ದಿಷ್ಟ ಮೊಬೈಲ್‌ಗೆ ರಿಂಗ್ ಮಾಡಿ, ಇಂಥದ್ದೇ ಟೀಂ ಟಾಸ್ ಗೆಲ್ಲುತ್ತೆ ಎಂದು ಐದು ನಿಮಿಷಕ್ಕೆ ಮುನ್ನ ಒಂದು ಲಕ್ಷ ಎಂದು ಹೇಳಿಬಿಟ್ಟರೆ ಸಾಕು. ಅತ್ತ ಫೋನ್ ರಿಸೀವ್ ಮಾಡಿಕೊಂಡ ಬುಕ್ಕಿ ಅದನ್ನು ಬರೆದುಕೊಂಡು ಮುಂಬಯಿ ಡಾನ್‌ಗೆ ಫೋನ್ ಮಾಡುತ್ತಾನೆ.

ಹಾಗೊಮ್ಮೆ ಕಟ್ಟಿದ ಟೀಮೇ ಟಾಸ್ ಗೆದ್ದಿತೆಂದರೆ ಬಾಜಿ ಮಾಡಿದಾತ ಇದ್ದಲ್ಲಿಗೇ ಒಂದಕ್ಕೆರಡು ಸೇರಿಸಿ ತಲುಪಿಸುತ್ತಾರೆ. ಗೆಲ್ಲದೇ ಹೋದರೆ ಲಕ್ಷ ಕೈಬಿಟ್ಟಂತೆಯೇ! ಬ್ಯಾಟಿಂಗ್ ತಂಡ ಹದಿನೈದು ಓವರ್‌ಗಳಲ್ಲಿ ನೂರು ರನ್ ಪೂರೈಸಿದರೆ ಅದಕ್ಕೊಂದು ಬಾಜಿ. ಅದನ್ನು 'ಸೆಷನ್' ಎನ್ನುತ್ತಾರೆ. ಅದಕ್ಕೆ ಒಂದಕ್ಕೆರಡು ಲಾಭವಿದೆ. ಪ್ರತಿ ಓವರ್‌ಗೂ ಬೆಟ್ಟಿಂಗ್ ಮಾಡಿದರೆ ಅದನ್ನು 'ಫ್ಯಾನ್ಸಿ' ಎನ್ನುತ್ತಾರೆ. ಟಾಸ್ ಕುರಿತು ಜೂಜು ಕಟ್ಟುವುದಕ್ಕೆ ಈವನ್; ಇಂಥದ್ದೇ ಓವರ್‌ನಲ್ಲಿ ಇಂಥದ್ದೇ ಬ್ಯಾಟ್ಸ್‌ಮನ್ ಬೌಂಡರಿ ಬಾರಿಸುತ್ತಾನಾ? ಇಂಥ ಬ್ಯಾಟ್ಸ್‌ಮನ್ ಸೆಂಚುರಿ ಹೊಡೆಯುತ್ತಾನಾ? ಇಂಥ ಬೌಲರ್‌ಗೆ ಇಂತಿಷ್ಟೇ ವಿಕೆಟ್ ಬರುತ್ತಾ? ಇಂತಿಷ್ಟು ಓವರ್‌ಗಳಲ್ಲಿ ಇಂಥ ತಂಡ ಇಷ್ಟೇ ರನ್ ಹೊಡೆಯುತ್ತಾ? ಇತ್ಯಾದಿ ಕ್ರಿಕೆಟ್‌ನ ಪ್ರತಿ ಹೆಜ್ಜೆಗೂ ಯಾರೋ ಎಲ್ಲೋ ಕೂತು ಇನ್ನೆಲ್ಲಿಗೋ ಫೋನ್ ಮಾಡಿ ಬೆಟ್ಟಿಂಗ್ ಆಡುವ ಈ ದಂಧೆಯ ಆಳ ಅಗಲ ವಿಸ್ತಾರಗಳು ಇವತ್ತಿಗೂ ನಿಗೂಢ. ಹೋಟೆಲಿನ ಮೇಲೆ ಪೊಲೀಸರು ರೇಡು ಬಿದ್ದರೆ ಬಾಜಿಯ ದುಡ್ಡಿಗಾಗಿ ಇನ್ನೆಲ್ಲಿಗೋ ರೇಡು ಮಾಡಬೇಕು. ಬೆಟ್ಟರ್‌ಗಳ

ಚಾಮರಾಜಪೇಟೆಯ ಜಿಂಕೆ ಗೋವಿಂದ

ಸದ್ಯ ನರಹರಿಯನ್ನು ಬಿಟ್ಟರೆ ಬೆಂಗಳೂರಿನ ಕ್ರಿಕೆಟ್ ಬೆಟ್ಟಿಂಗ್ ಸಾಮ್ರಾಜ್ಯದಲ್ಲಿ ಕೇಳಿಬರುವ ಅತೀ ದೊಡ್ಡ ಹೆಸರೇ ಜಿಂಕೆ ಗೋವಿಂದ!

ಇಲ್ಲಿಗೆ ಎರಡು ತಿಂಗಳ ಹಿಂದೆ ಡಿಸಿಪಿ ಅಲೋಕ್ ಕುಮಾರ್ ಈತನ ಚಾಮರಾಜಪೇಟೆಯ ಸಂಜಮ್ಮ ಅಗ್ರಹಾರದ ಅಡ್ಡೆಗೆ ನುಗ್ಗಿ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ತಲ್ಲೀನರಾಗಿದ್ದ ಈತನ ಇಡೀ ಗ್ಯಾಂಗನ್ನೇ ಲಾಕಪ್ಪಿಗೆ ದಬ್ಬಿದ್ದರು. ಆವತ್ತು ಸ್ವತಃ ಜಿಂಕೆ ಗೋವಿಂದನೇ ಜೈಲು ಕಂಡನಾದರೂ ಆತನ ಕ್ರಿಕೆಟ್ ಬೆಟ್ಟಿಂಗ್ ಕಾಯಕ ಮಾತ್ರ ಬಂದ್ ಆಗಲಿಲ್ಲ.


ಆರ್.ವಿ. ದೇವರಾಜ್ ಮತ್ತು ಕೋಟೆ ನಾರಾಯಣರೊಂದಿಗೆ ಜಿಂಕೆ ಗೋವಿಂದ

ಟಿ.ಆರ್. ಮಿಲ್ ಎದುರಿನ ಈತನ ಅನ್ನಪೂರ್ಣೇಶ್ವರಿ ಆಟೋ ಕನ್ಸಲ್ಟೆಂಟ್ಸ್ ಎಂಬುದು ನೆಪಕ್ಕಷ್ಟೆ. ಅಸಲಿಗೆ ಅದೇ ಕ್ರಿಕೆಟ್ ಬೆಟ್ಟಿಂಗ್ ದಂಧೆಯ ಕಾರಸ್ಥಾನ.

ಪ್ರಾರಂಭದಲ್ಲಿ ಆಟೋ ಡ್ರೈವರ್‌ಗಳು, ನಿರುದ್ಯೋಗಿಗಳು ಜಿಂಕೆಯ ಅಡ್ಡೆಗೆ ಬಂದು ಬೆಟ್ಟಿಂಗ್ ಮಾಡುತ್ತಿದ್ದರು. ಬರುಬರುತ್ತ ಅದು ಸುತ್ತಮುತ್ತಲ ಶ್ರೀಮಂತರಿಗೂ ಪರಮಾಪ್ತ ಅಡ್ಡೆಯಾಯಿತು. ಮೂಲತಃ 'ಡಿ' ಗ್ರೂಪ್ ನೌಕರರ ಸಂಘದ ಹೆಸರಲ್ಲಿ ಹೌಸಿಂಗ್ ಸೊಸೈಟಿ ಮಾಡಿ, ಹಳೇ ರೌಡಿ ಕೋಟೆ ನಾರಾಯಣನನ್ನೂ, ಸಕಲ ರೌಡಿಗಳ ಗಾಡ್‌ಫಾದರ್ ಮಾರ್ಕೆಟ್ ದೇವಿಯನ್ನೂ ಬೆನ್ನಿಗಿಟ್ಟುಕೊಂಡೇ ಬೆಟ್ಟಿಂಗ್ ದಂಧೆಗಿಳಿದವನು ಜಿಂಕೆ ಗೋವಿಂದ. ಮೊದಮೊದಲ ಕಲಾಸಿಪಾಳ್ಯದ ಪುಡಿ ರೌಡಿಗಳನ್ನು ಕಟ್ಟಿಕೊಂಡು ಓಡಾಡುತ್ತಿದ್ದ. ಅವರನ್ನು ಮುಂದಿಟ್ಟುಕೊಂಡೇ ಬೋಗಸ್ ಸೈಟು ಮಾರುವುದು, ಒಂದೇ ಸೈಟನ್ನು ಹತ್ತಾರು ಜನಕ್ಕೆ ಮಾರಿ ಟೋಪಿ ಹಾಕಿದ. ಈತನ ಲ್ಯಾಂಡ್ ಗ್ರ್ಯಾಬಿಂಗ್ ಮತ್ತು ರೌಡಿಜಮ್ಮಿನ ಬಗ್ಗೆ ಬರೆದರೆ ಅದೇ ಪುಸ್ತಕವೊಂದಾಗುತ್ತದೆ. ಕ್ರಿಕೆಟ್ ಬೆಟ್ಟಿಂಗ್ ಏನಿದ್ದರೂ ಈತನ ಲೇಟೆಸ್ಟ್ ಮತ್ತು ಹೈಟೆಕ್ ದಂಧೆ ಮಾತ್ರ.

ಮೊನ್ನೆ ಶ್ರೀಲಂಕಾ ವಿರುದ್ಧ ಭಾರತ ಸೋತ ಒಂದೇ ಪ್ರಕರಣದಲ್ಲಿ ಜಿಂಕೆ ಒಬ್ಬನೇ ಸರಿಸುಮಾರು 18 ಕೋಟಿಯಷ್ಟು ಖಮಾಯಿಸಿದ್ದಾನೆಂದರೆ, ಎಷ್ಟು ಮನೆ ಮುಳುಗಿರಬೇಡ!



...ನಿನ ಆಘಾತ ತಾಳಲಾರದೇ ಹೈದರಾಬಾದಿನ ಪಿ. ರಾಜು

...ಇರುವಿಕೆಯೇ ಅದೃಶ್ಯವಾಗಿ ರುತ್ತದೆ.

ಯಾವತ್ತು ಇದನ್ನೆಲ್ಲ ಮಟ್ಕಾ ಕಿಂಗ್ ನರಹರಿ ವಿದ್ಯಾರ್ಥಿಯಂತೆ ಶ್ರದ್ಧೆಯಿಂದ ಸ್ಟಡಿ ಮಾಡಿದನೋ, ತಾನೂ ಕೂಡ ಶೇಷಾದ್ರಿಪುರಂನಲ್ಲಿ ಮಳಿಗೆಯೊಂದನ್ನು ಬೆಟ್ಟಿಂಗ್ ವ್ಯವಹಾರಕ್ಕೆಂದೇ ಖರೀದಿಸಿ ದಂಧೆಗೆ ನಿಂತುಬಿಟ್ಟ. ಬೆಟ್ಟಿಂಗ್‌ನಲ್ಲಿ ಬಂದ ಹಣವನ್ನೆಲ್ಲ ಆರ್.ಟಿ. ನಗರದ ಹೆಬ್ಬಟ್ಟ ಲೇಔಟ್‌ನ ತನ್ನ ಬಂಗಲೆಯಲ್ಲಿ ಬಚ್ಚಿಡುತ್ತಿದ್ದ. ಬೆಟ್ಟಿಂಗ್ ಹಣದ ಕಲೆಕ್ಷನ್ ಹಾಗೂ ಬಟವಾಡೆಗೆಂದೇ ಶ್ರೀರಾಂಪುರದ ಒಂದಿಷ್ಟು ತಮಿಳು ಪುಂಡರನ್ನು ಸಾಕಿಕೊಂಡ. ದಂಧೆ ಭರ್ಜರಿಯಾಗೇ ಇತ್ತು, ಒಮ್ಮೆ ರುಚಿ ಕಂಡ ಗಿರಾಕಿಗೆ ಬೆಟ್ಟಿಂಗಿಗೆ ಭಾರತದ ಪಂದ್ಯಗಳೇ ಆಗಬೇಕೆಂದಿಲ್ಲ. ಎಲ್ಲೋ ವೆಸ್ಟ್‌ಇಂಡೀಸ್ ಮತ್ತು ಆಸ್ಟ್ರೇಲಿಯಾಗಳ ಮಧ್ಯೆ ಪಂದ್ಯ ನಡೆದರೆ ಅದನ್ನು ಟೀವಿಯಲ್ಲಿ ನೋಡುತ್ತಲೇ ಫೋನೆತ್ತಿ ಬೆಟ್ಟಿಂಗ್ ಮಾಡುವವರ ಸಂಖ್ಯೆ ರಾಜ್ಯಾದ್ಯಂತ ವಿಸ್ತಾರವಾಗುತ್ತಲೇ ಇತ್ತು.

ಈ ಮಧ್ಯೆ ಅದೇನು ಗ್ರಾಚಾರ ಕೆಟ್ಟಿತೊ. ಮತ್ತೊಬ್ಬ ಬೆಟ್ಟಿಂಗ್ ದೊರೆ ಹರೀಶ್ ಜೈನ್‌ನ ಚಿಕ್ಕಪೇಟೆಯ ಬೆಟ್ಟಿಂಗ್ ಅಡ್ಡೆಯಲ್ಲಿ 2005 ರ ಡಿಸೆಂಬರ್ 10 ರಂದು ಮಾಗಡಿ ರಸ್ತೆಯ ಜಾವಿದ್ ಎಂಬ ಮೂರು ಮಕ್ಕಳ ತಂದೆಯೊಬ್ಬನ ಹೆಣ ನೇತಾಡುತ್ತಿತ್ತು, ಇದು ಕ್ರಿಕೆಟ್ ಬೆಟ್ಟಿಂಗ್ ಕಾರಣಕ್ಕೇ ನಡೆದ ಹತ್ಯೆ ಎಂಬ ವಾಸನೆ ಹಿಡಿದ ಬೆಂಗಳೂರು ದಕ್ಷಿಣದ ಡಿಸಿಪಿ ಅಲೋಕ್‌ಕುಮಾರ್ ಸದ್ದಿಲ್ಲದೇ ಬೆಟ್ಟಿಂಗ್ ಮಾಫಿಯಾದ ಬುಡಕ್ಕೇ ಕೈಹಾಕಿ ಬಿಟ್ಟರು.

ಇಸ್ಪೀಟ್ ಆಡಲು ಬರುತ್ತಿದ್ದ ಜಾವಿದ್‌ಗೆ ಕ್ರಿಕೆಟ್ ಬೆಟ್ಟಿಂಗ್‌ನ ಹುಚ್ಚು ಹಿಡಿಸಿದ್ದೇ ಈ ಹರೀಶ್ ಜೈನ್ ಎಂಬುದು ಬಯಲಾಗತೊಡಗಿತು. ಅಸಲಿಗೆ ಬಾಯಿಮಾತಿನ ಮೂಲಕ ಜಾವಿದ್‌ನಿಂದ ಖದೀಮ ಹರೀಶ್ ಜೈನ್ ಆವತ್ತು ಶ್ರೀಲಂಕಾ ವಿರುದ್ಧದ ಟೆಸ್ಟ್ ಪಂದ್ಯಕ್ಕೆ ಬೆಟ್ಟಿಂಗ್ ಕಟ್ಟಿಸಿದ್ದ. ಅದು ಅನಾಮತ್ತು ಎರಡು ಲಕ್ಷವನ್ನ!! ಆದರೆ ಬೆಟ್ಟಿಂಗ್‌ನಲ್ಲಿ ಸೋತ ಜಾವಿದ್ ಹಣ ಕಟ್ಟಲಾರದೆ ಭೂಗತನಾಗಿಬಿಟ್ಟ.

ಹಾಗಂಥ ಹರೀಶ್ ಜೈನ್ ಬಿಡಬೇಕಲ್ಲ; ತನ್ನ ಬಾಡಿಗೆ ಬಂಟರನ್ನು ಛೂ ಬಿಟ್ಟು ಜಾವಿದ್‌ನನ್ನು ಎತ್ತಾಕಿಕೊಂಡು ಬಂದಿದ್ದೇ ತನ್ನ ಅಡ್ಡೆಯಲ್ಲಿ ಕೂಡಿ ಹಾಕಿ ಟಾರ್ಚರ್ ಕೊಟ್ಟ. ಬಿದ್ದ ಒದೆಗೆ ಜಾವಿದ್‌ನ ಪ್ರಾಣ ಪಕ್ಷಿಯೇ ಹಾರಿಹೋಗಿತ್ತು, ಆದರೆ ಖದೀಮ ಜೈನ್ ಸ್ವತಃ ಜಾವಿದ್‌ನೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಂತೆ ಕಥೆ ಕಟ್ಟಿದ್ದ. ಸಾಲದ್ದಕ್ಕೆ ಜಾವಿದ್‌ನ ಪತ್ನಿಗೇ ಎರಡು ಲಕ್ಷ ಕೊಟ್ಟು ಬಾಯಿಮುಚ್ಚಿಸಿಬಿಟ್ಟ. ಅಲ್ಲಿಗೆ ಕ್ರಿಕೆಟ್ ಬೆಟ್ಟಿಂಗ್ ಕುಟುಂಬವೊಂದನ್ನೇ ತಿಂದು ಮುಗಿಸಿತ್ತು.

ಈ ಘಟನೆಯ ತನಿಖೆಯ ಆಳಕ್ಕಿಳಿದ ಡಿಸಿಪಿ ಅಲೋಕ್‌ಕುಮಾರ್ ಬೆಂಗಳೂರಿನ ಆವತ್ತಿನ ಪ್ರಚಂಡ ಬುಕ್ಕಿಗಳೆನಿಸಿದ್ದ ನರಹರಿ, ವಿಷ್ಣು ಸಹಾನಿ, ಸಂಪತ್‌ರಾಜ್ ಜೈನ್. ವಿವೇಕ್‌ನಗರದ ಮಾರ್ವಾಡಿ ಜಗದೀಶ್ ಕುಮಾರ್, ಮತ್ತಿಕೆರೆಯ ರಾಂಸಿಂಗ್ ಮತ್ತು ವಸಂತನಗರದ ಖದೀಮ ಬುಕ್ಕಿ ಶಿಬು ಎಂಬುವವರನ್ನೆಲ್ಲ ಎಳೆತಂದು ಜೈಲಿಗೆ ಹಾಕಿದ್ದರು.

ದುರಂತವೆಂದರೆ ಇವರೆಲ್ಲ ವಾರಕ್ಕೇ ಜೈಲಿಂದ ಹೊರಬಿದ್ದರು. ಮತ್ತೆ ಬೆಟ್ಟಿಂಗ್ ದಂಧೆಯಲ್ಲೇ ಮುಂದುವರೆದರು. ಇದೀಗ ಎಲ್ಲೆಡೆ ಕ್ರಿಕೆಟ್ ಜ್ವರವೇ ಹಬ್ಬಿಬಿಟ್ಟಿದೆ. ನರಹರಿ, ವಿಷ್ಣು ಸಹಾನಿ, ಹರೀಶ್ ಜೈನ್, ಗಾಂಧಿ ಬಜಾರ್‌ನ ಸಂಪತ್‌ರಾಜ್, ವಸಂತನಗರದ ಶಿಬು ಮುಂತಾದವರೆಲ್ಲ ಸೇರಿ ಮೊನ್ನಿನ ಶ್ರೀಲಂಕಾ ವಿರುದ್ಧದ ಇಂಡಿಯಾದ ಪಂದ್ಯವೊಂದರಲ್ಲೇ ಸರಿಸುಮಾರು ಇನ್ನೂರೈವತ್ತು ಕೋಟಿಯಷ್ಟು ದುಡ್ಡು ದೋಚಿದ್ದಾರೆಂಬ ಮಾಹಿತಿ ಈಗಾಗಲೇ ಡಿಸಿಪಿ ಅಲೋಕ್‌ಕುಮಾರ್ ಕಿವಿ ಮುಟ್ಟಿದೆ. ಟೀಮ್ ಇಂಡಿಯಾ ಗೆದ್ದೇ ಗೆಲ್ಲುತ್ತದೆ, ಸೂಪರ್ ಎಂಟರ ಘಟ್ಟವನ್ನು ಖಂಡಿತ ಮುಟ್ಟುತ್ತದೆ ಎಂದು ಅದೆಷ್ಟು ಮಂದಿ ಬೆಟ್ಟಿಂಗ್ ಕಟ್ಟಿದ್ದರೊ ಅವರೆಲ್ಲರ ಕನಸಿಗೆ ಮಾರ್ಚ್ 24 ರ ರಾತ್ರಿ ಬಾಂಬು ಬಿದ್ದಿದೆ. ಕಟ್ಟಿದ ದುಡ್ಡೆಲ್ಲ ಬುಕ್ಕಿಗಳ ತಿಜೋರಿಯಲ್ಲಿ ಜೋಪಾನವಾಗಿದೆ. ಸೋತು ಅದನ್ನು ಹೆತ್ತ ಹೆಚ್ಚುವವರ್ಯಾರು? ಪಸೂಲಿ ಮಾಡುವವರ್ಯಾರು? ಎಷ್ಟು ಮನೆ ಮುಳುಗಿರಬಹುದು? ಲೆಕ್ಕ ಇಟ್ಟವರ್ಯಾರು?

ಬೆಳಗಾವಿ: ಹಿಂಡಲಗಾ ಎಂಬ ಸ್ವರ್ಗ, ನರಕ

ಜೈಲಿನಲ್ಲೂ ಜಾಲಿಯಾಗಿರಬಹುದೇ ಎಂಬ ಪ್ರಶ್ನೆಗೆ ಬೆಳಗಾವಿಯ ಹಿಂಡಲಗಾ ಜೈಲೇ ಸಾಕ್ಷಿ! ಇಲ್ಲಿ ದುಡ್ಡೊಂದಿದ್ದರೆ ಹಣ್ಣಿನ ರಸದಿಂದ ಹಿಡಿದು ಹೆಣ್ಣಿನ ರುಚಿಯವರೆಗೂ ಎಲ್ಲಾ ಸೇವೆಗಳನ್ನು ಅತಿ ಪ್ರಾಮಾಣಿಕತೆಯಿಂದ ಖುದ್ದು ಜೈಲು ಅಧಿಕಾರಿಗಳೇ ಸಲ್ಲಿಸುತ್ತಾರೆ. ಆದ್ದರಿಂದ ಈ ಕೇಂದ್ರ ಕಾರಾಗೃಹದಲ್ಲಿರುವ ಖೈದಿಗಳಿಗೆ ಸುಖವೋ ಸುಖ, ಮಜವೋ ಮಜಾ...!

ಆದರೂ ಇಲ್ಲಿನ ಸೂಪರಿಂಟೆಂಡೆಂಟ್ ಡಿ. ಕೆ. ಕಡ್ಡಿ "ನನ್ನದು ಸಿಂಬಲ್ ಆಫ್ ಗುಡ್ ಸರ್ವಿಸ್" ಎಂದು ಮೀಸೆ ತಿರುವುತ್ತಿದ್ದಾರೆ. ವಿಚಿತ್ರವೆಂದರೆ ಅವರ ಪಕ್ಕದಲ್ಲೇ ಹಣಕ್ಕಾಗಿ ಬಾಯಿ ತೆರೆದು ನಿಂತಿರುವ ಅಧಿಕಾರಿಗಳು ಹಾಗೂ ನೌಕರರು ಇಡೀ ಕಾರಾಗೃಹವನ್ನು ಎ ಟು ಝಡ್ ರೆಸ್ಟೋರೆಂಟ್ ಆಗಿ ಪರಿವರ್ತಿಸಿದ್ದಾರೆ. ಚಟವಿದ್ದವರೊಂದಿಗೆ ದೋಸ್ತಿ, ಚಟವಿಲ್ಲದವರೊಂದಿಗೆ ಕಟ್ಟಾ ದುಶ್ಮನಗಿರಿ ಮಾಡುವ ಈ ಅಧಿಕಾರಿ ವರ್ಗ ಹಲವರನ್ನು ಎಷ್ಟು ಹಿಂಸಿಸಿದೆ ಎಂದರೆ ಅವರು ಕಾರಾಗೃಹದಲ್ಲೇ ಸಾವಿಗೆ ಶರಣಾಗಿದ್ದಾರೆ.

ಜೈಲಿನಲ್ಲಿ ಐಲುಪೈಲು

ಇಲ್ಲಿ ಎಂತಹ ಕಟ್ಟುನಿಟ್ಟಾದ ವ್ಯವಸ್ಥೆ ಏರ್ಪಾಟಾಗಿದೆ ಎಂದರೆ ಹಗಲಲ್ಲಿ ಗುಟ್ಕಾ, ಸಿಗರೇಟ್, ಗಂಜಾ, ಆಫೀಮ್ ಸುಲಭವಾಗಿ ಸರಬರಾಜಾಗುತ್ತದೆ. ಹಾಗೆಯೇ ಸಂಜೆ ಆಗುತ್ತಿದ್ದಂತೆ ಬಿಯರ್, ಬ್ರಾಂಡಿ, ವಿಸ್ಕಿ, ರಮ್ ಕೂಡ ಅಷ್ಟೇ ಸರಾಗವಾಗಿ ಸಿಗುತ್ತದೆ. ಇನ್ನು ರಾತ್ರಿಯಾಯಿತೆಂದರೆ ಮಿಡನೈಟ್ ಮಸಲಾ ಕಾರ್ಯಕ್ರಮಗಳಿಗೂ ಇಲ್ಲೇನು ಕೊರತೆ ಇಲ್ಲ. ಪಂಚತಾರಾ ಹೊಟೇಲ್ ತರಹ ಇಲ್ಲಿ ಜಕಮಕ ಲೈಟುಗಳಿಲ್ಲದಿದ್ದರೂ ಇದ್ದುದ್ದರಲ್ಲೇ ಶ್ರೀಮಂತ ಖೈದಿಗಳು ಐಷಾರಾಮಿ ಜೀವನ ನಡೆಸುತ್ತಿದ್ದಾರೆ.


ಹೊರಜಗತ್ತಿನಂತೆ ಇಲ್ಲೂ ಟ್ಯಾಕ್ಸ್ ವ್ಯವಸ್ಥೆ ಇದೆ. ಒಂದು ವ್ಯತ್ಯಾಸ ಯಾವುದೆಂದರೆ, ಹೊರಗಿರುವವರು ಹೇಗಾದರೂ ಮಾಡಿ ಟ್ಯಾಕ್ಸ್ ಕಟ್ಟುವುದರಿಂದ ತಪ್ಪಿಸಿಕೊಳ್ಳಬಹುದು. ಆದರೆ ಒಳಗೆ ಮೊದಲೇ ಟ್ಯಾಕ್ಸ್ ಕಟ್ ಮಾಡುತ್ತಾರಾದ್ದರಿಂದ ಇಲ್ಲಿ ಟ್ಯಾಕ್ಸ್‌ನಿಂದ ತಪ್ಪಿಸಿಕೊಳ್ಳುವಂತಿಲ್ಲ ಅಷ್ಟೇ.

ಹಿಂಡಲಗಾ ಜೈಲಿನಲ್ಲಿ ಒಂದು ಗುಟ್ಕಾ ಪ್ಯಾಕಿಗೆ ಮೂರು ರೂಪಾಯಿ ಟ್ಯಾಕ್ಸ್ ಇದ್ದರೆ, ಗಾಂಜಾ ಮತ್ತು ಆಫೀಮಿಗೆ ಸೀಜನ್ ಮೇಲೆ ರೇಟ್‌ಅನ್ನು ವಿಧಿಸಲಾಗುತ್ತದೆ. ಹಾಗೆಯೇ ಬಿಯರ್‌ಗೆ 100 ರೂ., ಹಾಟ್ ಡ್ರಿಂಕ್ಸ್‌ಗೆ ಕಂಪನಿಯ ಬ್ರಾಂಡ್ ಮೇಲೆ 30 ರಿಂದ 50 ರೂ., ಇನ್ನು ಸೆರಗು-ನತ್ತು ಪ್ರಿಯರಿಗೆ ಮಾಲಿಗೆ ತಕ್ಕಂತೆ, ಗ್ರಾಹಕನ ಬಲಕ್ಕೆ ರೇಟು ಫಿಕ್ಸ್ ಆಗುತ್ತೆ.

ಇಂತಹ ಎಲ್ಲ 'ವಸ್ತು'ಗಳನ್ನು ಪಡೆಯಲು ಒಂದು ದಕ್ಷ ವ್ಯವಸ್ಥೆಯನ್ನು ಸಿದ್ಧಗೊಳಿಸಲಾಗಿದೆ. ನಿಗದಿಪಡಿಸಿರುವ ಸಮಯದೊಳಗೆ ಖೈದಿಯೊಬ್ಬ ತನಗೆ ಬೇಕಾದ ವಸ್ತುವಿನ ಬಗ್ಗೆ ಸಂಬಂಧಿಸಿದ ಪೇದೆಗೆ ತಿಳಿಸಿ ಕ್ಯಾಶ್ ಕಟ್ಟಬೇಕು. ನಂತರ ಅವರು ಹೇಳುವ ಜಾಗೆಯಲ್ಲಿ ನಿಂತು ಜಾಲಿಗೆ ರೇಡಿಯಾಗಿರಬೇಕು. ಇದು ಜೈಲಿನಲ್ಲಿ ರೊಟೀನ್ ಪದ್ಧತಿಯಾಗಿದೆ. ಜೈಲಿನ ಅಧಿಕಾರಿಗಳೇ ಖೈದಿಗಳ ಸೇವಕರಾಗಿರುವುದರಿಂದ ಇಲ್ಲಿ ಯಾರೂ ಕದ್ದು ಸೇದುವ ಅಥವಾ ಕುಡಿಯುವ ಗೋಜಿಗೆ ಹೋಗಬೇಕಿಲ್ಲ, ಎಲ್ಲವನ್ನೂ ಬಟಾಬಯಲಿನಲ್ಲೇ ನಡೆಸಬಹುದು.

ಗುಟ್ಕಾ, ಗುಂಡು, ನತ್ತು ಇಲ್ಲಿ ಸಿಗುವುದರಿಂದ ಇನ್ನು ಮಟ್ಕಾ, ಆನ್ ಲೈನ್, ಲಾಟರಿಗಳನ್ನು ಬಿಟ್ಟಿರಲಾದೀತೆ? ಅವೂ ಇಲ್ಲಿ ಮಾರಾಟಕ್ಕಿವೆ! ಸರಿಯಾಗಿ ಸೂರ್ಯೋದಯಕ್ಕೆ ಹಾಜರಾಗುವ ಮಟ್ಕಾ ಬುಕ್ಕಿಗಳು ಖೈದಿಗಳಿಂದ ನಂಬರ್ ಕಲೆಕ್ಷನ್ ಮಾಡಿದರೆ, ಜೈಲಿನ ಪೇದೆಗಳು ಖೈದಿಗಳ ಏಜೆಂಟರಂತೆ ವರ್ತಿಸುತ್ತಾ ಆನ್ ಲೈನ್ ಸೆಂಟರ್‌ಗಳಿಗೆ ಅವರ ಪರವಾಗಿ ನಂಬರ್‌ಗಳನ್ನು ಹಾಕುತ್ತಾರೆ, ಜೊತೆಗೆ ಲಾಟರಿಗಳನ್ನು ತಂದು ಕೊಡುತ್ತಾರೆ.

ಎಲ್ಲ ಅವ್ಯವಹಾರಗಳಲ್ಲಿ ಹೇಗೆ ಪ್ರಾಮಾಣಿಕತೆ ಇರುತ್ತದೋ ಹಾಗೆಯೇ ಜೈಲಿನಲ್ಲಿ ನಡೆಯುತ್ತಿರುವ ಎಲ್ಲ ಅಕ್ರಮಗಳಲ್ಲಿ ಮೋಸ, ವಂಚನೆ ಎಂಬುದೆಲ್ಲ ಇಲ್ಲ. ಉದಾಹರಣೆಗೆ, ಮಟ್ಕಾ ಅಥವಾ ಲಾಟರಿಯಲ್ಲಿ ಖೈದಿ ಗೆದ್ದರೆ, ಅಧಿಕಾರಿಗಳು ಆತನಿಗೆ ಚಾಚೂತಪ್ಪದೆ ಅವನ ಪರ್ಸೆಂಟೇಜನ್ನು ಕೊಡುತ್ತಾರೆ! ಇನ್ನು ಹಲವು ಹೈಫೈ ಖೈದಿಗಳು ಮೊಬೈಲ್ ಮುಖಾಂತರವೇ ಲಿಂಕ್ ಇಟ್ಟುಕೊಂಡು ಕೂತಲ್ಲೇ ರಿಜಲ್ಟ್ ತಿಳಿದುಕೊಳ್ಳುತ್ತಾರೆ.



ಬಡವರ ಗೋಳು

ಇದೆಲ್ಲ ಶ್ರೀಮಂತ ಖೈದಿಗಳ ಕತೆಯಾಯಿತು. ಈ ಕಾರಾಗೃಹದಲ್ಲಿ ಬಡ ಖೈದಿಗಳ ಪಾಡೇನು ಎಂದು ನೋಡಿದರೆ ಮನಸ್ಸಿಗೆ ಘಾಸಿಯಾಗುತ್ತದೆ. ಇಲ್ಲಿ ಬಡ ಖೈದಿಗಳನ್ನು ಭೇಟಿಯಾಗುವುದು ಅವರ ಸಂಬಂಧಿಕರಿಗೆ, ಸ್ನೇಹಿತರಿಗೆ ಸುಲಭದ ಮಾತಲ್ಲ. ಒಬ್ಬರಿಗೆ ಇಷ್ಟು, ಸಮಯಕ್ಕೆ ಇಷ್ಟು ಅಂತ ಅಲ್ಲಿನ ಪೇದೆಗಳು ಫಿಕ್ಸ್ ಮಾಡಿದ್ದಾರೆ. ಅಷ್ಟು ಹಣ ತೆತ್ತರೆ ಮಾತ್ರ ತಮ್ಮವರೊಂದಿಗೆ ಭೇಟಿ ಸಾಧ್ಯ. ಸಹಜ ಭೇಟಿಗೆ 50 ರೂ., ಖೈದಿಗೆ ಊಟ, ತಿಂಡಿ ಏನಾದರೂ ತಂದಿದ್ದರೆ 200 ರೂ. ಕೊಡಲೇಬೇಕು. ಆಕಸ್ಮಾತ ಹಣವಿಲ್ಲವೆಂದು "ಇಷ್ಟ ಅದಾವು ತಗೋಪಾ. ನಮ್ಮ ಮನುಷ್ಯಾನ್ ತೋರಿಸು"" ಎಂದು ಎಷ್ಟೇ ಬೇಡಿಕೊಂಡರೂ ಯಾವ ಪ್ರಯೋಜನವೂ ಆಗುವುದಿಲ್ಲ, ಅದಕ್ಕೆ ಅವರೆಲ್ಲರೂ "ಕೂದಲಿದ್ದಾಕೆ ಹ್ಯಾಂಗ್ ತುರುಬಾ ಕಟ್ಟಿದರೂ ಚಂದಾ. ನಮ್ಮದು ಹಂಗಿಲ್ಲಾ ಭಿಡಿ" ಎಂದು ಅಸಹಾಯಕತೆಯಿಂದ ಕೈಚೆಲ್ಲುತ್ತಾರೆ.

ಕಾಸು ಇಲ್ಲದಿದ್ದರೆ ಕೆಲಸ ಮಾಡ್ರಿ

ಹಣವಿಲ್ಲದವರು ಇಲ್ಲಿ ಹೆಣಕ್ಕಿಂತಲೂ ಕಡೆ. ದುಡ್ಡು ಇದ್ದವರು ದೌಲತ್ ಮಾಡುತ್ತಾ ಹಾಯಾಗಿದ್ದರೆ, ಬಡ ಖೈದಿಗಳು ಕೆಲಸ ಮಾಡಿ ಸಾಯುವಂತಾಗಿದೆ. ಗಬ್ಬು ನಾರುವ ಗಟಾರದಂತಹ ಟಾಯ್‌ಲೆಟ್‌ಗಳನ್ನು ಮತ್ತು ಬಾತ್ ರೂಮ್‌ಗಳನ್ನು ತೊಳೆಯುವುದು, ಮಾಲಿ ಕೆಲಸದಿಂದ ಮಾಲೀಶ್ ಮಾಡುವವರೆಲ್ಲ ಬಡ ಖೈದಿಗಳೇ. ಅದನ್ನು ಮಾಡುವುದಕ್ಕೆ ಒಪ್ಪದವರು ಬೂಟು ಮತ್ತು ಲಾಠಿ ಏಟಿಗೆ ತುತ್ತಾಗಿ ಹಾಸಿಗೆ ಹಿಡಿದಿದ್ದಾರೆ.

ನಾಯಿಗಳೂ ತಿನ್ನದಂತಹ ತಿನಿಸು ತಯಾರಿಸುವ ಅಡುಗೆ ಕೋಣೆ, ಕೈಮಗ್ಗ ನೇಕಾರರ ವಿಭಾಗ ತುಕ್ಕು ಹಿಡಿದ ಟೇಲರಿಂಗ್ ಯೂನಿಟ್, ಸಾಬೂನು ತಯಾರಿಕಾ ಘಟಕ ಸೇರಿದಂತೆ ಇಲ್ಲಿ ತಯಾರಾಗುವ ವಸ್ತುಗಳನ್ನು ಮಾರಲೆಂದೇ ಮಳಿಗೆಗಳಿವೆ. ಆದರೆ ಇವ್ಯಾವುದನ್ನೂ ತಯಾರಿಸುತ್ತಲೇ ಇಲ್ಲವಾದ್ದರಿಂದ ಮಾರಾಟದ ವಿಷಯ ಎಲ್ಲಿಂದ ಬಂತು.

ಜೈಲಿನಲ್ಲೇ ಆತ್ಮಹತ್ಯೆ

ವರದಕ್ಷಿಣೆ ಸಲುವಾಗಿ ಹೆಂಡತಿಯನ್ನು ಕೊಂದು ಐದು ವರ್ಷ ಜೈಲಿನಲ್ಲಿ ಕಠಿಣ ಶಿಕ್ಷೆ ಅನುಭವಿಸಿದ್ದ ಚಂದ್ರಕಾಂತ ಪಾಂಡುರಂಗ ಸೂರ್ಯವಂಶಿ ಮುಂದಿನ ತಿಂಗಳು ಬಿಡುಗಡೆಯಾಗುತ್ತಿದ್ದ. ಹುಕ್ಕೇರಿ ತಾಲೂಕಿನ ಕರಜಗಾ ಗ್ರಾಮದ 35 ವರ್ಷದ ಚಂದ್ರಕಾಂತ ಜೈಲಿನಲ್ಲಿನ ಕ್ರೂರ ಹಿಂಸೆ ತಾಳಲಾರದೆ ಕಳೆದ ಸೋಮವಾರ ಚರ್ಮಗಾರಿಕೆ ವಿಭಾಗದ ಕಿಟಕಿಗೆ ನೇಣು ಹಾಕಿಕೊಂಡು ಪ್ರಾಣತ್ಯಾಗ ಮಾಡಿದ. ಆ ಮೂಲಕ ಜೈಲಿನಿಂದ ಬಿಡುಗಡೆ ಹೊಂದಿರದಿದ್ದರೂ ಹಿಂಸೆಯಿಂದ ಮಾತ್ರ ಬಿಡುಗಡೆ ಹೊಂದಿದ.

ಈತ ಸಾಯುವ ಎರಡು ದಿನದ ಹಿಂದೆ ಆತನನ್ನು ಭೇಟಿಯಾಗಲು ಬಂದಿದ್ದ ಮನೆಯವರ ಮುಂದೆ "ಇಲ್ಲಿ ಸಾಹೇಬ್ರು ಕೊಡೋ ಹಿಂಸೆ ತಾಳಾಕಾಗಲ್ಲ, ನನ್ನ ಕೊಂದು ಬಿಡುತ್ತಾರ. ಹಣವಿಲ್ಲದೆ ಸಾಲದಲ್ಲಿರುವ ನನ್ನೊಂದಿಗೆ ಪಶುಗಳ ತರಹ ವರ್ತಿಸುತ್ತಾರೆ. ಹಿಂಗಾದರೆ ನಾ ಸಾಯತೀನಿ" ಎಂದು ಕಣ್ಣೀರಿಟ್ಟಿದ್ದನಂತೆ. ಬಿಡುಗಡೆಯ ಅಂಚಿನಲ್ಲಿರುವ ಜನರೇ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಅಂದರೆ ಇಲ್ಲಿ ಎಂತಹ ಪರಿಸ್ಥಿತಿ ಇದೆ ಎಂಬುದನ್ನು ನೀವೇ ಊಹಿಸಿ. ಅಷ್ಟೇ ಅಲ್ಲದೆ, ಪ್ರತಿ ವರ್ಷ ಕಡಿಮೆ ಅಂದರೂ ಐದು ಖೈದಿಗಳು ಹೀಗೆ ಸಾಯುತ್ತಾರಂತೆ. ಆದರೆ ಸೂಪರಿಂಟೆಂಡೆಂಟ್ ಕಡ್ಡಿ ಮಾತ್ರ ಇದೆಲ್ಲಾ ಕಾಮನ್ ಎಂಬಂತೆ ಸುಮ್ಮನಿದ್ದಾರೆ.

ಚಂದ್ರಶೇಖರ ಆತ್ಮಹತ್ಯೆ ಮಾಡಿಕೊಂಡ ನಂತರ ಈ ಕಾರಾಗೃಹಕ್ಕೆ ಭೇಟಿ ನೀಡಿದ ಗೃಹ ಮಂತ್ರಿ ಎಂ.ಪಿ. ಪ್ರಕಾಶರು ಮೂರುವರೆ ತಾಸು ಟೈಂ ಪಾಸ್ ಮಾಡಿದರೆ ಹೊರತು ಒಬ್ಬ ಖೈದಿಯನ್ನೂ ಮಾತನಾಡಿಸುವ ಗೋಜಿಗೆ ಹೋಗಲಿಲ್ಲ. ಜೈಲಿನ ನೂರು ಎಕರೆ ಬಯಲಿನಲ್ಲಿ ಸ್ಟೈಲ್ ಆಗಿ ರೂಪದರ್ಶಿ ತರಹ ನಡೆದಾಡಿ, ಮಾಧ್ಯಮಗಳಿಗೆ ಪೋಸು ಕೊಟ್ಟು ತಾನೊಬ್ಬ 'ಬುದ್ಧಿಜೀವಿ' ಎಂಬ ಗತ್ತಿನಲ್ಲಿ ಮಾತಾಡಿ ಟಾಟಾ ಹೇಳಿದರು. ಮಂತ್ರಿಯ ಈ ವರ್ತನೆಯಿಂದ ಸಿಟ್ಟಿಗೆದ್ದ ಖೈದಿಗಳು ಅವರ ಎದುರೇ ಧಿಕ್ಕಾರ ಕೂಗಿ ಪ್ರತಿಭಟಿಸಿ ಪೊಲೀಸರ ಲಾಠಿ ಏಟಿಗೆ ಗುರಿಯಾದರು. "ಪ್ರತಿ ದಿನ ಇಲ್ಲಿ ನಡೆಯುವ ಕರ್ಮಕಾಂಡ ಹಾಗೂ ಹಿಂಸೆಯ ಬಗ್ಗೆ ಅವರಿಗೆ ಹೇಳಬೇಕು ಅಂದುಕೊಂಡೀವಿ. ಆದರ ಮುಖಾ ತಿರುಗಿಸಿಕೊಂಡು ಹೋಗೆ ಬಿಟ್ಟರು" ಎಂದು ನೊಂದು ನುಡಿದರು ಖೈದಿಗಳು.

ಬೆಳಗಾವಿಯ ವಕೀಲರ ಕಾರ್ಯಕ್ರಮಕ್ಕೆ ಬಂದಿದ್ದ ಎಂ.ಪಿ.ಪಿ. ಖಾಲಿ ಟೈಂ ಜೈಲಿನಲ್ಲಿ ಕಳಿಯೋಣ ಅಂತಹ ಬಂದಂಗಿತ್ತು, ಆದರೆ ಜೈಲಿನಲ್ಲಿ ಎಂಟು ಖೈದಿಗಳ ಕೈಯಲ್ಲಿ ಮೊಬೈಲ್‌ಗಳಿದ್ದದ್ದನ್ನು ಕಂಡು ಸ್ವತಃ ಮಂತ್ರಿಗಳೇ ದಂಗಾಗಿ ಹೋದರು. "ಇದೆಲ್ಲಾ ಕಾಮನ್. ಫ್ಯಾಮಿಲಿ ಜೊತೆ ಮಾತಾಡೋಕೆ ಇಟ್ಟುಕೊಂಡಿದ್ದಾರೆ ಬಿಡಿ" ಎಂದು ಕೈಜಾಡಿಸಿ, ತಲೆ ಆಡಿಸಿ, ಜಾಗ ಖಾಲಿ ಮಾಡಿದ್ದಾರೆ ಮಂತ್ರಿ ಪ್ರಕಾಶು.

-ಹುರಳಿಕುಪ್ಪಿ ವಿನಯ

ಖತರ್‌ನಾಕ್‌ಗಳ ಗೂಡು



ಉಮೇಶ್ ರೆಡ್ಡಿ


ಗಲ್ಲು ಶಿಕ್ಷೆಗೆ ಗುರಿಯಾಗಿರುವ 14 ಮಂದಿ ಖೈದಿಗಳನ್ನು ಘಾಸಿಗೆ ಏರಿಸಲು ಇಲ್ಲಿ ಯಾರೂ ಇಲ್ಲವಂತೆ. ಆದ್ದರಿಂದ ಹ್ಯಾಂಗ್ ಮಾಡೋಕೆ ಇಲ್ಲಿಯ ಸಿಬ್ಬಂದಿಗೆ ತರಬೇತಿ ನೀಡುತ್ತಿದ್ದಾರೆ ಎಂಬ ರೂಮರ್ ಜೈಲಲ್ಲಿ ಹಬ್ಬಿದೆ.

24 ವರ್ಷಗಳ ಹಿಂದೆ ಬಿಜಾಪುರ ಜಿಲ್ಲೆಯ ಲಕ್ಷ್ಮಣ ಮಲ್ಲಾನನ್ನು ಈ ಕಾರಾಗೃಹದಲ್ಲಿ ಗಲ್ಲಿಗೇರಿಸಲಾಗಿತ್ತು. ಅದಕ್ಕೂ ಮುನ್ನ 38 ಮಂದಿಯ ಕೊರಳಿಗೆ ಉರುಳು ಬಿಗಿಯಲಾಗಿತ್ತು. 2005 ರಲ್ಲಿ ಮರಣದಂಡನೆ ಶಿಕ್ಷೆಗೆ ಗುರಿಯಾದವರನ್ನು ಹಿಂಡಲಗಾದಲ್ಲಿ ಗಲ್ಲಿಗೇರಿಸಬೇಕು ಎಂದು ಸರಕಾರ ನಿರ್ಧಾರ ತಗೆದುಕೊಂಡಿದ್ದರಿಂದ 14 ಮಂದಿಯನ್ನು ಇಲ್ಲಿ ಇರಿಸಲಾಗಿದೆ.

ಈ ಕಾರಾಗೃಹದಲ್ಲೀಗ ಚಾಮರಾಜನಗರದ ಬದ್ರಿಯಾನ್ ಹಳ್ಳಿಯ ವಿಕೃತ ಕಾಮಿಗಳಾದ ಶಿವು ಹಾಗೂ ಜಡೆಸ್ವಾಮಿ, ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ವೆಸಗಿ ಆಕೆಯನ್ನು ಕೊಂದಿದ್ದ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಭಗವಾನ್ ಬಂಡು, ಹೆಂಡತಿ ಸಾಕಿರಾಳನ್ನು ಕೊಂದ ಸ್ವಾಮಿ ಶ್ರದ್ಧಾನಂದ, 1993 ರಲ್ಲಿ ಸುರಂಗ ಬಾಂಬ್‌ಗಳನ್ನು ಸ್ಫೋಟಿಸಿ 18 ಪೊಲೀಸರನ್ನು ಹತ್ಯೆ ಮಾಡಿದ ವೀರಪ್ಪನ್ ಸಹಚರರಾದ ಜ್ಞಾನಪ್ರಕಾಶ, ಸೈಮನ್, ಮೀಸೆಗಾರ ಮಾದಯ್ಯ ಹಾಗೂ ಬಿಲವೇಂದ್ರ, ಜಮೀನು ವಿವಾದದಲ್ಲಿ ನಾಲ್ಕು ಜನರ ಪ್ರಾಣತೆಗೆದ ಮಂಗಳೂರಿನ ಪ್ರವೀಣಕುಮಾರ, ಮಾಜಿ ಪೊಲೀಸ ಪೇದೆ ವಿಕೃತ ಕಾಮಿ ಉಮೇಶ ರೆಡ್ಡಿ ಸೇರಿದಂತೆ ಧಾರವಾಡದ ಮೂವರು, ಕಲಬುರ್ಗಿಯ ಒಬ್ಬ ಎಂದು ಗಲ್ಲಿಗೇರುತ್ತೇವೋ ಎಂಬ ಆತಂಕದಲ್ಲಿ ದಿನಗಳನ್ನು ದೂಡುತ್ತಿದ್ದಾರೆ.

ಆದರೆ ಅಲ್ಲೀಗ ಘಾಸಿಯನ್ನು ತಯಾರಿಸಲು ಯಾರೂ ಇಲ್ಲವಾದ್ದರಿಂದ ಸ್ವಲ್ಪ ಮಟ್ಟಿಗೆ ನೆಮ್ಮದಿಯ ಬದುಕನ್ನೂ ಸಾಗಿಸುತ್ತಿದ್ದಾರೆ. ಅದೃಷ್ಟ ಅಂದರೆ ಇದಲ್ಲವೇ?

ಎಡೂರಪ್ಪ ಸಿಕ್ಕಸಿಕ್ಕಿದೋರಿಗ್ಯಲ್ಲ ಇರುದು ಕೊಟ್ನಂತೆ!



ಕೆಂಡದ ಸುರಿದಂತಹ ಬಿಸಿಲು. ಆ ಬಿಸಿಲ ಝಳಕ್ಕೆ ಅಟ್ಟಕಲ್ಲು ಗೂಗುಡುವ ತ್ವದೆಯಂತಾಗಿದ್ದವು. ಹೋಟಲ್ ಚಿಕ್ಕಣ್ಣ ಕಾಫಿ. ಟಿ ಬದಲಿಗೆ ಒಂದು ಮಡಕೆ ಶರಬತ್ತು ಮಾಡಿಕೊಂಡು ಆರಾಮವಾಗಿ ಕುಳಿತಿದ್ದ. ವಾಟಸ್ಸೆ ಕೂಡ ಎಲ್ಲೂ ಹೋಗದೆ, ಎಡೂರಪ್ಪನ ಬಜೆಟ್ ಮೇಲಿನ ಚರ್ಚೆಯಲ್ಲಿ ಗಂಭೀರವಾಗಿ ಭಾಗವಹಿಸಿದ್ದ. ಆಗ ಜುಮ್ಮಿ,

"ಎಡೂರಪ್ಪ ನಿನಿಗೆ ಸರಿಯಾಗಿ ಮಾಡಿದ ಬುಡು" ಎಂದಳು.

"ಅವ್ಪನ ಕೈಲಾಗದಿಲ್ಲ ನೋದ್ವಯಿರಕ್ಕ, ಇನ್ನು ಜುಲ್ಲೆ ಕಳದಮ್ಯಾಲಲ್ಲವೆ ಮಾತು?" ಎಂದ ವಾಟಸ್ಸೆ.

"ಆಯ್ತು, ಅಲ್ಲಿಗಂಟ ಕುಡಿತಿ. ಆಮ್ಯಾಲೇನು ಮಾಡ್ತಿ ಹೇಳು?"

"ಅಷ್ಟೊತ್ತಿಗೆ ಬೇರೆ ಡ್ರಿಂಕ್ಸ್ ತಗಳದ ಪಾಟ ಮಾಡಿಕತ್ತನೆ" ಎಂದ ಉಗ್ರಿ.

"ಏ ಪಾಟ ಮಾಡಿಕಳದೇನು ಬೇಕಾಗಿಲ್ಲ ಕಣೊ ಉಗ್ರಿ. ಇದೇ ಶರಾಪು ಬೇರೆ ಕಲ್ಲರಲ್ಲಿ ಬತ್ತದೆ. ಶರಾಪು ಕುಡುದು ಉಪ್ಪಿನಳ್ಳ ಬಾಯಿಗಾಯ್ಕತಿದ್ರೊ ಈ ಕಲರ್ ಡ್ರಿಂಕ್ಸ್ ಕುಡುದ್ರೆ ಉಪ್ಪಿನಕಾಯಿ ತಿಂತಿವಿ ಅಷ್ಟೆ ಡಿಪರೆನ್ಸು ನೋಡು."

"ಏನೇ ಆದ್ರು ನಿಮ್ಮ ಶರಾಪಿನಷ್ಟು ಕಿಕ್ಕು ಇನ್ನಾವ ಡ್ರಿಕ್ಸಲ್ಲು ಇಲ್ಲ ಕಣೊ."

"ಇಲ್ಲ ಸರಿ, ಆದ್ರು ಕಾಲಕ್ಕೆ ತಕ್ಕಂತೆ ಹೊಂದಿಕಬೇಕಲವೇನೊ ಉಗ್ರಿ. ಇಲ್ಲ ಅಂದ್ರೆ ಕಳ್ಳಬಟ್ಟಿ ಕುಡಿಬೇಕಾಯ್ತದೆ."

"ಕಳ್ಳಬಟ್ಟಿ ಇಳಸೋನ್ಯಾವನಿದ್ದನ್ನ ಈಗ? ಆಗೇನೊ ಬಲ್ಲಾವಳ್ಳಿ ಪಾಪಣ್ಣಿದ್ದ ಇಳಸೋನು, ಯಲ್ಲ ಕದ್ದು ಕುಡಕಂಡು ಮನೆ ಸೇರಿಕಳರು. ಈಗ್ಯಾವನಿಳಿಸಿ ಕೊಟ್ಟನು ನಿಮಿಗೆ?" ಎಂದ ಕಾಳಮಾವ.

"ಆ ಪಾಪಣ್ಣ ಬಲು ರುಚಿಯಾಗಿ ಮಾಡೋನಂತೆ ದ್ವಡಪ್ಪ, ನಾನಂತೂ ಕುಡದಿಲ್ಲ, ನೀನೇನಾರ ಕುಡುದಿದ್ಯಾ?" ಎಂದ ವಾಟಸ್ಸೆ.

"ನಾನು ಒಂದು ಸತಿ ಕುಡದಿದ್ದೆ ಅಷ್ಟೆ ಕಂದ್ಯ. ಸೀತಾಗಿ ಬುಟ್ಟು ಬಾಯಿಲಿ, ಮೂಗಲ್ಕಲ್ಲ ಹರಿಯ ದಂಗೆಯ. ಆಗ ಪಾಪಣ್ಣನೆಯ ಕೋಳಿಸಾರಿಗೆ ಶರಾಪುಯ್ಕೊಂಡು ಕುಡಿ ಅಂದಿದ್ದ. ನಿಮ್ಮ ದ್ವಡವ್ವ ತ್ಯಳ್ಳಗೆ ಕೋಳಿಸಾರು ಮಾಡಿದ್ಲು. ಒಂದು ತಟ್ಟೆವಳಿಕೆ ಸಾರು ಬುಟಗಂಡು ಶರಾಪುಯ್ಕಂಡು ಕುಡದೆ ನೋಡೂ, ಕಿವಿಲಿ ಬಾಯಿಲ್ಕಲ್ಲ ವಗೆ ಹೋದಂಗಾಯ್ತು ಹೋಗತ್ತಗೆ."

"ಅಲ್ಲಿಗೆ ಶರಾಪು ಮೆದಿಶನ್ನು ಅಂದಂಗಾಯ್ತು."

"ಮೇಡಿಸನ್ನ ಯಾವಾಗ್ಲು ತಗಳಕಾದತ್ನ? ತಗಂಡ್ರೆ ಯಾವುದೋ ವಾಸಿಯಾಗದ ಕಾಯ್ಲ ಅಂತರೆ" ಎಂದು ಕಾಳಮಾವ ವಾಟಸ್ಸೆ ಬಾಯಿ ಮುಚ್ಚಿಸಿದ.

"ಇವುನು ಯಾವಾಗ್ಲು ತಗಳದರಿಂದ ವಾಸಿಯಾಗದ ಕಾಯ್ಲ ಇವುನಿಗೂ ಅದೆ ಅಂದಂಗಾಯ್ತಲ್ಲ ಮಾವ?" ಎಂದಳು ಜುಮ್ಮಿ.

"ಅದಂಗಲ್ಲಾ ಕಂಡೈ ನಾವು ಶರಾಪು ಕುಡಿಬೇಕೆ ವರತು ಅದು ನಮ್ಮ ಕುಡಿಬಾರದು. ಯಾರ್ಯಾರ್ನ ಶಾರಾಪೆ ಕುಡಿತಾ ಅದೊ ಅವ್ರುರ್ಕಲ್ಲ ಈ ನನ್ನಮಗನಂಗಾಗಿ ರತರೆ. ಇಂತ ನನ್ನ ಮಕ್ಕಳ ಹಾವುಳಿ ತಡಿಯಕ್ಯಾಗದೆ ಶರಾಪನೆ ನಿಲ್ಲಿಸಿದ್ರು ಹೋಗತ್ತಗೆ."

"ದ್ವಡಪ್ಪ ನಿಲ್ಲಸದಷ್ಟು ಸುಲಭ ಅಂತ ತಿಳಕಂಡ್ಯಾ. ಎಷ್ಟು ಲಕ್ಷ ಜನ ಅದ್ನೆ ನಂಬಿಕಂಡವುರೆ. ಅವುರ್ಕಲ್ಲ ಏನು ಮಾಡಬೇಕು?"

"ಕಳ್ಳಬಟ್ಟಿ ದಂಧೆ ಸುರುವಾಯ್ತದಲ್ಲ ತಗೊ" ಎಂದ ಉಗ್ರಿ.

"ಅಂಗರೆ ನಿನಿಗೂ ಕ್ಯಲಸ ಸಿಗತದೆ ತಗಳ್ಳ" ಎಂದಳು ಜುಮ್ಮಿ.

"ಈಗದ್ಯಲ್ಲ ಮಾಡಕ್ಯಾಗದಿಲ್ಲ ಕಣೆ. ಆಗೇನೊ ನಮ್ಮವ್ವ ಕುಡಿಯೋರಿಗೆ ಮನೆಲಿ ಅವುಕಾಸ ಕೊಟ್ಟದ್ಲು ಅಂದ್ರೆ ಇವತ್ತು ನಾನು ಕೊಡಕ್ಯಾದತೆ? ಹ್ಯಂಗಿದ್ರು ಹೋಟ್ಲು ಚಿಕ್ಕಣ್ಣವುನೆ ತಗೊ" ಎಂದ ಉಗ್ರಿ.

"ನಾನಂತ ಕ್ಯಲಸಕೆ ಕೈಹಾಕದಿಲವಪ್ಪ, ಅಂತದೇನಾರ ಇಲ್ಲಿ ನ್ಯಡದ್ರೆ ಕಾಳಮಾವ ಸೀರಮಾವ ಇತ್ತಗೆ ತಲೆ ಹಾಕ್ಯರೆ" ಎಂದು ಹೋಟೆಲ್ ಚಿಕ್ಕ ಹೆದರಿ ಕೂತ.

"ನಾನು ಮದ್ಲೆ ಹೇಳ್ತಿನಿ ಚಿಕ್ಕ, ಅಂತದೇನಾರ ಇಲ್ಲಿ ಕಂಡ್ರೆ ಇತ್ತಗೆ ಮಕ ಹಾಕ್ಕು ಮನಗದಿಲ್ಲ ನಾನು" ಎಂದ ಕಾಳಮಾವ.

"ಮತ್ತೆ ಆ ಕಾಲದಲ್ಲಿ ಇಲ್ಲಿ ಬಂದು ಕುಡಿಯೋರಿಗ್ಯಲ್ಲ ನೀನೆ ಲೀದ್ರು ತರ ಇದ್ದಂತಲ್ಲ ದ್ವಡಪ್ಪ"

"ಆಗಿನ ಜನ ಈಗಿದ್ದರ್ಲ. ಭೈರೇಗೌಡಿದ್ದ, ನಿಂಗೇಗೌಡ ಹಾಳಪ್ಪ, ತುರುಬನಳ್ಳಿ ಗುಂಡಣ್ಣ ಇವುರ್ಕಲ್ಲ ಇದ್ದ ಜಾಕ್ಕೆ ಪೊಲೀಸು ಬರಂಗಿತ್ತೇನ್ಲ."

"ಮತ್ತೆ ತುರುಬನಳ್ಳಿ ಗುಂಡಣ್ಣನ್ನ ಪೊಲೀಸ್‌ನೋರು ಕರಕಂಡೋಗಿದ್ರು ಗೊತ್ತೆ?"

"ಥೂ ಅದು ಹಿಂಗಾಯ್ತು. ಈ ಗುಂಡಣ್ಣ ಕಳಬಟ್ಟಿ ಕುಡುದು ಗೇಟಂತ ನಿಂತಿದ್ದ. ಆಗ ಪೊಲೀಸ್ ಕೂಟ್ರಲ್ಲಿ ಹೊಯ್ತಿದ್ರು. ಈ ಗುಂಡಣ್ಣ ತಲೆ ಮರಸಿಗಂಡು ತ್ಯಪ್ಪಗಿರಬೇಕೊ ಬ್ಯಾಡವೊ? ಏನ್ ಸಾರ್ ಚನಾಗಿದೀರಾ, ಅಕ್ಕ ಚನಾಗಿದಾರಾ 'ಮಕ್ಕಳು ಚನಾಗಿದಾವ' ಅಂತ ತ್ವದ್ಲಿಸಿದ. ಓಹ್ ಓ, ಅಂತ ಪೊಲೀಸು ಗುಂಡಣ್ಣನ ಬಾಯಿ ಮೂಸಿದ್ರು, ಶರಾಪಿನ ಮಡಕೆ ಮೂಸಿದಂಗಾಯ್ತು, ಆಗ ತಗಂಡೋಗಿ ವಳಿಕಾಗಿದ್ರು" ಎಂದು ಸೀರ ನಕ್ಕ.

"ಶರಾಪು ನಿಂತ ಮ್ಯಾಲೆ ಅಂತವು ಜಾಸ್ತಿಯಾಯ್ತವೆ ಚಿಗಪ್ಪ."

"ಜಾಸ್ತಿಯಯ್ತವೆ ಅಂತ ಕೇಳ್ತಿಯಾ, ಈ ಬಿಂಡಿನೂಲೆ ಪೊಲೀಸು ಬರೀ ಆದೇ ಕ್ಯಲಸ ಮಾಡೋರು. ಕಾಡು ಮೇಡು ಹುಡಕೋರು, ಸಿಕ್ಕಿದೊರ್ನ ಬ್ಯಾಟಿ ಮಾಡೋರು. ಆ ಕಾಲವೆ ಒಂಥರಾ ಚನಾಗಿತ್ತು ಕಂಡ್ಯ" ಎಂದು ಸೀರ ಗತಕಾಲಕ್ಕೆ ಮಗಿಚಿಕೊಂಡು ಕಣ್ಣು ಮಿನುಗಿಸಿದ.

"ಆ ಕಾಲ ತಿರಗ ಬತ್ತದೆ ಚಿಗಪ್ಪ ಡೋಂಟ್ ವರಿ."

"ಆಗಿನ ಕಳ್ಳಬಟ್ಟಿ ಮೂಸಕ್ಕೆ ಖುಷಿಯಾಗದು ಕಂಡ್ರೊ, ಅಂಗೆ ಬ್ಯಾಲ್ದಣ್ಣಾ ಮೂಸಿದಂಗಾಗದು" ಎಂದ ಉಗ್ರಿ.



"ಅಂಗರೆ ನೀನು ಕುಡಿದಿದ್ನ?" ಎಂದಳು ಜುಮ್ಮಿ.

"ಏ ನಮ್ಮನಿಗೆ ತಂದು ಕುಡಿಯರಲ್ನೇ, ನಾನು ಆ ಬಾಟ್ಲಿ ಮೂಸತಿದ್ದೆ. ಇನ್ನೊಂದು ವಿಶೇಸ ಏನವ್ವ ಅಂದ್ರೆ, ಕಳ್ಳಬಟ್ಟಿ ಕುಡಿಯೋದ್ರಿಂದ ಯಾರೂ ಗಲಾಟಿ ಮಾಡದಂಗೆ ಹೋಗಿ ಮನಿಕಳರು, ಕೆಲುವುರು ಅಳೋರು, ಇನ್ನ ಕೆಲವರು ಕಾಲಿಗೆ ಬೀಳಕ್ಕೆ ಬರೋರು. ಆ ಕರಿಯಪ್ಪ ನಮ್ಮವ್ವನ ಕಾಲಿಗೆ ಬೀಳಕ್ಕೆ ಬರೋನು, ಇದಕೇನಂತೀ?"

"ನಿಜವೇನ್ಲ?"

"ಊ ಕಣೆ. ಯಂತ್ಯಂತ ಕ್ಯಟ್ಟ ಮನುಸರೆಲ್ಲಾ ಕಳಬಟ್ಟಿ ಕುಡದೇಟಿಗೆ ಧರಮರಾಯನಂಗಾಗೋರು."

"ಹೆಡತಿನೆ ಬುಟ್ಟು ಕೊಡೊರಾಗೋರು ಅನ್ನು?"

"ನೀನೇನೆ ಹಿಂಗಂತೀ?"

"ಮತ್ತೆ ನೀನು ಕುಡದೋರು ಧರಮರಾಯನಂಗಾಯ್ತರೆ ಅಂದ್ರೆ ಇನ್ನೇನಳನ?"

"ಬರೀ ಶರಾಪಿಂದೆ ಹೇಳತಿರಲ್ಲಾ, ಎಡೂರಪ್ಪ ಇನ್ನೇನು ಬೆನಿಪಿಟ್ ಕೊಟ್ಟವುನೆ ಹೇಳ್ಳ?" ಎಂದ ಕಾಳಮಾವ.

"ರೈತರಿಗಂತು ಬಂಪರ್ ಬೆನಿಪಿಟ್ ದ್ವಡಪ್ಪ"

"ಆದೇನಪ್ಪ ಅಂತದು?"

"ನೀನು ಬ್ಯಾಂಕಿನಲ್ಲಿ ಇಪ್ಪತ್ತೈದು ಸವುರ ಸಾಲ ತಗಂಡಿದ್ರೆ ಮನ್ನ, ಐವತ್ತು ಸವುರ ತಗಂಡಿದ್ರೆ ಆದೂ ಮನ್ನ."

"ಅಲಲಲೆ ಯಂಥಾ ಕ್ಯಲಸಾಯ್ತಯ್ಯ" ಎಂದ ಸೀರ.

"ಯಾಕ್ ಚಿಗಪ್ಪ?"

"ಸ್ವಸೆಟ್ಟಿ ಸಾಲ ವಾದ್ನೆ ವರಸ ಕಟ್ಟದೆ ಕಂಡ್ಯ."

"ಎಷ್ಟು ಸವುರ ಕಟ್ಟದೆ?"

"ಏಳು ಸವುರ ತಗಂಡಿದ್ದೆ, ಕಟ್ಟದೆ ಅತ್ತಗೆ."

"ಅಂಗರೆ ಇಪ್ಪತ್ತೈದರಿಂದ ಐವತ್ತು ಸವುರ ತಗಂಡಿದ್ದೊರು ಬದಿಕ್ಕೋದ್ರು ಅತ್ತಗೇ?"

"ನಮ್ಮ ಇಡೀ ಸುತ್ಲಳ್ಳಿಲಿ ಆಟೊಂತರ ಸಾಲವ ಬ್ಯಾಂಕಿನಿಂದ ಯಾವನು ತಗದಿದ್ದನೊ?" ಎಂದ ಉಗ್ರಿ.

"ಇನ್ಯಾರು ತಗದಿರತರೊ? ಬ್ಯಾಂಕಿನ ಡೈರಗುಟ್ರು, ಸದಸ್ಯರು, ಅವುರ ಸಮಂದಿಗಳು ತಗಂಡಿದ್ರು, ಉದ್ದಾರಾದ್ರು."

"ಯಾರೊ ಉದ್ದಾರಾದರಲ್ಲ ಬುಡು. ಆ ಎಡೂರ ಅವುನ್ಯಾರೋ ದನ ಸಾಕೋ ಸ್ವಾಮಿಗೆ ಯರಡು ಕೋಟಿ ಕೊಟ್ಟದ್ದನಂತೆ. ಇನ್ನು ನಮ್ಮ ರೈತರೂ ಬದಿಕ್ಯಳ್ಳೀಳೂ."

"ದನ ಸಾಕೊ ಸ್ವಾಮಿ ಅವುನ್ಯಾರ್ಲ?"

"ಅವುನ್ಯಾರೊ ಮಲ್ನಾಡಕಡೆ ಇದ್ದನಂತೆ. ರಾಗವೇಂದ್ರ ಸ್ವಾಮಿ ಅಂತ. ಅವುನು ಯಂತ್ಯಂತವೊ ಕೋಡುಮುರುಕ, ಕಿವಿಯರಕ, ಮೋಟ ಬಗ್ರಿ, ಹೀನಸುಳಿ ದನನ್ಕಲ್ಲ ದಾನತಗಂಡು ಸಾಕ್ತಯಿದ್ದನಂತೆ. ಅವುನಿಗೆ ಇವುನು ಯರಡು ಕೋಟಿ ಕೊಟ್ಟನಂತೆ. ಲ್ಯಕ್ಕಹಾಕು."

"ನೋಡು ಮತ್ತೆ."

"ಹೇಳ್ತೀರಿ ನೀವು. ಅತ್ತೆದ ಅಳಿಯ ದಾನ ಮಾಡಿದಂಗೆ ಈ ಎಡೂರ ಸಿಕ್ಕ ಸಿಕ್ಕಿದೋರಿಗ್ಯಲ್ಲ ಇರುದು ಕೊಟ್ಟ ಅತ್ತಗೆ."

"ಇಸಿಸಿ ಅವುನಿರದೆ ಅತ್ತೆ ಮನೆಲಲವೇನ್ನ?"

"ಹೌದಲ್ಲವೆ?"

" !?".

–ಬಿ. ಚಂದ್ರೇಗೌಡ

ಕಾಳೇಗೌಡರಿಗರವತ್ತು!

ಕಾಳೆಗೌಡ ನಾಗವಾರರಿಗೆ-60 ವರ್ಷ ತುಂಬಿತೆಂದು ಪತ್ತೆ ಹಚ್ಚಿರುವ ಅವರ ಅಭಿಮಾನಿ ಬಳಗದವರು ಒಂದು ಅಭಿನಂದನಾ ಗ್ರಂಥ ಮತ್ತು ಅಭಿನಂದನಾ ಸಮಾರಂಭವನ್ನ ಇದೇ 28 ರಂದು ಮೈಸೂರಿನ ಕುವೆಂಪು ಅಧ್ಯಯನ ಸಂಸ್ಥೆಯ ಸಭಾಂಗಣದಲ್ಲಿ ಇಟ್ಟುಕೊಂಡಿದ್ದಾರೆ.

ಬಹಳ ವರ್ಷ ತಮ್ಮ ವಯಸ್ಸನ್ನು ಸ್ಥಗಿತಗೊಳಿಸಿಕೊಂಡಂತಿದ್ದ ಕಾಳೇಗೌಡರು ಇನ್ನು ಸಾಧ್ಯವಿಲ್ಲ ಎಂಬಂತೆ ಅರವತ್ತು ವರ್ಷ ತುಂಬಿಸಿಕೊಂಡಿದ್ದಾರೆ. ಅಸ್ತವ್ಯಸ್ತ ಬದುಕಿನ ನವ್ಯರು, ಮತ್ತವರ ಸಂತಾನದಂತಿದ್ದ ಬಂಡಾಯದವರ ನಡುವೆಯಿದ್ದು ತಮ್ಮ ಶಿಸ್ತು; ಜೀವನ ಪ್ರೀತಿ ಹಾಗು ಖಾಸಗೀ ಸುಖಗಳನ್ನ ಬಹುದಾಗಿ ಪ್ರೀತಿಸಿದ ಕಾರಣಕ್ಕೆ ನಲವತ್ತರ ಹುಮ್ಮಸ್ಸಿನಲ್ಲೇ ಕಾಳೇಗೌಡರು ಇದ್ದಾರೆ. ಲೋಹಿಯಾ ಮತ್ತು ಕುವೆಂಪು ವಿಚಾರಧಾರೆಯಿಂದ ಪ್ರಭಾವಿತರಾಗಿದ್ದ ಅಂದಿನ ತರುಣ ಕಾಳೇಗೌಡರು ತಮ್ಮ ಮದುವೆಯಿಂದಲೇ ಹೊಸ ವಿಚಾರಧಾರೆಯನ್ನ ನಮ್ಮ ಹಳ್ಳಿಗಳಲ್ಲಿ ಉದ್ಘಾಟಿಸಿದರು.

"ಮದುವೆಯಿಂದಲೇ ಸಾಲಗಾರರಾಗಿ, ಪುರೋಹಿತರು ಹೇಳಿದಂತೆ ಕೇಳುತ್ತಿದ್ದ, ಹಳ್ಳಿಯ ಮುಗ್ಧರ ಕಣ್ಣು ತೆರೆಸಲೋಸ್ಕರ, ನಮ್ಮ ಮದುವೆ. ಯಾವುದೇ ಶಾಸ್ತ್ರಗಳಿಲ್ಲದೆ ನಡೆಯುತ್ತೆ ಹಾಗೂ ಪುರೋಹಿತರ ಬದಲಿಗೆ ಒಬ್ಬ ಹರಿಜನರ ವ್ಯಕ್ತಿ ತಾಳಿಕಟ್ಟಿಸುತ್ತಾನೆ" ಎಂದು ಘೋಷಿಸಿದರು. 1972 ರಲ್ಲಿನ ಈ ಘಟನೆ ಒಂದು ದೊಡ್ಡ ಸುದ್ದಿಯಾಗಿತ್ತು; ಗಂಡಿಗೆ ತಲೆ ಕೆಟ್ಟದೆ ಎಂದು ಜನ ಭಾವಿಸಿದರು. ಇಂತಹ ಮದುವೆ ತಡೆಯಲು ಸಾಧ್ಯವಿಲ್ಲವೆಂದು ಗೊತ್ತಾದಾಗ ಹರಿಜನರವನಿಗೆ ಬೆದರಿಕೆ ಹಾಕಿ ಆತ ಪುರೋಹಿತನಾಗದಂತೆ ಸುಮ್ಮನಾಗಿಸಿದರು. ಕಾಳೇಗೌಡರು ನಿರಾಶರಾಗದೆ ಹಟಕ್ಕೆ ಬಿದ್ದಾಗ, ಅಂದು ಅರಸು ಸಂಪುಟದಲ್ಲಿ ಮಂತ್ರಿಯಾಗಿದ್ದ ಕೆ.ಎಚ್. ರಂಗನಾಥ್ ತಾವೇ ಬಂದು ಮುಂದೆ ನಿಂತು ತಾಳಿ ಕಟ್ಟಿಸಿದರು. ಕುತೂಹಲದ ಈ ಮದುವೆಗೆ ಸಾವಿರಾರು ಜನ ಬಂದರು. ಯಾರಿಗೂ ಊಟವಿಲ್ಲ, ಬಂದ ದಾರಿಗೆ ಸುಂಕವಿಲ್ಲದಂತೆ ಮದುವೆ ಮಾಡಿಕೊಂಡು ಮನೆಗೆ ಹೋದರು. ಈ ಮದುವೆಯ ದೆಸೆಯಿಂದ, ಆ ಪ್ರಾಂತ್ಯದಲ್ಲಿ ಸರಳ ಮದುವೆಗಳು ಪ್ರಾರಂಭಗೊಂಡು ಆನಂತರ ಅಸಂಖ್ಯ ಸರಳ ಮದುವೆಗಳು ಜರುಗಿದವು.



ಕುವೆಂಪು ನೀವು ಏನಾದರು ಸಾಧಿಸುವುದಿದ್ದರೇ ಅದನ್ನ ನಿಮ್ಮ ಮದುವೆಯಿಂದಲೇ ಪ್ರಾರಂಭಿಸಿ ಎಂದು ಹೇಳಿದ್ದರು. ಅದರಂತೆ ಕಾಳೇಗೌಡರು ತಮ್ಮ ಮದುವೆಯನ್ನೇ ಸ್ವಾಭಿಮಾನದ ಚಳವಳಿಯಾಗಿ ಪ್ರಾರಂಭಿಸಿದ ಕಾರಣಕ್ಕೆ ಅವರ ಅಸಂಖ್ಯಾತ ಶಿಷ್ಯರು ಹಾಗೇ ಆದರು. ನಮ್ಮನಡುವಿನ ತಬ್ಬಲಿ ಜಾತಿಗಳ ಹುಡುಗರ ಭುಜದ ಮೇಲೆ ಕೈ ಹಾಕಿ. ಅವರ ಕೀಳರಿಮೆ ಹೋಗಲಾಡಿಸಿ, ಆತ್ಮವಿಶ್ವಾಸ ತುಂಬುವಲ್ಲಿ ತಮ್ಮ ಬದುಕಿದ ಅರ್ಧ ಆಯಸ್ಸನ್ನು ಕಳೆದಿರುವ ಕಾಳೇಗೌಡರು, ಕರ್ನಾಟಕದ ಉದ್ದಗಲಕ್ಕೆ ಬಹಳವಾಗಿ ಸಂಚರಿಸಿದ್ದಾರೆ ಕರ್ನಾಟಕದ ಹಲವಾರು ಸಾಂಸ್ಕೃತಿಕ ಚಳವಳಿಯಲ್ಲಿ ಭಾಗವಹಿಸಿದ್ದಾರೆ.

ವೃತ್ತಿ ಬದುಕಿನಲ್ಲಿ ದೊರಕುವ ಉನ್ನತ ಸ್ಥಾನಗಳಿಗೆ ಶಕ್ತಿ ಮೀರಿ ಪ್ರಯತ್ನಿಸಿದ್ದಾರೆ. ಹಾಗೆ ಪ್ರಶಸ್ತಿ ಪುರಸ್ಕಾರಗಳ ಕಡೆಗೂ ಆಸೆಗಣ್ಣಿಂದ ನೋಡಿದ್ದಾರೆ. ಅಂತಹ ಪ್ರಶಸ್ತಿಗಳ ಅರ್ಹತೆಯೂ ತಮಗಿದೆ ಎಂದಿದ್ದಾರೆ. ಒಂದಷ್ಟು ಫ್ಯೂಡಲ್ ಗತ್ತು ಕೂಡ ಕಾಳೇಗೌಡರಲ್ಲಿ ಮನೆಮಾಡಿಕೊಂಡಿರುವುದರಿಂದ ಅದಕ್ಕೆ ತಕ್ಕಂತೆ ವರ್ತಿಸಿದ್ದಾರೆ. ಅದರ ಅರಿವಾದಾಗ ಅದಕ್ಕೆ ವಿವರಣೆಯನ್ನೂ ಕೊಟ್ಟಿದ್ದಾರೆ.

ಎಲ್ಲಕ್ಕಿಂತ ಮುಖ್ಯವಾಗಿ ಅವರ ಸಾಧನೆಯ ಗರಿಯೆಂದರೆ, ಆಳುವವರಿಗೆ ವಿವೇಕ ಹೇಳಿ, ಡಾ. ರಾಮಮನೋಹರ ಲೋಹಿಯಾರ ಸಮಗ್ರ ಕೃತಿಗಳು ಪ್ರಕಟವಾಗುವಂತೆ ಮಾಡುವಲ್ಲಿ ಶ್ರಮವಹಿಸಿದ್ದು. ಅಲ್ಲದೆ ನಮ್ಮ ನಾಡಿನ ಅಪರೂಪದ ರಾಜಕಾರಣಿಯಾದ ಶಾಂತವೇರಿ ಗೋಪಾಲಗೌಡರ ನೆನಪು ಅಳಿಸಿಹೋಗದಂತೆ, ಅವರನ್ನು ಕುರಿತ ನೆನಪಿನ ಸಂಪುಟ ತಂದಿದ್ದು. ಯಾರ ಮನಸ್ಸಿನಾಳದಲ್ಲಿ ಈ ಗೋಪಾಲಗೌಡರು ಕಾಡಿಸುತ್ತಾರೋ ಅವರೆಲ್ಲಾ ಈ ಸಮಾಜದ ಕಟ್ಟಕಡೆಯವರ ಬದುಕು ಹಸನಾಗಲೆಂದು ಸದಾ ತುಡಿಯುತ್ತಿರುತ್ತಾರೆ.ಅವರನ್ನು ಈ ಕಾರಣಕ್ಕೆ ಕಾಳೇಗೌಡರು ತಮ್ಮ ವಾರಿಗೆಯ ವಿದ್ವಾಂಸರು, ಲೇಖಕರ ನಡುವೆ ಎದ್ದು ಕಾಣುತ್ತಾರೆ.

ಅವರು ಬರಿ ಕತೆಗಾರರಾಗಿ ಉಳಿಯಲಿಲ್ಲ ಅಥವಾ ಉಪನ್ಯಾಸಕರಾಗಿ ಮನೆಯಲ್ಲಿ ಕೂರಲಿಲ್ಲ, ಅವರ ಮನೋಗತಕ್ಕೆ ಸಹಜವಾಗಿದ್ದ ದೇಶಿ ಸಂಸ್ಕೃತಿಗಳ ತಾಯಿಗುಣಗಳಿಗೆ ಮನಸೋತು, ಜನಪದ ಲೋಕವನ್ನು ಪ್ರವೇಶಿಸಿದರು. ಬಂಡಾಯ ಸಂಘಟನೆಯ ಒಂದು ಭಾಗವಾಗಿದ್ದರು. ಇಲ್ಲೆಲ್ಲೂ ಭೀಕರ ಗಡಿಗಳನ್ನ ನಿರ್ಮಿಸಿಕೊಳ್ಳದೆ, ನವೋದಯದ ಹಿರಿಯರು, ಪ್ರಗತಿಪರ ಚಿಕ್ಕಪ್ಪಂದಿರು, ನವ್ಯದ ಸಹೋದರರು ಹಾಗು ಬಂಡಾಯದ ಮಕ್ಕಳೊಂದಿಗೆಲ್ಲಾ ತುಂಬು ಅಂತಃಕರಣದ ಒಡನಾಡಿಯಾಗಿದ್ದುಕೊಂಡೇ ಬಂದಿದ್ದಾರೆ. ಈಗ ತುಂಬು ಜೀವನದೆಡೆಗೆ ಹೊರಟಿರುವ ಕಾಳೇಗೌಡರಿಗೆ 'ಲಂಕೇಶ್' ಶುಭ ಹಾರೈಸುತ್ತದೆ.

–ಬಿಚಂ

...ಪಾವಳಿಯಾದ್ದರಿಂದ ವಿಶೇಷ ಸಂಚಿಕೆಯಲ್ಲಿ ಒಂದು ಶೃಂಗಾರದ ಪುಟ ಇರುತ್ತದೆ. ...ದಸಲ ಕ್ರೇಜಿ ಜೇನ್ ಬಗ್ಗೆ ಇತ್ತು; ಈಕೆ ಕವಿ ಏಟ್ಸನ ತುಂಟ, ಆತನ ಒಳಗಿರುವ ಕಾಮಿನಿಯ ...ಳೆ. ಅದಕ್ಕಿಂತ ಹೋದಸಲ ಕಾಮಸೂತ್ರದ ಒಂದು ಸೂತ್ರ ಇತ್ತು. ಈ ಸಲ ಕವಿ ನೆರೂದನಲ್ಲಿ ...ೀಷಯ ಅದಷ್ಟರ ಬಗ್ಗೆ ಇದೆ.

...ಜಕ್ಕೂ ಬರೆಯಲು ಉದ್ದೇಶಿಸಿದ್ದು ಬೇರೆ. ನಾಲ್ಕೈದು ತಿಂಗಳಿಂದ ಜೋಸೆಫೀನ್ ನನ್ನ ...ಸಿನಲ್ಲಿದ್ದಳು. ಪುಟಿಂದೆಯಾದ ಹೆಂಗಸು ಈಕೆ. ಹಳ್ಳಿಯ ಹುಡುಗಿ, ಹಸಿಹಸಿಯಾಗಿ ಹಳ್ಳಿಯಿಂದ ... ಜೋಸೆಫೀನ್‌ನಲ್ಲಿದ್ದದ್ದು ಸೂಜಿಗಲ್ಲಿನಂಥ ರೂಪ, ತುಂಬು ಯೌವನ. ಆದರೆ ಈಕೆಯ ...ರತನ ಕಂಡ ಈಕೆಯ ಗಂಡ ಇವಳನ್ನು ದೂರ ಮಾಡಿದ. ಈಕೆ ಎದೆಗುಂದಲಿಲ್ಲ. ಮತ್ತೆ ...ಗೆ ಹೋದಳು. ಅಲ್ಲಿಂದ ಮತ್ತೆ ಪಟ್ಟಣಕ್ಕೆ ಬಂದಳು. ಪ್ಯಾರಿಸ್‌ನ ಜೀವನಾಡಿಯನ್ನು ಗ್ರಹಿಸಿದಳು. ...ಲ ನಿಜವಾದ ಸಿಂಹವನ್ನೇ ಬಲೆಗೆ ಬೀಳಿಸಿಕೊಂಡಳು. ಈತ ನೆಪೋಲಿಯನ್.

...ಮೂವತ್ತು ವರ್ಷ ಮೀರಿದ್ದ ಜೋಸೆಫೀನ್ ನೆಪೋಲಿಯನ್‌ನ ಹೃದಯದಲ್ಲಿ ಕಾರಂಜಿ ಚಿಮ್ಮಿಸಿ ...ೆ ಪತ್ನಿಯಾದಳು. ಅವನನ್ನು ಬೆರಳ ಸುತ್ತ ತಿರುಗಿಸತೊಡಗಿದಳು. ನೆಪೋಲಿಯನ್ ಜಗತ್ತನ್ನೆಲ್ಲ ...ವ ಸಾಹಸದಲ್ಲಿ ತೊಡಗಿದ್ದಾಗ ಜೋಸೆಫೀನ್ ಸುಮ್ಮನೆ ಕೂರಲಿಲ್ಲ. ತನ್ನ ಹಳೆಯ ಚಾಳಿ ...ಮುವರೆಸಿ ಪ್ರಿಯಕರರೊಂದಿಗೆ ಗೌಪ್ಯ ಪ್ರೇಮದಲ್ಲಿ ಪುಲಕಿತಳಾದಳು. ಒಮ್ಮೆ ನೆಪೋಲಿಯನ್ ...ವೇದನೆ ತಾಳಲಾರದೆ ಈಕೆಯನ್ನು ಯುದ್ಧ ಭೂಮಿಗೆ ಕರೆಸಿದ ಜೋಸೆಫೀನ್ ಬಂದಳು ...ೆ ...ನ್ನ ...ಜ್ ...ಗೆ ...ಕರ

ಚಂಚಲೆ




...ತಂದಿದ್ದಳು. ನೆಪೋಲಿಯನ್‌ಗೆ ... ಗೊತ್ತಾಗಿ ಸಿಟ್ಟು ಮಾಡಿದ. ಜೋಸೆಫೀನ್ ... ಕೇಳಿಕೊಂಡಳು. ಪ್ಯಾರಿಸ್‌ಗೆ ಹಿಂದಿರುಗಿದ ...ೆ ಮುಂಚಿನಂತೆಯೇ ಪ್ರೇಮಿಯೊಂದಿಗೆ ...ಣಗಳನ್ನು ಮುಂದುವರಿಸಿದಳು.

...ನೆಪೋಲಿಯನ್ ಈಕೆಯ ಸೆರೆಯಾಳಾಗಿದ್ದ. ...ೆ ಈಕೆಗೆ ಮಕ್ಕಳಾಗಲಿಲ್ಲ ಎಂಬ ಕಾರಣಕ್ಕೆ ...ಯನ್ನು ದೂರ ಮಾಡಿದ. ಇದಕ್ಕಾಗಿ ...ಚಿಯೇ ಮದುವೆ ಯಲ್ಲಿ ತಾಂತ್ರಿಕ ದೋಷಗಳಿ ...ಂತೆ ನೋಡಿಕೊಂಡಿದ್ದ.

...ಜೋಸೆಫೀನ್‌ಳನ್ನು ಹತ್ತಿಕ್ಕುವುದು ಮಾತ್ರ ಸಾಧ್ಯವಿರ ಲಿಲ್ಲ. ನೆಪೋಲಿಯನ್ ಪತನಗೊಂಡು ...ತನಾಗಿ ಸಿಸಿಲಿಯಲ್ಲಿ ಪತನಗೊಂಡು ಸೆರಮನೆ ಸೇರಿದಾಗ ಜೋಸೆಫೀನ್ ಯೂರೋಪಿನ ...ರೆಯೊಬ್ಬನೊಂದಿಗೆ ಬಾನಗಡಿಯಲ್ಲಿ ತೊಡಗಿದ್ದಳು.


...ಸೋಲು, ಗೆಲುವಿನ ವಿಚಿತ್ರ ಅರ್ಥ ತೋರುವ ಈ ಜೋಸೆಫೀನ್-ನೆಪೋಲಿಯನ್ನರ ಪ್ರೇಮ, ...ಕೀಯ ಮತ್ತು ಅಮ ಲೇರಿಸುವ ಕಾಮ ವಿಚಿತ್ರ.



ಅಕ್ಟೋಬರ್ 16, 1988

ಬೆಚ್ಚನ ಮನೆ

ನೆನ್ನುಸ್ಸು ನಿಜಕ್ಕೂ, ಮಂತ್ರಮುಗ್ಧನನ್ನಾಗಿಸುವುದು ಉನ್ನತ ಕಟ್ಟಡಗಳಾಗಲಿ, ವೈಭವದ ಅರಮನೆಗಳಾಗಲಿ ಅಲ್ಲ, ಗಾನಾಗಲೇ ಬರೆದಿರುವ ಗುಬ್ಬಚ್ಚಿ ಗೂಡು. ಈ ಗುಬ್ಬಚ್ಚಿ, ಬೆಳವ, ಪಾರಿವಾಳ, ಮರಕುಟುಗ ಮುಂತಾದ ಹಕ್ಕಿಗಳು ಎಷ್ಟು ಸ್ವಚ್ಛ ಸದಾ ಪರಿಶುದ್ಧವಾಗಿ ಇರುತ್ತವೆ. ಅಲ್ಲದೆ ಆ ಗೂಡು, ಸುಮಾರು ಅರ್ಧ ಕೆ.ಜಿ. ತೂಕದ ಗುಬ್ಬಚ್ಚಿ ಗೂಡಿನಲ್ಲಿ ಎಷ್ಟು ಎಳೆಗಳಿರುತ್ತವೆ, ಎಷ್ಟು ಹುಲ್ಲಿಗೆ, ಹೆಣಿಕೆಗಳಿರುತ್ತವೆ, ಹೇಗೆ ಸರಳವಾಗಿ ಅನುಕೂಲಕ್ಕೆ ತಕ್ಕಂತೆ ಕಟ್ಟುತ್ತವೆ ಗುಬ್ಬಚ್ಚಿ, ಕೊಂಬೆಗೆ ನೇತುಹಾಕುವ ಹಗ್ಗ, ನೀರು ಬೀಳ ದಂತೆ ಸೂರು, ಒಳಗೆ ಕೂರಲು ಉಬ್ಬು ಜಾಗ, ಮೊಟ್ಟೆ ಇಡಲು ಬೆಚ್ಚನೆಯ ಗುಳಿ. ಕೆಳಗೆ ಕಸವೆಲ್ಲ ಬಿದ್ದು ಹೋಗುವಂತೆ ರಂಧ್ರ.



ಮೊಟ್ಟೆ ಇಡುವ ಮುನ್ನ, ಗರ್ಭ ಧರಿಸುವುದಕ್ಕೂ ಮುನ್ನ ಈ ಗುಬ್ಬಚ್ಚಿಗಳು ಗೂಡು ಕಟ್ಟತೊಡಗುತ್ತವೆ. ಎಂಥ ಸಹನೆಯ, ಜಾಣತನದ, ವಿಚಿತ್ರ ನೆನಪುಗಳಿಂದ ಹೆಣೆದ, ಜೀವ ದಾಸರೆಯ ಕಾತರವುಳ್ಳ ಕ್ರಿಯೆ. ತನ್ನ ಮೊಟ್ಟೆ, ಮರಿಗಾಗಿ, ತನ್ನ ವಂಶದ ಬೆಳವಣಿಗೆಗಾಗಿ. ಆದರೆ ತತ್ತಿಯ ಮೇಲೆ ಕೂತು ಮರಿಮಾಡಿ ಗುಟುಕು ಕೊಟ್ಟು ಬೆಳಸಿ ಸಹಸ್ರಾರು ಹಕ್ಕಿಗಳೊಂದಿಗೆ ತನ್ನ ವಂಶವನ್ನು ಬೆರೆಸಿ ಕಣ್ಮರೆಯಾಗುತ್ತದೆ.

ಎರಡು ಕಾಗೆ ಕತೆ


ಮೊನ್ನೆ ಗೆಳೆಯನೊಬ್ಬ ಎರಡು ಕಾಗೆಗಳ ಬಗ್ಗೆ ಕತೆ ಹೇಳಿದ. ಕಾಗೆಯ ಗೂಡು ಗುಬ್ಬಚ್ಚಿಯ ಗೂಡಿನಷ್ಟು ಕಲಾತ್ಮಕವಾಗಿರುವುದಿಲ್ಲ, ಕಡ್ಡಿಗಳಿಂದ ಮಾಡಿರುತ್ತವೆ. ದಂಪತಿಗಳಾದ ಎರಡು ಕಾಗೆಗಳಿದ್ದವಂತೆ. ರಾತ್ರಿ ಗೂಡಿಗೆ ಬಂದವು. ಗೂಡು ಕೆಟ್ಟ ಸ್ಥಿತಿಯಲ್ಲಿತ್ತು, ಕಡ್ಡಿಗಳೆಲ್ಲ ಅಸ್ತವ್ಯಸ್ತವಾಗಿದ್ದವು. ಹೆಣ್ಣು ಕಾಗೆ ಸರಿಮಾಡಲಿ ಎಂದು ಗಂಡು ಸುಮ್ಮನಿತ್ತು; ಗಂಡೇಕೆ ರಿಪೇರಿ ಮಾಡಬಾರದು ಎಂದು ಹೆಣ್ಣು ಸುಮ್ಮನಿತ್ತು. ಮರುದಿನ ಗೂಡು ಇನ್ನಷ್ಟು ದುರವಸ್ಥೆ ತಲುಪಿತ್ತು. ಆದರೂ ಕಾಗೆಗಳು ಪರಸ್ಪರ ಸಿಟ್ಟಿನಿಂದ ಸುಮ್ಮನಿದ್ದವು. ಗೂಡು ದಿನದಿನಕ್ಕೆ ಹಾಳಾಗಿ ಕೊನೆಗೆ ಒಂದೇ ಕಡ್ಡಿ ಉಳಿಯಿತು. ಆ ಕಡ್ಡಿಗಾಗಿ ಎರಡೂ ಕಾಗೆಗಳು ಸ್ಪರ್ಧಿಸಿ, ಕಿತ್ತಾಡಿ ಆ ಕಡ್ಡಿಯೂ ನೆಲಕ್ಕೆ ಬಿದ್ದುಹೋಯಿತು. ಮಳೆ ಬಂದು ಕಾಗೆಗಳನ್ನು ದಂಗು ಬಡಿಸಿತು. ಮಂಜು ಜಗತ್ತನ್ನೆಲ್ಲ ಮುಚ್ಚಿದಾಗ ಸಣ್ಣ ಮನಸ್ಸಿನ ಆವೆರಡೂ ಕಾಗೆಗಳು ಸತ್ತು ಹೋದವು.



ಇದು ಕತೆಯೆಂದು ಬೇರೆ ಹೇಳಬೇಕಾದ್ದಿಲ್ಲ. ಮನುಷ್ಯರಿಗೆ ನೀತಿ ಹೇಳುವ ಇದು. ಗುಬ್ಬಚ್ಚಿಯ ಗೂಡು, ಕಾಗೆಯ ಜಗಳ ಕೂಡ ಮನುಷ್ಯರಲ್ಲಿ ನೀತಿ ಕತೆಗಳಾಗಿ ರೂಪುಗೊಳ್ಳುತ್ತವೆ. ಹೀಗಾಗಿಯೇ ಮನುಷ್ಯನ ಜೀವನ ನೆನಪು, ಆಶೆಗಳಿಂದ ಜಟಿಲಗೊಂಡು ಆತನನ್ನು ಪೂರ್ಣವಾಗಿ ಹತ್ತಿಕ್ಕಿ ವಿಕೃತನನ್ನಾಗಿಸಿದೆ.

ಹಕ್ಕಿಯಂತೆ ಸ್ವಚ್ಛವಾಗಿದ್ದು ಹಾರಲಾರದ ಮನುಷ್ಯ ವಿಮಾನಗಳಿಂದ ಉರಿದು ಬೀಳುವುದು ಮತ್ತೊಂದು ಕತೆಯಾಗಬಹುದಲ್ಲವೆ?

...ಕುಮಾರಸ್ವಾಮಿ ಗ್ರಾಮ ವಾಸ್ತವ್ಯಕ್ಕೂ ನಟಿ ರಾಧಿಕಾ ಮನೆ ವಾಸ್ತವ್ಯಕ್ಕೂ ಏನು ವ್ಯತ್ಯಾಸ?



... ಮುಕ್ರಂ ಪಾಷ. ಕೊಳ್ಳೇಗಾಲ
...ಮ್ಮಾರು ನಿಜಕ್ಕೂ ಗಾರ್ಡನ್ ಸಿಟಿನಾ?
...ರ್ಬೇಜ್ ಗಾರ್ಡನ್ ಸಿಟಿ ಕಣ್ರೀ.

...ರ್ ಸಿ. ಕಾಲಿಮಿರ್ಚಿ. ಭಾಗ್ಯನಗರ
...ಕಾಳಂಥ ಬೆಡಗಿಯರು ಮನೆಗೊಬ್ಬರು ಇದ್ದಿದ್ದರೆ ...ತನ ದೂರವಾಗಬಹುದಾ?
...ದರೆ ರಾಜ್ಯ ಬಡವಾಗುತ್ತಿತ್ತು ಗೊತ್ತಾ.

...ದಿನಿ ಮಂಜುನಾಥ. ...ಸುಗಿರಿ
...ರಿ ವಿಚಾರದಲ್ಲಿ ಹಿಂದೆಲ್ಲಾ ...ದಿರುತ್ತಿದ್ದ ಗೌಡ್ರು ಈಗೇಕೆ ... ಹಿಂದೆ?
...ತ್ರ ವ್ಯಾಮೋಹ ಮುಂದೆ ...ದೆ ಆಗಿರುವುದರಿಂದ.

...ಲ್.ಸುರೇಶ್. ಹರಪನಹಳ್ಳಿ
...ಜಾ ಧಣಿಗಳು ಇಂದ್ರ-ಚಂದ್ರರಾ ... ರಂಭೆ-ಮೇನಕೆಯರು?
...ರಿಗೊಬ್ಬಳೇ ಕರಂದ್ಲಾಜೆ!

...ಗೆರೆ ಲ. ಕೃಷ್ಣೇಗೌಡ. ರಾಮನಗರ
...ಪತ್ರಿಕೆಗಳನ್ನು ಉಚಿತವಾಗಿ ನೀಡಿದರೂ ಓದುವಷ್ಟು ...ಲ್ಲವಲ್ಲ ಕೆಲವರಿಗೆ?
...ು ಕನ್ನಡ ಪತ್ರಿಕೆಗಳಲ್ಲ, ಇಂಗ್ಲಿಷ್‌ನ ಅನುವಾದಿತ ...ಗಳು.

...ಟಿ. ಕುಮಾರ. ರಾಮದುರ್ಗ
...ಮಗ-ಸೋನಿಯಾ ಒಂದಾದರೆ ಸಿದ್ಧರಾಮಯ್ಯನ ಗತಿ?
* ಚಾಮುಂಡೇಶ್ವರಿಯ ಬಲಿಯ ಪರಿಸ್ಥಿತಿ!

ಪಿ.ಎನ್. ಶ್ರೀವತ್ಸ. ಬೆಂಗಳೂರು
ಇನ್ನು ಕೆಲದಿನಗಳಲ್ಲಿ ಮುಖ್ಯಮಂತ್ರಿ ಸ್ಥಾನ ಸಿಕ್ಕೇ ಸಿಗುತ್ತದೆ ಎಂಬ ಹಗಲುಗನಸಿನಲ್ಲಿ ಯಡಿಯೂರಪ್ಪ ಇರಲು ಕಾರಣ?
* 'ಶೋಭಾ'ಯ ಮಾನವಾದ 'ಸ್ವೀಟ್ ಡ್ರೀಮ್ಸ್'ನ ಪ್ರಭಾವ.

ಡಿ.ಎಲ್. ನಾಗರಾಜ್. ಹರಪನಹಳ್ಳಿ
ಕುಮಾರನಿಗೆ ಯಡ್ಡಿಯ ಸಂಗ ಅಧಿಕಾರ ಭಂಗ, ರೆಡ್ಡಿಯ ಸಂಗ ಮಾನಭಂಗ, ಲಾಡ್‌ನ ಸಂಗ ಅಭಿಮಾನ ಭಂಗ, ನಟಿ ರಾಧಿಕಾ ಸಂಗ....?
* ಅನಿತಕ್ಕನ ಶಾಂತಿಭಂಗ!

ಓದು ಸಿದ್ದೇಗೌಡ. ಕಬ್ಬೇಹಳ್ಳಿ
'ಬಾಂಬ್' ಬಾಲಕನಿಗೂ, 'ಬೆತ್ತಲೆ' ಬಾಲಕನಿಗೂ ಇರುವ ಸಾಮ್ಯತೆಯೇನು?
* ಇಬ್ಬರೂ ನಕಲಿ ವೀರರೇ.

ಶಿವಕುಮಾರ್. ಸುರಪೂರ
ಬಜೆಟ್ ಮಂಡನೆಯ ಕಸರತ್ತಿಗೂ; ಪ್ರಸವದ ಕಸರತ್ತಿಗೂ ಇರುವ ವ್ಯತ್ಯಾಸ?
* ಯಡ್ಡಿ ಗರ್ಭ ಧರಿಸಿದಷ್ಟೇ.

ಸಾಬಿಯಾ ಬೇಗಂ. ದೇವದುರ್ಗ
ಸೌರವ್ ಗಂಗೂಲಿ ಸೀರೆಗಳು ಬಂದಿವೆಯಂತೆ?
* ಶ್ರೀಲಂಕಾದಿಂದ ಏಟು ತಿಂದ ನಂತರ ಬುರ್ಖಾಗಳೂ ಬರುತ್ತವೆ ಇರಿ.

ಕೆ.ವಿ.ಶಿವಕುಮಾರ್. ಕಾಳೀಹುಂಡಿ
ಕುಮಾರಣ್ಣನ ಬ್ಯಾಟಿಂಗ್ ಮುಗಿದಿದೆ. ಮುಂದಿನ ಪಂದ್ಯ ನಡೆಯುತ್ತದೆಯೇ?
* ದೇವೇಗೌಡರು ಮ್ಯಾಚ್ ಫಿಕ್ಸಿಂಗ್ ಮಾಡುವ ನಿರ್ಧಾರ ತೆಗೆದುಕೊಂಡಿದ್ದಾರೆ.



ಅನಿಲ್‌ಕುಮಾರ್ ಕೋಟೆ. ದೇವದುರ್ಗ
ಗೌಡರ ಗೆಟಪ್ ಕರ್ನಾಟಕದ ಸ್ವಮೇಕೋ; ತಮಿಳು ನಾಡಿನ ರಿಮೇಕೋ?
* ಅದೊಂದು ದರಿದ್ರ ರೀಮಿಕ್ಸ್ ಕಣ್ರೀ.

ಡಿ.ಎಲ್. ಚಂದ್ರಿಕಾ. ಹರಪನಹಳ್ಳಿ
ರಸಿಕ ಕುಮಾರ ಹಾಗೂ ರಮಣಿ ರಾಧಿಕಾ ಡ್ಯೂಯೆಟ್ ಗೀತೆಗೆ ಸಂಗೀತ ನಿರ್ದೇಶಕರು ಯಾರು?
* 'ಓಡಿ ಬಾ, ಓಡೋಡಿ ಬಾ' ಎಂದು ಕರೆ ನೀಡಿದ IGP ಕಿಶೋರ ಚಂದ್ರ.

ಇಂದಿರಾ ಶ್ರೀಧರ್. ದಾವಣಗೆರೆ
ಕುಮಾರಸ್ವಾಮಿ ಗ್ರಾಮ ವಾಸ್ತವ್ಯಕ್ಕೂ, ನಟಿ ರಾಧಿಕಾ ಮನೆ ವಾಸ್ತವ್ಯಕ್ಕೂ ಏನು ವ್ಯತ್ಯಾಸ?
* ಅದು ಹುಡುಗಾಟ, ಇದು ಚೆಲ್ಲಾಟ.


ಬಹುಮಾನಿತ ಪ್ರಶ್ನೆ

ಛೀ ತುಂಟಿ!

ತಮ್ಮ ತಂದೆಯವರು ಜೀವನೋಪಾಯಕ್ಕೆ ಏನು ಮಾಡುತ್ತಿದ್ದಾರೆಂದು ಟೀಚರ್ ಶಾಲಾ ಮಕ್ಕಳನ್ನು ಕೇಳಿದಳು. ಡಾಕ್ಟರ್, ಇಂಜನಿಯರ್, ಇತ್ಯಾದಿ ಉತ್ತರಗಳನ್ನು ಮಕ್ಕಳು ನೀಡಿದರು. ಆದರೆ ಒಬ್ಬ ಬಾಲಕ ಮಾತ್ರ ಸುಮ್ಮನಿದ್ದ. "ನಿನ್ನ ತಂದೆ ಏನು ಮಾಡುತ್ತಾರೆ" ಎಂದು ಟೀಚರ್ ಆ ಬಾಲಕನನ್ನು ಕೇಳಿದಾಗ "ಅವರು ಸಲಿಂಗಕಾಮಿಗಳ ಕ್ಲಬ್‌ನಲ್ಲಿ ನೃತ್ಯ ಮಾಡುತ್ತಾರೆ. ಬೇರೆ ಗಂಡಸರ ಮುಂದೆ ನಗ್ನರಾಗಿ ಕುಣಿಯುತ್ತಾರೆ" ಎಂದು ಆ ಹುಡುಗ ಉತ್ತರಿಸಿದ.

ಇದನ್ನು ಕೇಳಿ ಚಿಂತಾಕ್ರಾಂತಳಾದ ಟೀಚರ್ ಆ ಬಾಲಕನನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ "ನೀನು ಹೇಳಿದ್ದು ನಿಜವಾ?" ಎಂದು ಕೇಳಿದರು.

ಆಗ ಬಾಲಕ "ಇಲ್ಲ, ಆದರೆ ನನ್ನ ತಂದೆ ಭಾರತದ ಕ್ರಿಕೆಟ್ ತಂಡದಲ್ಲಿದ್ದಾರೆ ಎಂದು ಹೇಳುವುದಕ್ಕೆ ನನಗೆ ತುಂಬಾ ಅವಮಾನವಾಯಿತು" ಎಂದು ಉತ್ತರಿಸಿದ.



ನಮ್ಮ ಪ್ರಶ್ನೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ವರ್ಲ್ಡ್‌ಕಪ್ ಕ್ರಿಕೆಟ್‌ನಲ್ಲಿ ಭಾರತದ ಸೋಲು ಹತ್ಯೆಯೋ? ಆತ್ಮಹತ್ಯೆಯೋ?

...ಸಂಚಿಕೆಯಿಂದಾಗಿ 'ನಮ್ಮ ಪ್ರಶ್ನೆ-ನಿಮ್ಮ ಉತ್ತರ'ಕ್ಕೆ ಬ್ರೇಕ್ ಬಿದ್ದಿದೆ. ...ರಿಂದ ಈ ವಾರದಿಂದ ಹೊಸ ಆಟವನ್ನು ಪ್ರಾರಂಭಿಸುತ್ತಿದ್ದೇವೆ. ...ದಕಾಗೆ ಇನ್ನು ಮುಂದೆ ಉತ್ತರ ಕಳುಹಿಸಲು ಆ ವಾರದ ...ಾರ ಕೊನೆ ದಿನ. ನಿಮ್ಮ ಉತ್ತರಗಳನ್ನು ನಮಗೆ ಸುಲಭವಾಗಿ ...ವಿಳಾಸಗಳಿಗೆ ಕಳುಹಿಸಬಹುದು.
...ಲಂಕೇಶ್, ನಂ.9, ಇ.ಎ.ಟಿ.ರಸ್ತೆ, ಬಸವನಗುಡಿ, ...ಬೆಂಗಳೂರು-4.
...nkesh70@rediffmail.com
...MS ಮಾಡಬಯಸುವವರು 98440 10186 ನಂಬರಿಗೆ ...ಸೇಜ್ ಮಾಡಬಹುದು.

ಮಟ್ಕಾ ಜಗತ್ತಿನ ವಿಚಿತ್ರ ವ್ಯಾಪಾರ

ಇದು ಪತ್ರಿಕೋದ್ಯಮ, ಪೊಲೀಸ್ ಇಲಾಖೆಗೆ ಗೊತ್ತಿರುವ ಜೂಜಾಟದ ಒಂದು ಹೆಸರು. ಆದರೆ ಇದನ್ನು ಆಡುವವರಿಗೆ ಈ ಹೆಸರಿನಿಂದ ಕರೆಯುತ್ತಾರೆಂದೇ ಗೊತ್ತಿಲ್ಲ. ಇದು ಓಸಿ (ಒರಿಜಿನಲ್ ಚಾಯ್ಸ್ ಅಲ್ಲ ಓಪನ್-ಕ್ಲೋಸ್ ಅಂತ) ಅಂತ ಗೊತ್ತು. 1 ರೂ.ಗೆ 70 ರೂ. ಕೊಡುವ ಇದರಲ್ಲಿ ಮೊದಲು ಬರುವ ಅಂಕೆಗೆ ಓಪನ್. ಕೊನೆಗೆ ಬರುವ ಅಂಕೆಗೆ ಕ್ಲೋಸ್ ಅಂತ ರೂಢಿನಾಮ.




ನದಿಮೂಲ, ಋಷಿಮೂಲ ಕೇಳಬಾರದಂತೆ ಹಾಗೇ ಮಟ್ಕಾ ಅಂದ್ರೇನು? ಎಷ್ಟು ಅಮೌಂಟಿಗೆ ಎಷ್ಟು ಪ್ರೈಜು? ಈ ನಂಬರ್‌ಗಳನ್ನು ಯಾರು ತೆಗೆದು ರಿಸಲ್ಟ್ ಹೇಳ್ತಾರೆ? ಹೀಗೆ ಕೇಳಿ ಬಿಟ್ಟರೆ ಸಾಕು ಅವರನ್ನು ಪೇಪರ್‌ನವರೋ, ಪೊಲೀಸಿನವರೋ ಅಂತ ಅನುಮಾನಿಸುತ್ತಾರೆ ಮಟ್ಕಾದವರು. ಅದಕ್ಕೆ ಮಟ್ಕಾ ಮೂಲ ಕೇಳಬಾರದು. ಮಟ್ಕಾದ ನಿಜವಾದ ನೆಲೆ ಇಂದಿಗೂ ಸರಿಯಾಗಿ ಸಿಕ್ಕಿಲ್ಲ. ಬಲ್ಲವರ ಪ್ರಕಾರ 1961 ರಲ್ಲಿ ಆರಂಭವಾದ ಈ ಮಟ್ಕಾದ ಹೆಡ್ಡಾಫೀಸು ಬಾಂಬೆ. ಓನರ್ ರತನ್ ಲಾಲ್! ಅವನೀಗ ತೀರಿಕೊಂಡಿದ್ದಾನಂತೆ (ಸುದ್ದಿಯೇ ಆಗಲಿಲ್ಲ). ಈಗ ಅವನ ಮಗಳು, ಅಳಿಯ ಸೇರಿ ಇದನ್ನು ನಡೆಸುತ್ತಾರೆಂದು ನಾವು-ನೀವುಗಳು ನಂಬಬೇಕು.

ಮಟ್ಕಾ ಗಣಿತ

ಗಣಿತ 0-9 ರವರೆಗಿನ ಅಂಕೆಗಳನ್ನು ಬೇಧಿಸಿದರೆ ಮಟ್ಕಾ ಮ್ಯಾಥ್ಸ್ 0 ರಿಂದ 4 ರವರೆಗೆ ಅಂಕೆಗಳನ್ನು ಬೇಧಿಸಿ ನಂತರದ ಅಂಕೆಗಳು ಅವುಗಳ ವಿರುದ್ಧ ಆನ್ಸತ್ತೆ. ಅಂದ್ರೆ 0 ಗೆ 5, 1 ಕ್ಕೆ 6, 2 ಕ್ಕೆ 7, 3 ಕ್ಕೆ 8, 4 ಕ್ಕೆ 9. ಗಮನಿಸಿ ಇಲ್ಲಿ ಬೆಸಸಂಖ್ಯೆಗಳಿಗೆ ವಿರುದ್ಧವಿರುವುದು ಸರಿಸಂಖ್ಯೆಗಳು ಹಾಗೂ ಸರಿಸಂಖ್ಯೆಗಳಿಗೆ ಬೆಸಸಂಖ್ಯೆಗಳು! 00 ಯಿಂದ 99 ರವರೆಗಿನ ನೂರು ಅಂಕೆಯಲ್ಲಿ ನಡೆಯುವ ಈ ಆಟದಲ್ಲಿ ಡಬಲ್ ನಂಬರ್ ಅಂದ್ರೆ 00, 11, 22, ಬೇಕಿದ್ದರೆ 11 ರ 'ಮಗ್ಗಿಯಲ್ಲಿ ಬರುವ 99 ರವರೆಗಿನ ಅಂಕೆಗಳು ಗೇಮ್ ಅಂಕೆಗಳು. ಇನ್ನು ಹಾಫ್ ಗೇಮ್ ಅಂದ್ರೆ 1 ರ ವಿರುದ್ಧ ಅಂಕೆ 6 ಹಾಗೆ 16 ಅಂಕೆ ಡ್ರಾ ಬಂದ್ರೆ ಹಾಫ್ ಗೇಮ್. 27, 38, 49 ಇವೆಲ್ಲ ಹಾಫ್ ಗೇಮ್‌ಗಳೇ. ಪ್ರತಿ ಸೋಮವಾರದಿಂದ ಶುಕ್ರವಾರದವರೆಗೆ ನಡೆಯುವ ಆ ಆಟದಲ್ಲಿ ಮಧ್ಯೆ ಯಾವುದೇ ಸರ್ಕಾರಿ ರಜೆ ಬಂದರೂ ಇದು ಬಂದ್. ಸರ್ವಧರ್ಮಗಳ ಹಬ್ಬಗಳಿಗೂ ರಜೆ ಸಾರುವ ರತನ್‌ಲಾಲ್ ಜೂಜಾಟದಲ್ಲಿ ಸರ್ವಧರ್ಮಗಳ ಸಹಕಾರಿ.

ಮಟ್ಕಾ ಚಾರ್ಟ್


ಬಹುಶಃ ಯಾವ ಜೂಜಾಟದಲ್ಲೂ ಹಳೆ ಅಂಕೆ-ಸಂಖ್ಯೆಗಳ ದಾಖಲೆಗಳೊಂದಿಗೆ ಈಗಿನ ಆಟ ಆಡುವ ಪದ್ಧತಿ ಇಲ್ಲ. ಆದರೆ ಮಟ್ಕಾದಲ್ಲಿ ಎಷ್ಟು ವರ್ಷ ಹಳೆಯದಾದ ವಿವರದ ಚಾರ್ಟ್ ಇರುತ್ತೋ ಅಷ್ಟು ಒಳ್ಳೆಯದು. ಹಳೆಯ ಚಾರ್ಟ್ ಇದ್ದವರಿಗೆ ಹೆಚ್ಚು ಗೌರವ. ಕೊಲ್ಹಾಪುರದಲ್ಲಿ ಮುದ್ರಣಗೊಳ್ಳುವ ಇವು ಬೇಕಾದರೆ 300 M.O. ಮಾಡಿದರೆ ಮಟ್ಕಾ ಆರಂಭವಾದಾಗಿನಿಂದ ಈ ವರ್ಷದವರೆಗಿನ ಚಾರ್ಟ್ ಮನೆ ಬಾಗಿಲಿಗೆ ಬರುತ್ತೆ. ಇವನ್ನು ಬಹುತೇಕ ಜನ ಸೆಕ್ಸ್ ಪುಸ್ತಕಗಳ ತರಹ ಗೌಪ್ಯವಾಗಿ ಇಟ್ಟುಕೊಂಡು ಗುಣಾಕಾರ, ಭಾಗಾಕಾರ ಹಾಕಿ ಒಂದೆರಡು ಅಂಕೆಗಳನ್ನು ಆಯ್ದು ಅವುಗಳ ಮೇಲೆ ಹಣ ಹಾಕುತ್ತಾರೆ. ಚಾರ್ಟ್ ಇದ್ದವರು ಐದು ವಾರದ ಹಿಂದೆ ಸೋಮವಾರ ಯಾವ ನಂಬರ್ ಬಿದ್ದಿತ್ತು, ಮರುದಿನ ಏನಾಯಿತು ಎಂಬುದನ್ನು ಬಾಯಿಪಾಠದಿಂದ ಹೇಳಬಲ್ಲಷ್ಟು ನೆನಪಿಟ್ಟುಕೊಂಡಿರುತ್ತಾರೆ. ದುಡ್ಡಿಲ್ಲದವರು ನೋಟ್‌ಬುಕ್‌ನಲ್ಲಿ ಮಟ್ಕಾ ಚಾರ್ಟ್ ಮಾಡಿಕೊಂಡಿರುತ್ತಾರೆ. ನಾಲ್ಕು ವರ್ಷಗಳ ಹಿಂದೆ ಒಮ್ಮೆ ಕೊಪ್ಪಳ ತಾಲ್ಲೂಕಿನ ಹಳ್ಳಿಯೊಂದಕ್ಕೆ ಹೋದಾಗ ನೋಡಿ ಗಾಬರಿ ಆಗಿದ್ದೇನೆಂದರೆ ಆಗಿನ ಶಾಸಕ ಸಂಗಣ್ಣ ಕರಡಿಯ ಲೆಟರ್‌ಪ್ಯಾಡ್ ಪುಸ್ತಕ ಕಟ್ಟಾ ಬೆಂಬಲಿಗನ ಕೈಯಲ್ಲಿ ಮಟ್ಕಾ ಚಾರ್ಟ್ ಆಗಿತ್ತು. ಹತ್ತು ವರ್ಷಗಳಿಂದ ದಿನಪತ್ರಿಕೆಗಳ ವ್ಯಂಗ ಚಿತ್ರಗಳು ಅಂದಿನ ಮಟ್ಕಾ ನಂಬರ್ ಹೇಳುತ್ತವೆ ಅಂತ ನಂಬಿರುವ ವಿದ್ಯಾವಂತರೂ ಇದ್ದಾರೆ. ವ್ಯಂಗ್ಯ ಚಿತ್ರಗಳನ್ನು ತಿರುವು-



ಮುರುವು ಹಿಡಿದು ಅನ್ನಿಸಿದ್ದನ್ನೇ ಅಂದುಕೊಳ್ಳುತ್ತಾರೆ. ಪ್ರಜಾವಾಣಿಯಲ್ಲಿ ಪ್ರತಿ ರವಿವಾರ ಬರುವ ವ್ಯಂಗ್ಯ ಚಿತ್ರದಲ್ಲಿ ಸೋಮವಾರದ ಮಟ್ಕಾ ಅಂಕೆ ಅಡಗಿರುತ್ತೆ ಅಂತ ನಂಬುವ ಮೂಢರು ಇದ್ದಾರೆ. ನಾನು ಶಂಕ್ರಮ್ಮ ಎಂಬ ಆಯಾ ಬಳಿಯಿದ್ದ 10 ವರ್ಷದ ಚಾರ್ಟ್ ದೊಡ್ಡದು. ಅವಿದ್ಯಾವಂತೆಯಾದ ಆಕೆ ವಿಶ್ವಾಸವುಳ್ಳ ಹುಡುಗರಿಗೆ ದುಡ್ಡು ಕೊಟ್ಟು ತನ್ನ ಶೈಲಿ ಹೇಳಿ ನಂಬರ್ ತೆಗೆಸುತ್ತಿದ್ದಳು. ನಂಬರ್ ಡ್ರಾ ಆದರೆ ಸರಿ ಇಲ್ಲವಾದರೆ ಆ ಹುಡುಗನನ್ನು ಬದಲಾಯಿಸಿ ಬಿಡುತ್ತಿದ್ದಳು.

ಮಟ್ಕಾ ನಂಬಿಕೆ

ಮಟ್ಕಾ ಪ್ರಪಂಚವನ್ನು ಸುತ್ತಿದಾಗ ಕಾಣುವ ಅಂಶವೆಂದರೆ ಆ ಜೂಜುಕೋರರಲ್ಲಿರುವ ಆಶಾಭಾವನೆ. "ಇಂದು ಆಟ ಫೇಲಾಗಿದೆ. ನಾಳೆ ನಾನು ಗೆಲ್ಲಬಹುದು" ಎಂಬ ಭಾವನೆ ಅವರಲ್ಲಿ ಇದ್ದೇ ಇರುತ್ತೆ. ಆದರೆ ಆಡಿ ಆಡಿ ಸೋತು ಮಟ್ಕಾವನ್ನೇ ಕೈಬಿಟ್ಟಾರು ಎಂಬ ಹೆದರಿಕೆಗೆ 'ಕಳಕೊಂಡಲ್ಲೇ ಪಡಕೋ' ಎಂಬ ವಿಚಿತ್ರ ಲಾಜಿಕ್ ತುಂಬ್ತಾರೆ ಏಜೆಂಟರು. ಆಶಾಭಾವನೆಯ ಈ ಜನ ವಿಪರೀತ ಮೂಢನಂಬಿಕೆಗಳನ್ನು ಅಳವಡಿಸಿಕೊಂಡು ಯಾವುಯಾವುದಕ್ಕೋ ಏನೋ ಒಂದನ್ನು ಕಲ್ಪಿಸಿಕೊಳ್ಳುತ್ತಾರೆ.



ಉದಾ: ಓಣಿಯಲ್ಲಿ ಯಾರಾದರೂ ಸತ್ತರೆ ಹೊರೋರು ನಾಲ್ಕು ಜನರಲ್ಲವೇ. ಸರಿ ಆವತ್ತು 4 ಓಪನ್! ಬೆಳಗ್ಗೆ ಎದ್ದಾಗ ಎದುರು ಟೂವಿಲರ್ ನಿಂತಿದ್ದು ಅದರ ನಂಬರ್ ಪ್ಲೇಟಿನ ಕೊನೆ ಎರಡು ಅಂಕೆ 37 ಎಂದಿದ್ದರೆ ಆವತ್ತು 37 ಆಡುವುದು. ಬೆಳಗ್ಗೆ ಕೋಳಿ ನೋಡಿದರೆ ಜೀರೋ (ತತ್ತಿ) ಓಪನ್ ಅಂತ. ಒಮ್ಮೆ ನಿಂಗಜ್ಜ ಎಂಬುವವ ಬೆಳಗ್ಗೆ ಎದ್ದಾಗ ಎದುರುಗಡೆ ಮನೆಯ ಮೂರು ವರ್ಷದ ಬಾಲಕ 'ಒಂದಕ್ಕೆ' ನಿಂತಿದ್ದ. ಅವನ ಬುಲ್ಲಿಕಟಾ ನೋಡಿದವನೇ ಓಪನ್ 1 ಅಂದಿದ್ದಾನೆ ಗೆಳೆಯರ ಮುಂದೆ. ಮತ್ತೆ ಕ್ಲೋಸ್? ಅಂದ್ರೆ ಕೆಳಗಿದ್ದವಲ್ಲ ಎರಡು ಅಂತ 12 ಕ್ಕೆ ಹಣ ಹಾಕಿದರೆ ಅಂದು ನಿಜವಾಗಿಯೂ 12 ನಂಬರ್ ಡ್ರಾ ಆಗಬೇಕೆ! ಕಾಗೆ ಕೂಡ್ರೊಕೆ, ಟೊಂಗೆ ಮುರಿಯೋಕೆ ಸರಿ ಹೋದಂಗೆ.



ಮಟ್ಕಾ ಸಿಗ್ನಲ್‌ಗಳು


ಮುಂಜಾನೆಯಿಂದ ರಾತ್ರಿ 8.15 ರವರೆಗೆ ಬರೆಯಲಾದ ಮಟ್ಕಾ ಪಟ್ಟಿಯನ್ನು 8.20 ಕ್ಕೆ ಸೈಕಲ್‌ನಲ್ಲಿ ಹಾಜರಾಗುವ ಕಲೆಕ್ಟರ್ (ಡಿಸಿ ಅಲ್ಲ) ಬೆಂಕಿಪೊಟ್ಟಣದಲ್ಲಿ ಮೊದಲೆ ರೆಡಿ ಇಟ್ಟಿರುವ ಪಟ್ಟಿಯನ್ನು ಏಜೆಂಟ್‌ರಿಂದ ಒಯ್ದು ಡಾನ್‌ಗಳಿಗೆ ಒಪ್ಪಿಸುತ್ತಾನೆ. 9.15 ಕ್ಕೆ ಓಪನ್ (ಮೊದಲ) ಅಂಕೆಯನ್ನು ತಿಳಿಸಲು ಮತ್ತೆ ಹೊರಡುತ್ತಾನೆ ಕಲೆಕ್ಟರ್. ಓಪನ್ 1 ಬಂದಿದ್ರೆ ನಗ ಎಂದು, ಸೊನ್ನೆ ಬಂದಿದ್ದರೆ ವಡೆ or ಜನತಾದಳ, 2,-ಬಸವಣ್ಣ, 3-ತಿರುಪತಿ, 4-ಅನಾಸಿನ್ or ಚಾರ್‌ಮಿನಾರ್, 5- ಕಾಂಗ್ರೆಸ್ or ಪಂಜಾ, 6-ಚಕ್ಕ (ಕ್ರಿಕೆಟ್‌ನಲ್ಲಿ ಸಿಕ್ಸ್), 7-ಕುಂಟ, 8-ಗಂಟು, 9-ತೋಳ. ಹೀಗೆ ಸಿಂಬಲ್ ಮೂಲಕ ಹೇಳುತ್ತಾರೆ. ರಾತ್ರಿ ಊಟದ ಹೊತ್ತಿಗೆ ಬರುವ ಓಪನ್ ಅಂಕೆ ಕೇಳಿ ನಿರಾಶರಾದವರನ್ನು, ರಾತ್ರಿ ಹನ್ನೊಂದುವರೆಗೆ ಬರುವ ಕ್ಲೋಸ್ ಅಂಕೆ ಕೇಳಿ ನಿದ್ದೆ ಮಾಡದವರೂ ಇದ್ದಾರೆ. ಅದಕ್ಕೇ ಈ ಭಾಗದ ಹಳ್ಳಿಗಾಡಿನ ನಮ್ಮ ಅನಕ್ಷರಸ್ಥ ಜನರೇ ಹುಟ್ಟು ಹಾಕಿದ ಗಾದೆ 'ಓಪನ್‌ಗೆ ಊಟ ಇಲ್ಲ, ಕ್ಲೋಸ್‌ಗೆ ನಿದ್ದಿಲ್ಲ'! ಎಂತಹ ಅನುಭವದ ಮಾತು. ನಮ್ಮೂರಲ್ಲಿ ಹೋಟೆಲ್ ಮರಿಯ ಅಂತ ಒಬ್ಬನಿದ್ದ. ಹೋಟೆಲ್ ಓನರ್ ವಾಸು ಜೊತೆ ಓಸಿ ಆಡಿ ಇಬ್ಬರೂ ಸೇರಿ ಮಳಿಗೆ ಯಲ್ಲಿದ್ದ ಹೋಟೆಲ್‌ನ್ನು ಫುಟ್‌ಪಾತ್‌ಗೆ ತಂದಿದ್ದರು. "ಇವತ್ತು ಏನ್ ನಂಬರ್ ಬರಬಹುದು ಮರಿಯ" ಅಂತ ಕೇಳಿ ದರೆ ಅಣ್ಣಾವ್ರ ಕಟ್ಟಾ ಅಭಿಮಾನಿಯಾದ ಅಂವ ಬಬ್ರುವಾಹನ ಶೈಲಿಯ ಡೈಲಾಗ್‌ನಲ್ಲಿ "ಯಾರು ತಿಳಿಯರು ಅವನ (ರತನ್‌ಲಾಲ್) ಅಂತರಂಗದ ಅಂಕೆನಾ..." ಎಂದುಬಿಡುತ್ತಿದ್ದ. ಇರಲಿ, ಓಪನ್-ಕ್ಲೋಸ್‌ಗಳ ಫಲಿತಾಂಶ ಕೇಳಲು ಬಂದವರಿಗೆ ಏಜೆಂಟ್‌ರು ಬೆಂಗಳೂರು ಹತ್ರ ಆಕ್ಸಿಡೆಂಟಾಗಿ 37 ಜನ ಸತ್ತರಂತೆ ಅಂದುಬಿಡುತ್ತಾರೆ. ಅಂದ್ರೆ 37 ಓಸಿಯಾಗಿದೆ ಎಂದರ್ಥ. ಒಂದು ವೇಳೆ ಹಿಂದಿನ ದಿನ ಆಗಿದ್ದ ಡ್ರಾ ಅಂಕೆ ಮರುದಿನವೂ ಆದರೆ ಏಜೆಂಟ್ ಹೇಳದೇ 2 ತರಹ... ಒಂದು, ಮತ್ತೆ ಹಾಡಿತು ಕೋಗಿಲೆ. ಇನ್ನೊಂದು ಅದೇ ರಾಗ ಅದೇ ಹಾಡು! ಹೀಗಾದಾಗ ಆವತ್ತು ಡಬಲ್ ಶೋಕ.





ಮಟ್ಕಾ ಪ್ಲೇಯರ್-ಏಜೆಂಟರು

ವಿದ್ಯಾವಂತ-ಅವಿದ್ಯಾವಂತ, ಹಳ್ಳಿ-ನಗರ, ಚಪ್ರಾಸಿ-ಬಾಸ್ ಹೀಗೆ ಮಟ್ಕಾ ಸರ್ವಾಂತರ್ಯಾಮಿ! ಬಾಲ್ಯದಲ್ಲಿ ನನಗೆ ಗೊತ್ತಿದ್ದ ಮಟ್ಕಾ ಪ್ಲೇಯರ್ ಅಂದ್ರೆ ಚಪ್ರಾಸಿ ಮಹ್ಮದ್. ಇಡೀ ತಿಂಗಳ ಸಂಬಳವನ್ನು ಮಟ್ಕಾಗೆ ಸುರಿದು, ಸಾಲಗಾರನಾಗಿ ರಿಟೈರ್ ಆಗಿ, ಸಾಲಗಾರನಾಗಿಯೇ ಸತ್ತು ಹೋದವನು ಅವನು. ಆದರೆ ಓಸಿ ಆಡೋನಿಗೆ ಸಿಗದ ಗೌರವ ಏಜೆಂಟ್‌ನಿಗೆ ಸಿಗುತ್ತದೆ ಈ ಸಮಾಜದಲ್ಲಿ. ಏಕೆಂದರೆ ಆಡೋನು ಕಳಕೊಂತಾನೆ; ಏಜೆಂಟ್ ಗಳಿಸ್ತಾನೆ. ನಮ್ಮೂರಲ್ಲಿದ್ದ ಶಿವಾನಂದ ಎಂಬ ನಿರುದ್ಯೋಗಿ ಒಂದಿನ ಮಟ್ಕಾ ಆಡಲು ಚಾಲೂ ಮಾಡಿದವನು ತಿಂಗಳಲ್ಲಿ 25 ಲಕ್ಷಕ್ಕೂ ಹೆಚ್ಚು ಮಟ್ಕಾದಲ್ಲಿ ಗೆದ್ದುಬಿಟ್ಟ. ಊರ ತುಂಬ ಅವನದೇ ಸುದ್ದಿ. ಅದೇ ಸಮಯಕ್ಕೆ ಅದೇ ಓಣಿಯ ಹಮಾಲಿಯ ಹೆಂಡತಿಯೊಬ್ಬಳು ಗಂಡನ ಓಸಿ ಆಟಕ್ಕೆ ರೋಸಿ ತವರಿಗೆ ಹೋಗಿದ್ದು ಯಾರಿಗೂ ಕಾಣಲಿಲ್ಲ. ಎಲ್ಲರ ಕಣ್ಣು ಗೆದ್ದವರತ್ತಲೇ. ವರ್ಷದಲ್ಲಿ ಅಂತಹ ಶಿವಾನಂದ ಎಲ್ಲವನ್ನೂ ಮಟ್ಕಾದಲ್ಲೇ ಸೋತು, ಕುಡುಕನಾಗಿ, ಯಾವುದೋ ರೋಗದಿಂದ ಸತ್ತೇ ಹೋದ. ಇನ್ನು ಖಾನಾವಳಿ ಸ್ವಾಮಿ ಹಳೇ ಪ್ಲೇಯರ್. ಊರಿನಲ್ಲೇ ಏಖಪಿ ಖಾನಾವಳಿ ಈತನದು. ಒಂದೆಡೆ ಭರ್ಜರಿ ವ್ಯಾಪಾರ. ಇನ್ನೊಂದೆಡೆ ಮಟ್ಕಾದಲ್ಲಿ ಭರ್ಜರಿ ಗೆಲುವು. ಊರ ತುಂಬ ಆಸ್ತಿ ಖರೀದಿಸಿದ. ಖರೀದಿಸಿದ ಮರುದಿನವೇ ಅದೇ ಮಟ್ಕಾಕ್ಕೆ ಒಂದೊಂದೇ ಆಸ್ತಿ ಬಲಿಯಾಗಿ ಇದ್ದ ಒಂದು ಬಿಲ್ಡಿಂಗನ್ನೂ ಬ್ಯಾಂಕಿನವರು ಹರಾಜು ಹಾಕಿದರು. ಇವನೊಂದಿಗೆ ಆಡುತ್ತಿದ್ದ ಮಾರ್ವಾಡಿ ವಸಂತ ಸಾಲಗಾರನಾಗಿ ಹಾರ್ಟ್ ಅಟ್ಯಾಕ್ ಆಗಿ ಸತ್ತುಹೋದ. ಒಬ್ಬ ಸಣ್ಣ ಪ್ರಮಾಣದ ಡ್ರೈವರನು 50 ಸಾವಿರ ಸಾಲ ಮಾಡಿ ಊರೇಬಿಟ್ಟ. ಒಬ್ಬನಿದ್ದ! ಸೋಮಾರಿಯಾಗಿ, ಹೆಂಡತಿಗೆ ಭಾರವಾಗಿ ಚಟಗಳನ್ನು ನಿಭಾಯಿಸಲು ಮನೆಯಿಂದ



ಹಣ ಕದಿಯುತ್ತಿದ್ದ, ಸಾಲದೆ ಬಾಡಿಗೆಗೆ ಸೈಕಲ್, ಟಿವಿ ಅಂತ ಒಯ್ದು ಯಾರಿಗಾದರೂ ಅಡ ಇಟ್ಟು, ಇಲ್ಲ ಮಾರಿಬಿಡುತ್ತಿದ್ದ. ಅಂಥವನೀಗ ಮಟ್ಕಾ ಏಜೆಂಟಾಗಿ ದಿನಕ್ಕೆ 7-8 ನೂರು ದುಡಿತಾನೆ. ಮಟ್ಕಾ ಆಡಿದ ವರಿಗೆಲ್ಲ ಸರಿಯಾದ ಟೈಮಿಗೆ 'ಪ್ರಿಂಟ್' ವಿತರಿಸುತ್ತಾನೆ. ಮಟ್ಕಾ ದಂತಹ ದೋ ನಂಬರ್ ದಂಧೆ ಅವನಿಗೆ ನಿಯತ್ತು ಕಲಿಸಿದೆ. ಅಷ್ಟಕ್ಕೂ ದೋ ನಂಬರ್ ದಂಧೆ ನಿಂತಿರುವುದೇ ನಿಯತ್ತಿನ ಮೇಲಲ್ಲವೇ? ಕಾಲರ್ 18, ಸೊಂಟ 34, ಬಾಟಮ್ 18 ಅಂತ ಅಳತೆ ಬರೆದುಕೊಳ್ಳುತ್ತಿದ್ದ ಟೈಲರ್ ಸೈಲಾನಿ ಏಜೆಂಟ್‌ನಾಗಿ 18, 34, 18 ಅಂತ ಮಟ್ಕಾ ಅಂಕೆ ಬರೆಯತೊಡಗಿದ. ಬಿಟ್ಟಿ ಆದಾಯದಿಂದ ಸುಖ ಹೆಚ್ಚಾಗಿ ಶ್ರೀಮಂತಾದ. ಕೊನೆಗೆ ನಾಲ್ಕೈದು ರೈಡ್ ಆದಮೇಲೆ ಊರು ಬಿಟ್ಟು ಎಲ್ಲೋ ಇದ್ದು 407 ಗಾಡಿ ಇಟ್ಟು ಓಡಿಸತೊಡಗಿದ. ಗಾಡಿ ಪಲ್ಟಿಯಾಗಿ


ಹುಸೇನ್ ಪಾಷಾ

ಓಸಿ ದುಡ್ಡನ್ನೆಲ್ಲಾ ದವಾಖಾನಿಗೆ ಇಟ್ಟು ಎಲ್ಲ ಕಳ ಕೊಂಡು ಪಕ್ಕದೂರಿನಲ್ಲಿ ಈಗ ವಾಚ್‌ಮನ್ ಆಗಿದ್ದಾನೆ.

ಇಷ್ಟೆಲ್ಲ ನೆಟ್‌ವರ್ಕ್ ಇರುವ ಮಟ್ಕಾವನ್ನು ಪೊಲೀಸರು ಮಟ್ಟ ಹಾಕುವುದಿಲ್ಲವಾ? ಆಗಾಗ ರೈಡ್ ಮಾಡ್ತಾರೆ. ಹಿರಿಯ ಅಧಿಕಾರಿಗಳಿಗೆ ಗೊತ್ತಿಲ್ಲದಂತೆ ಕೆಲ ಪೇದೆಗಳು ಮಟ್ಕಾದವರೊಂದಿಗೆ ಸೇರಿ ಓಸಿವಾಲಾ-ಪೊಲೀಸ್‌ವಾಲಾ ಭಾಯಿಭಾಯಿ ಅಂತ ಬಾರ್‌ನಲ್ಲಿ ಎದುರಾಬದುರಾ ಕುಳಿತು ಕುಡಿಯ ತೊಡಗುತ್ತಾರೆ. ರೈಡಿನ ಮಾಹಿತಿಯನ್ನು ಮುಂಚಿತವಾಗಿ ಕೊಟ್ಟು ಅವರನ್ನು ಬಚಾವ್ ಮಾಡ್ತಾರೆ. ಬೈಚಾನ್ಸ್ ರೈಡ್ ಮಾಡಿ ಕೋರ್ಟಿಗೆ ಕಳಿಸಿದರೆ ದಂಡ ಕಟ್ಟಿ ಬಂದು ಮತ್ತದೇ ಕೆಲಸ ಶುರು ಮಾಡ್ತಾರೆ. ಏನೋ ಯಾರೋ ಒಬ್ಬ ಜನಪರ ಕಾಳಜಿ ಇರುವ ಎಸ್.ಪಿ ಬಂದು ಮಟ್ಕಾ ಮೇಲಿನ ಕೇಸುಗಳನ್ನೆಲ್ಲ ಒಟ್ಟುಗೂಡಿಸಿ ಗಡಿಪಾರಿಗೆ ಒತ್ತಾಯಿಸುತ್ತಾನೆ. ಇಲ್ಲಂದ್ರೆ ಅದೂ ಇಲ್ಲ.

ಮಠಾಧಿಪತಿಗಳಲ್ಲ ಮಟ್ಕಾಧಿಪತಿಗಳು

ಸದಾ ಬರಗಾಲದಿಂದ ಬಡತನವನ್ನೇ ಅನುಭವಿಸು ಇಲ್ಲಿಯ ಶ್ರಮಿಕ ಜನ ಕ್ರಮೇಣ ಬಿಟ್ಟಿ ಹಣದ ವಾಲುವುದು ಒಂದು ವಿಪರ್ಯಾಸ! ಜನರ ಇಂತಹ ಚಾಳಿಯನ್ನೇ ಬಂಡವಾಳ ಮಾಡಿಕೊಳ್ಳುವವರೆಂದರೆ ನಕಲಿ ಸ್ವಾಮಿಗಳು. ಢೋಂಗಿ ಮುಲ್ಲಾಗಳು. ನಿ ಭಕ್ತರನ್ನು ಸೆಳೆಯಲು ವಿಫಲರಾಗಿ ಓಸಿ ನಂಬರ್ ಹೇಳು ಮೂಲಕ ಜೂಜುಕೋರರಲ್ಲಿ ಪ್ರಭಾವ ಬೀರಲು ಆರಂಭಿಸುತ್ತಾರೆ. ಸಮಾಜಮುಖಿ ಮಠಾಧಿಪತಿಗಳಾಗಲು ಹೋಗಿ ಮುಗ್ಗರಿಸಿ ಸಮಾಜ ವಿರೋಧಿ ಮಟ್ಕಾಧಿಪತಿ ಳಾಗಿ ಬಿಡ್ತಾರೆ. ಮುಲ್ಲಾಗಳು ಕಂಟಕರಾಗುತ್ತಾರೆ. ಇನ ಬುದ್ಧಿಮಾಂದ್ಯರನ್ನು ಕಂಡರಂತೂ ದೇವರದರ್ಶನವಾದಂ ಮಟ್ಕಾ ಪ್ಲೇಯರ್‌ಗಳಿಗೆ. ಜಗತ್ತಿನ ಒಳ್ಳೇದು-ಕೆಟ್ಟದ ಯಾವುದು ಅಂತ ಗೊತ್ತಿಲ್ಲದ ಅವರು ದೇವರಿದ್ದಂತೆ ಅವರು ಹೇಳೋದು ನಿಜವಾಗುತ್ತದೆ ಎಂದು ನಂಬು ಇವರು ನಿತ್ಯ ಒಂದು ನಂಬರ್ ಹೇಳಿ ಅಂತ ಜೀ ತಿನ್ನತೊಡಗುತ್ತಾರೆ. ಅಷ್ಟೇ ಅಲ್ಲ ಹತ್ತು ವರ್ಷಗ ಹಿಂದೆ ಕಮ್ಯುನಿಸ್ಟ್‌ನಾಗಿದ್ದ ಲಫಂಗನೊಬ್ಬ ಇಂದು ಜನರ ಅಜ್ಞಾನ, ಮೌಢ್ಯತೆಯನ್ನೇ ಬಂಡವಾ ಮಾಡಿಕೊಂಡು ಓಸಿ ಸ್ವಾಮಿಯಾಗಿದ್ದಾನಂತೆ. ನನ್‌ಮಗಂದು ಮಟ್ಕಾ ಯಾರನ್ನು ಬಿಟ್ಟದೆ ಹೇಳಿ?




ಈಗ ಕಾಲ ಬದಲಾಗಿದೆ. ಎಲ್ಲರಲ್ಲೂ ಮೊಬೈಲ್ ಬಂದಿವೆ. ಮೊದಲಿನಂತೆ ಏಜೆಂಟ್ ಅಂಗಡಿಗೆ ಹೋಗಿ ದುಡ್ಡು ಬರೆಸ ವಂತಿಲ್ಲ, ಮೊಬೈಲ್‌ನಲ್ಲೇ SMS ಮೂಲಕ ವ್ಯವಹಾರ! ಕೆಲ ತಿಂಗ ಹಿಂದೆ ಮೊಬೈಲ್‌ನಲ್ಲಿ ವ್ಯವಹ ಸುವ ಏಜೆಂಟರು ಮತ್ತು ಅವ ಮೊಬೈಲ್ ನಂಬರ್‌ಗಳ ಸಮೇ 'ಲಂಕೇಶ್' ವರದಿ ಪ್ರಕಟಿಸಿ ಆನಂತರ ಆ ವ್ಯವಹಾರ ನಿಂತ ಹೋಗಿತ್ತು, ಇವತ್ತು ಮಟ್ಕಾದ ವ್ಯಾಪ್ತಿ ಕಡಿಮೆಯಾಗಿ ಆದರೆ ಆರ್ಭಟದಲ್ಲಿ ಕೊಂಚ ಬದಲಾವಣೆಯಾಗಿ ಕಾರಣ ಆನ್‌ಲೈನ್ ಲಾಟರಿ.

ಜೈನ ಮುನಿಯಲ್ಲ, ವರ್ಣಾಶ್ರಮದ ವಕ್ತಾರ

ಕ್ರಾಂತಿಕಾರಿ ಜೈನ ಮುನಿ ತರುಣ ಸಾಗರರ ಬಗ್ಗೆ ಈಗ ಎಲ್ಲರಿಗೂ ಗೊತ್ತು. ಬೆತ್ತಲಾಗಿ ಬೀದಿಬೀದಿ ತಿರುಗುವ ವಿಕೃತಿಯೇ ಕ್ರಾಂತಿಕಾರಿತನವೆಂದುಕೊಂಡಿದೆ ಈ ಆಷಾಢಭೂತಿ! ವಾಸ್ತವವಾಗಿ ಮೇಲುಕೀಳೆಂಬ ಬ್ರಾಹ್ಮಣ್ಯ ದರ್ಶನದ ವಿರುದ್ಧ ಸರ್ವಸಂಗ ಪರಿತ್ಯಾಗದ ಮೌಲ್ಯಗಳ ಮೂಲಕ ಪರ್ಯಾಯ ಆಧ್ಯಾತ್ಮಿಕತೆಯನ್ನು ಬೋಧಿಸಿ ತಣ್ಣಗೆ ಪ್ರತಿಭಟಿಸಿದ ಮಹಾನ್ ಜೈನ ದರ್ಶನಕ್ಕೆ ಕಳಂಕ ಹಚ್ಚುತ್ತಿರುವ ಈತ ಪರಮ ವರ್ಣಾಶ್ರಮವಾದಿ. ಅದಕ್ಕೆ ಮತ್ತೊಂದು ಪುರಾವೆ ಇಲ್ಲಿದೆ.

ಆತ ಬಡಬಡಿಸಿದ್ದನ್ನೆಲ್ಲಾ ಕ್ರಾಂತಿಕಾರಿ ಉಪದೇಶಗಳೆಂದು ಉಣಬಡಿಸುವ ಪತ್ರಿಕೆಯೊಂದು ಇತ್ತೀಚೆಗೆ ಪ್ರಕಟಿಸಿದ ಅವರ ಕ್ರಾಂತಿಕಾರಿ ಚಿಂತನೆಯ ಆಣಿಮುತ್ತೊಂದು ಇಲ್ಲಿದೆ.



"83,99,999 ಜನ್ಮಜನ್ಮಗಳ ನಂತರ ಈ ಜೀವ ಶೂದ್ರರ ಮನೆಯಲ್ಲಿ ಜನಿಸುತ್ತದೆ. ಶೂದ್ರನಾದ ನಂತರ ಕಳ್ಳತನ, ವ್ಯಭಿಚಾರ ಮಾಡದಿದ್ದರೆ ಮರು ಜನ್ಮದಲ್ಲಿ ವೈಶ್ಯನಾಗುತ್ತಾನೆ. ವೈಶ್ಯ ನ್ಯಾಯ ನೀತಿಯಿಂದ ವ್ಯಾಪಾರ ನಡೆಸಿದರೆ ಸತ್ತ ನಂತರ ಕ್ಷತ್ರಿಯನಾಗುತ್ತಾನೆ. ಕ್ಷತ್ರಿಯ ಕ್ಷಾತ್ರಧರ್ಮ ಪಾಲನೆ ಸರಿಯಾಗಿ ಮಾಡಿ ಸತ್ತರೆ ಬ್ರಾಹ್ಮಣನಾಗುತ್ತಾನೆ. ಮತ್ತು ಬ್ರಾಹ್ಮಣ ದಿನದಲ್ಲಿ ಮೂರು ಸಲ ಸಂಧ್ಯಾವಂದನೆ ಮತ್ತು ಸತ್ಕಾರ್ಯ ಮಾಡಿದರೆ ಮರು ಜನ್ಮದಲ್ಲಿ ಜೈನನಾಗುತ್ತಾನೆಂದು ಶಾಸ್ತ್ರಗಳಲ್ಲಿ ಬರೆಯಲಾಗಿದೆ."

ಇದರಲ್ಲಿ ಅತ್ಯಂತ ಹಸಿ ಹಸಿಯಾಗಿಯೇ ಇರುವ ಶೂದ್ರ ನಿಂದನೆ ಮತ್ತು ಬ್ರಾಹ್ಮಣ ಮತ್ತು ಜೈನ ಶ್ರೇಷ್ಠತೆಯನ್ನು ಗಮನಿಸಿ. ಶೂದ್ರರು ಸಾಮಾನ್ಯವಾಗಿ ಕಳ್ಳತನ ಮತ್ತು ವ್ಯಭಿಚಾರ ಮಾಡುವವರು ಎಂಬ ಬ್ರಾಹ್ಮಣವಾದಿ ಕೀಳು ಚಿಂತನೆ ಇಲ್ಲಿ ಸ್ಪಷ್ಟವಾಗಿದೆ. ಮತ್ತು ಮೇಲೆ ಹೋದಂತೆ ಮೇಲ್ಜಾತಿಗಳು ಸಹಜವಾಗಿಯೇ ಸಜ್ಜನರು ಅದರಲ್ಲೂ ಬ್ರಾಹ್ಮಣ ಸಂಧ್ಯಾವಂದನೆ ಮಾಡಿದರೆ ಸಾಕು!

ಮೊನ್ನೆ ಈ ಬೆತ್ತಲೆ ಸ್ವಾಮಿಯ ತಿಕ್ಕಲುತನದ ಬಗ್ಗೆ ಬರೆದಿದ್ದಕ್ಕೆ ಕರಾವಳಿ ಅಲೆಯ ಸಂಪಾದಕ ಬಿ.ವಿ.ಸೀತಾರಾಮ್‌ರವರನ್ನು ಪೊಲೀಸರು ಬಂಧಿಸಿದರು. ಕಾರಣ ಎರಡು ಸಮುದಾಯಗಳ ನಡುವೆ ದ್ವೇಷ ಬಿತ್ತಿದ ಮತ್ತು ಒಂದು ಸಮುದಾಯವನ್ನು ದೂಷಿಸಿದ ಆರೋಪ. ಈಗ ಈ ಬೆತ್ತಲೆಂಬ ವೇಷವನ್ನು ತೊಟ್ಟಿರುವ ಈ ಬ್ರಾಹ್ಮಣವಾದಿ ರಾಜಕಾರಣಿ ಬಹಿರಂಗವಾಗಿ ಶೂದ್ರ ದಲಿತರ ಬಗ್ಗೆ ದೂಷಣೆ ಮಾಡಿ ಸಮಾಜದ ಶಾಂತಿಗೆ ಭಂಗ ತರುತ್ತಿದ್ದಾನಲ್ಲ... ಪೋಲಿಸರು ಏಕೆ ಕಾನೂನು ಕ್ರಮ ತೆಗೆದುಕೊಂಡು ಬಂಧಿಸಬಾರದು?... ಬಂಧಿಸುವುದಿಲ್ಲ. ಏಕೆಂದರೆ ಈ ಕಾನೂನು ಮತ್ತು ವ್ಯವಸ್ಥೆಗೆ ನಿರ್ದೇಶನ ನೀಡುತ್ತಿರುವುದು ಮಠ ಮಾನ್ಯಗಳೆ ಅಲ್ಲವೇ? ■

ಸುಪ್ರೀಂಕೋರ್ಟೆಂಬ ದಂತದ ಮಹಲು ಮತ್ತು ನ್ಯಾಯಾಧೀಶರೆಂಬ ನೀರೋಗಳು!

ಈ ದೇಶದ ಪ್ರಜಾಸತ್ತೆಯಲ್ಲಿ ನ್ಯಾಯಾಂಗಕ್ಕೆ — ಅದರಲ್ಲೂ ಈ ದೇಶದ ಸರ್ವೋಚ್ಚ ನ್ಯಾಯಾಲಯಕ್ಕೆ — ಉನ್ನತ ಸ್ಥಾನವಿದೆ. ಈ ದೇಶದ ಸಂವಿಧಾನಕ್ಕೆ ತಕ್ಕಂತೆ ಇತರ ಎರಡು ಅಂಗಗಳು ನಡೆದುಕೊಳ್ಳುವಂತೆ ಮಾಡುವಲ್ಲಿ ಅದರ ಪಾತ್ರ ಹಿರಿದು. ಅಷ್ಟು ಮಾತ್ರವಲ್ಲ, ಈ ದೇಶದ ಸಂವಿಧಾನವನ್ನು ಸಂದರ್ಭಕ್ಕೆ ತಕ್ಕಂತೆ ಅರ್ಥೈಸುವ ಜವಾಬ್ದಾರಿಯೂ ಈ ದೇಶದ ಸರ್ವೋಚ್ಚ ನ್ಯಾಯಾಲಯಕ್ಕಿದೆ. ಈ ದೇಶದ ಸಂವಿಧಾನದ ಮೂಲಮಂತ್ರವಾದ ಸಮಾನತೆ, ಭ್ರಾತೃತ್ವ ಮತ್ತು ಸ್ವಾತಂತ್ರ್ಯವನ್ನು ಶಾಸಕಾಂಗ ಮತ್ತು ಕಾರ್ಯಾಂಗ ರಕ್ಷಿಸಲು ವಿಫಲವಾದರೆ ನ್ಯಾಯಾಂಗದ ಮೇಲೆ ಅದನ್ನು ಸರಿಪಡಿಸುವ ಜವಾಬ್ದಾರಿಯಿರುತ್ತದೆ.

ಆದರೆ ಕಳೆದ ಒಂದು ದಶಕದಲ್ಲಿ ಈ ದೇಶದ ನ್ಯಾಯಾಲಯಗಳು ನಡೆದುಕೊಳ್ಳುತ್ತಿರುವುದು ಈ ದೇಶದ ಸಂವಿಧಾನಕ್ಕೆ ಬದ್ಧವಾಗಿ ಅಲ್ಲ. ಬದಲಾಗಿ ಜಾಗತಿಕ ಮಾರುಕಟ್ಟೆ ಶಕ್ತಿಗಳ ಹಿತಾಸಕ್ತಿಗೆ ಬದ್ಧವಾಗಿ ಎಂಬುದು ಕಳೆದ ಒಂದು ದಶಕದಲ್ಲಿ ಅದು ನೀಡಿರುವ ಜನವಿರೋಧಿ, ಮಹಿಳಾ ವಿರೋಧಿ ಮತ್ತು ಕಾರ್ಮಿಕ ವಿರೋಧಿ ಹಾಗೂ ಕಾರ್ಪೊರೇಟ್ ಪರ ತೀರ್ಪುಗಳಿಂದ ಸಾಬೀತಾಗುತ್ತಿದೆ.



ವಾಸ್ತವವಾಗಿ ಪ್ರಾರಂಭದಿಂದಲೂ ಈ ದೇಶದ ಸುಪ್ರೀಂಕೋರ್ಟು ಹೀಗೆ ನಡೆದುಕೊಂಡು ಬಂದಿದೆ. ಜನರ ಅಪಾರ ಒತ್ತಡಕ್ಕೆ ಮಣಿದು ಶಾಸಕಾಂಗಗಳು 50ರ ದಶಕದಲ್ಲಿ ರೈತ ಪರ ಮತ್ತು ಕಾರ್ಮಿಕ ಪರ ನೀತಿಗಳನ್ನು ಅನುಷ್ಠಾನಕ್ಕೆ ತಂದರೂ ಸುಪ್ರೀಂಕೋರ್ಟು ಖಾಸಗಿ ಆಸ್ತಿಯನ್ನು ರಕ್ಷಿಸಬೇಕೆಂಬ ಏಕೈಕ ಹಿತಾಸಕ್ತಿಯಿಂದ ಅವನ್ನು ಅಸಿಂಧುಗೊಳಿಸಿತು. ಆ ಕಾರಣಕ್ಕೆ ಸಂವಿಧಾನಕ್ಕೆ 9ನೇ ಷೆಡ್ಯೂಲ್ ಅನ್ನು ಸೇರಿಸಬೇಕಾಯಿತೆಂಬುದೂ, ಈಗ ಮತ್ತೆ ಸುಪ್ರೀಂಕೋರ್ಟು ಅದನ್ನು ನ್ಯಾಯಾಲಯಗಳ ಪರಿವೀಕ್ಷಣೆಗೆ ಒಳಪಡಿಸಿದೆ ಎಂಬುದೂ ಈಗ ಇತಿಹಾಸ.

ಇಷ್ಟೆಲ್ಲಾ ಏಕೆ ಜ್ಞಾಪಿಸಿಕೊಳ್ಳಬೇಕಾಯಿತೆಂದರೆ ಇತ್ತೀಚೆಗೆ ಮತ್ತೊಮ್ಮೆ ಎರಡು ಅತ್ಯಂತ ಮಹಿಳಾ ವಿರೋಧಿ ತೀರ್ಪುಗಳನ್ನು ನೀಡಿದೆ. ಅದರಲ್ಲಿ ಮೊದಲನೆಯದು ವರದಕ್ಷಿಣೆಗೆ ಸಂಬಂಧಪಟ್ಟಿದ್ದು. "ಗೃಹ ಬಳಕೆ ಅಥವಾ ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲಿ ಹಣದ ಅವಶ್ಯಕತೆ ಬೇಕಾದಾಗ ಪತಿ ತನ್ನ ಪತ್ನಿಯ ಮನೆಯಿಂದ ಹಣ ಪಡೆದರೆ ಅದನ್ನು ವರದಕ್ಷಿಣೆ ಎಂದು ಅರ್ಥೈಸಲಾಗದು" ಎಂದು ಇತ್ತೀಚಿನ ಪ್ರಕರಣ ಒಂದರಲ್ಲಿ ಸುಪ್ರೀಂಕೋರ್ಟು ತೀರ್ಮಾನ ನೀಡಿದೆ. ವರದಕ್ಷಿಣೆ ಕಿರುಕುಳಗಳು ಮತ್ತು ಹಿಂಸೆಗಳು ನಡೆಯುವುದೇ ಈ ನೆಪದಲ್ಲಿ ಎಂಬುದು ನ್ಯಾಯಮೂರ್ತಿಗಳಿಗೆ ಅರ್ಥವಾಗದಿರುವಷ್ಟು ನಿಗೂಢವಾದ ವಿಷಯವೇ? ಒಂದು ವೇಳೆ ಹೆಣ್ಣಿನ ಮನೆಯವರು ಅಳಿಯನ ಕಷ್ಟ ನೋಡಲಾಗದೆ ಕೊಟ್ಟರೆ ಅದು ನ್ಯಾಯಾಲಯದ ಕಟೆಕಟೆ ಏಕೆ ಹತ್ತುತ್ತದೆ? ಹೆಣ್ಣಿನ ಕಡೆಯವರು ದೂರು ಸಲ್ಲಿಸುತ್ತಾರೆ ಎಂದರೆ ಅದು ಕೊಡಲಾಗದ ಕಷ್ಟವನ್ನು ಸೂಚಿಸುವುದಿಲ್ಲವೇ? ಹೀಗಾಗಿ ಈ ಹೊಸ ತೀರ್ಪು ಗಂಡನ ಕಿರುಕುಳಕ್ಕೆ ಮಾನವೀಯ ಮತ್ತು ನ್ಯಾಯದ ಮುಖವಾಡ ತೊಡಿಸುವುದನ್ನು ಬಿಟ್ಟು ಬೇರೇನನ್ನೂ ಮಾಡುವುದಿಲ್ಲ.

ತನ್ನ ಇನ್ನೊಂದು ತೀರ್ಮಾನದಲ್ಲಿ ನ್ಯಾಯಾಲಯವು ಹೆಣ್ಣಿನ ಮೇಲೆ ನಡೆಯುವ ಬಲಾತ್ಕಾರವನ್ನು ಪುನರ್‌ನಿರ್ವಚಿಸಿ ಮಾಡಿದೆ. ಈವರೆಗೆ ಮಹಿಳಾ ಚಳವಳಿಗಳು ಬಲಾತ್ಕಾರವೆಂಬುದು ಕೇವಲ ದೈಹಿಕ ಆಕ್ರಮಣವನ್ನು ನಡೆಸಿ ಮಾಡುವ ಕಾಮಕ್ರಿಯೆ ಮಾತ್ರವಲ್ಲ, ಅದಕ್ಕಿಂತ ಹೆಚ್ಚಾಗಿ ಹೆಣ್ಣಿನ ಸ್ವಾತಂತ್ರ್ಯದ ಮೇಲೆ ಪುರುಷಾಧಿಪತ್ಯದ ಅಧಿಕಾರದ ಚಲಾವಣೆ ಎಂದೇ ವಿಶಾಲ ವ್ಯಾಖ್ಯಾನ ನೀಡಿದ್ದವು. ಹೀಗಾಗಿ ಬಲಾತ್ಕಾರದ ಪ್ರಕರಣಗಳಲ್ಲಿ ಸಂಭೋಗ ಪ್ರಕ್ರಿಯೆ ಪೂರ್ಣವಾಯಿತೋ ಇಲ್ಲವೋ ಎಂಬುದಕ್ಕಿಂತ ಹೆಣ್ಣಿನ ಮೇಲೆ ಆಕ್ರಮಣ ನಡೆಯಿತೆನ್ನುವುದು ಅದನ್ನು ರೇಪ್ ಎಂದು ಪರಿಗಣಿಸಲು ಸಾಕು ಎಂಬ ಅತ್ಯಂತ ನ್ಯಾಯೋಚಿತ ವಾದವನ್ನು ಮುಂದಿಟ್ಟಿದ್ದವು. ಆದರೆ ನ್ಯಾಯಾಲಯವು ಬಲಾತ್ಕಾರ ಪ್ರಕರಣಗಳಲ್ಲಿ ಇರುವ ಈ ಪುರುಷಾಧಿಪತ್ಯದ ಅಧಿಕಾರ ಚಲಾವಣೆಯ ವಿಷಯವನ್ನು ಸಂಪೂರ್ಣವಾಗಿ ನಿರಾಕರಿಸಿ ಅದನ್ನು ದೈಹಿಕ ಕಾಮಕ್ರಿಯೆ ಪೂರ್ಣವಾಯಿತೋ ಇಲ್ಲವೋ ಎಂಬ ವಿಷಯಕ್ಕೆ ಇಳಿಸಿಬಿಟ್ಟಿದೆ. ಒಂದು ವೇಳೆ ಹಾಗಿಲ್ಲದಿದ್ದಲ್ಲಿ ಅದು ಬಲಾತ್ಕಾರವೆಂಬ ಶಿಕ್ಷೆಯಡಿ ತರಲಾಗುವುದಿಲ್ಲ ಎಂದು ತೀರ್ಪು ನೀಡಿ ಬಲಾತ್ಕಾರಿ ಪುರುಷಪಶುಗಳಿಗೆ ಶಿಕ್ಷೆಯಿಂದ ತಪ್ಪಿಸಿಕೊಳ್ಳುವ ಹೊಸ ದಾರಿಯನ್ನು ತೋರಿಸಿಕೊಟ್ಟಿದೆ.

ಇದಲ್ಲದೆ ಮತ್ತೊಂದು ಪ್ರಕರಣದಲ್ಲಿ ಅಶ್ಲೀಲತೆಯ ಬಗ್ಗೆ ಹೊಸ ವ್ಯಾಖ್ಯಾನ ನೀಡುತ್ತಾ ಕಲಾ ಸಂದರ್ಭದಲ್ಲಿ ಪ್ರದರ್ಶಿತವಾಗುವ ನಗ್ನತೆಯನ್ನು ಅಶ್ಲೀಲತೆ ಎಂದು ಕರೆಯಲಾಗುವುದಿಲ್ಲ ಎಂದು ವಿವರಿಸಿದೆ. ಮೇಲ್ನೋಟಕ್ಕೆ ಇದು ಸರಿ ಎಂದೆನಿಸಿದರೂ ಇದರ ಪ್ರಯೋಜನ ಕಲೆಗಿಂತ ಮಾರುಕಟ್ಟೆಗೆ ಹೆಚ್ಚಾಗುವುದು ದಿಟ.

ವಾಸ್ತವವಾಗಿ ಇದೇ ಅಸಲಿ ಸಮಸ್ಯೆ. ಜಾಗತೀಕರಣದ ಭರಾಟೆಯಲ್ಲಿ ಮನುಷ್ಯ ಸಂಬಂಧಗಳು ಮತ್ತು ಸಂವೇದನೆಗಳು ಸಹಾ ಮಾರುಕಟ್ಟೆ ಸರಕಾಗಿ ಬಿಡುತ್ತಿವೆ. ಇದು ನಮ್ಮನ್ನು ಬಲವಿದ್ದವನು ಮಾತ್ರ ಬದುಕುವ ವ್ಯವಸ್ಥೆಯೆಡೆಗೂ ಮತ್ತು ಎಲ್ಲವೂ ಭೋಗದೃಷ್ಟಿಯಿಂದ ಮಾತ್ರ ನೋಡುವ ವಿಲಾಸಿ ಸಂಸ್ಕೃತಿಯೆಡೆಗೂ ದೂಡುತ್ತಿದೆ. ಅದಕ್ಕೆ ತಕ್ಕ ಹಾಗೆ ನ್ಯಾಯಿಕ ಮಾನದಂಡಗಳು ಬದಲಾಗುತ್ತಿವೆ. ವಂಚಿತರ, ಬಲಹೀನರ ಮತ್ತು ಶೋಷಿತರ ಹೋರಾಟ ಮತ್ತು ಜೀವನ ದರ್ಶನ ಮುನ್ನೆಲೆಗೆ ಬರದೆ ಈ ಪ್ರತಿಕ್ರಾಂತಿಯನ್ನು ತಡೆಗಟ್ಟಲಾಗುವುದಿಲ್ಲ. ●

"ವರಲ್ಡ್ ಕಪ್ ಗೆದ್ದ ಕ್ರೆಡಿಟ್ ಯಜ್ಞದ ಪಾಲಾಗುತ್ತಿತ್ತು!"

ಧೂತ್ತೇರಿ

ನಮ್ಮ ಭಾರತದ ಕ್ರಿಕೆಟ್ ಕಲಿಗಳು ಪಕ್ಕದ ಬಾಂಗ್ಲಾದ ಆಟಗಾರರಿಂದ ಪಕ್ಕೆಗೆ ತಿವಿಸಿಕೊಂಡು, ಕೆಳಗಿನ ಶ್ರೀಲಂಕಾದಿಂದ ತಿಗದ ಮೇಲೆ ಒದೆಸಿಕೊಂಡು ಬರುತ್ತಿರುವ ಸುದ್ದಿ ಕೇಳಿದ ಚಾರ್ವಾಕರು, ನಮ್ಮವರೇ ವರಲ್ಡ್ ಕಪ್ ಗೆದ್ದುಕೊಂಡು ಬರುತ್ತಿರುವಂತೆ ಕುಣಿದಾಡಿದರಂತಲ್ಲಾ, "ಸೋತು ಸುಣ್ಣವಾದ ಟೀಂ ನೋಡಿ ನಗುತ್ತೀರಲ್ಲ, ನಿಮಗೆ ದೇಶಾಭಿಮಾನ, ನಾಚಿಕೆ ಎಂಬುದಿಲ್ಲವೆ?" ಎಂದು ಕೇಳಿದರೆ, ಈ ಚಾರ್ವಾಕರು, "ನಮ್ಮ ಸಂತೋಷದ ಮೂಲವೇ ಬೇರೆ ಸಾರ್. ನಮ್ಮ ಪುಳಿಯೋಗರೆ ಟೀಮು ವರಲ್ಡ್ ಕಪ್ ತರುತ್ತೇವೆಂದು ಹೋದಕೂಡಲೇ ನಮ್ಮ ದೇಶದ ಪುರೋಹಿತ ಪಿಂಡಗಳು ಯಜ್ಞಯಾಗ ಆರಂಭಿಸಿಕೊಂಡು ನಮ್ಮ ಬಡಾವಣೆಯಲ್ಲೆಲ್ಲಾ ಹೊಗೆ ಎಬ್ಬಿಸಿದವು. ಪುರೋಹಿತರು ಪುಷ್ಕಳವಾಗಿ ಬಾರಿಸಿದ್ದ ಊಟದ ಹೂಸು ಮತ್ತು ಯಜ್ಞದ ಹೊಗೆ ಜೊತೆಯಾಗಿ ಹರಡಿದರೆ ಗತಿಯೇನು? ಇಂಡಿಯಾ ಇನ್ನು ಆಡುತ್ತಿದ್ದರೆ ನಮ್ಮಗಳ ಕತೆಯೇನೆಂದು ಕಂಗಾಲಾಗಿರುವಾಗಲೇ, ಶ್ರೀಲಂಕಾ ಟೈಗರ್‌ಗಳು ಭಾರತದ ಗೊಡ್ಡು ದನಗಳನ್ನು ಓಡಿಸಿದವು. ಅದಕ್ಕಾಗಿ ನಾವೂ ಬದುಕಿಕೊಂಡೆವು" ಎನ್ನುತ್ತಿವೆಯಂತಲ್ಲಾ, ಧೂತ್ತೇರಿ!

* * * * * *

ನಮ್ಮ ಶಿಕಾರಿಪುರದ ಅರ್ಥಶಾಸ್ತ್ರಜ್ಞರಾದ ಯಡ್ಡಿ ಎಂಬ ಚಡ್ಡಿ ಮಂಡಿಸಿದ ಬಜೆಟ್ ನೋಡಿದ ಕರ್ನಾಟಕದ ಚಡ್ಡಿಗಳು, ಚಡ್ಡಿ ಪತ್ರಿಕೆಗಳಿಗೆಲ್ಲಾ ಚಾಕೋಲೇಟು ಕೊಟ್ಟು ಕುಣಿದಾಡಿದವಂತಲ್ಲಾ, ಕೇಳದಿದ್ದರೂ ಸ್ವಾಮಿಗಳ ಜೋಳಿಗೆಗೆ ಕೋಟಿ ಕೋಟಿ ಕಾಸು ತುಂಬುರುವ ಯಡ್ಡಿಯ ಸಾಹಸ ನೋಡಿದ ಚಡ್ಡಿಗಳು, "ನಾವೇನು ಹೆದರಬೇಡಿ ಸಾರ್, ನಾವು ಕೊಟ್ಟ ದುಡ್ಡು ವ್ಯರ್ಥವಾಗುವುದಿಲ್ಲ, ತಮ್ಮ ಚುನಾವಣೆ ವೇಳೆಗೆ ತಮ್ಮಿಂದ ಕಾಸು ಪಡೆದ ಮಠದ ಸ್ವಾಮಿಗಳು ತಮ್ಮ ಮರಿ ಪಡೆ ಕಳುಹಿಸಿ ಕಮಲವನ್ನು ಕೈಹಿಡಿಯುವಂತೆ ಮಾಡುತ್ತವೆ" ಎಂದಾಗ ಯಡ್ಡಿ "ಇನ್ನೆರಡು ಬಜೆಟ್ ಮಂಡಿಸಿದಾಗ ಇನ್ನೂ ಕೊಡುತ್ತೇನೆ" ಎಂದಂತರಲ್ಲಾ, ಧೂತ್ತೇರಿ!!



* * * * * * *

ಇತ್ತ ನಮ್ಮ ಮಂಡ್ಯದ ಕಾವೇರಿ ಕಾವು ದಿನೇದಿನೇ ಕಾವೇರುವ ಬದಲು ತುಸು ಕಳೆಗುಂದತೊಡಗಿದೆಯಂತಲ್ಲಾ, ಇದಕ್ಕೆ ಕಾರಣಗಳನ್ನು ಕೇಳಿದರೆ ಅಂಬರೀಷ್ ಅಭಿಮಾನಿಗಳ ಪ್ರಕಾರ "ನಮ್ಮ ಅಂಬರೀಷ್‌ಗೆ ಚಳವಳಿಯನ್ನು ಮುನ್ನಡೆಸುವ ಶಕ್ತಿಯಿತ್ತು. ಆದರೆ ಈ ಮುದಿ ಮಾದೇಗೌಡ ಅಂಬಿಯನ್ನು ಬೈದು ಓಡಿಸಿದ್ದೇ ಪ್ರಮಾದವಾಯ್ತು ನೋಡಿ. ಅಂಬಿ ಹೋಗಿ ಮನೆ ಸೇರಿಕೊಂಡರು. ಇತ್ತ ಮಾದೇಗೌಡರು ವೃದ್ಧಾಪ್ಯದ ಪೆನ್‌ಷನ್ ಹೋರಾಟದವರಂತೆ ಬೀದಿಯಲ್ಲಿ ಕುಳಿತರು" ಎಂದು ಆಡಿಕೊಳ್ಳುತ್ತಿವೆಯಂತಲ್ಲಾ, ಇದೇ ಗತಿ ನಮ್ಮ ಸಂಸದರ ಹೋರಾಟದಲ್ಲೂ ಸಂಭವಿಸಿತಂತಲ್ಲಾ, ದೆಹಲಿಯ ಗಾಂಧಿ ಪ್ರತಿಮೆಯ ಎದುರು ಯಾರೂ ಇಲ್ಲದ್ದು ನೋಡಿದ ಕಾಂಗ್ರೆಸ್ ಸಂಸದರು, [illegible] ಹೆಜ್ಜೆಯಲ್ಲಿ ಹೋಗಿ ಗಾಂಧಿ ಪ್ರತಿಮೆಯೆದುರು ಕುಳಿತು ನಗುತ್ತಾ ಬಿ.ಪಿ. ವಿಷಯ ಕುರಿತು ಮಾತನಾಡುತ್ತಿರಬೇಕಾದರೆ, ದೇವೇಗೌಡರು ಬಿಜೆಪಿ ದಂಡಿನೊಂದಿಗೆ ಬರುತ್ತಿದ್ದಾರೆ ಎಂಬ [illegible] ತಲುಪಿತಂತಲ್ಲಾ, ಕೂಡಲೇ ಕಾಂಗ್ರೆಸ್‌ಗರು ಎದ್ದು ಓಡಲಾಗಿ, [illegible] ಕೂಗುಮಾರಿ ಮಾತ್ರ ಅಲ್ಲೇ ಉಳಿದುಕೊಂಡು ದೇವೇಗೌಡರು ಬಂದ ಕೂಡಲೇ "ಅಪ್ಪಾಜಿಯವರಿಗೆ ನಮಸ್ಕಾರ" ಎಂದು ಹಲ್ಲು ಗಿರಿದರಂತಲ್ಲಾ, ಇದು ತಮಿಳರಿಗೆ ಗೊತ್ತಾಗಿ "ನಾವೇ ಗೆಲ್ಲುತ್ತೇವೆ" ಎಂದರಂತಲ್ಲಾ, ಧೂತ್ತೇರಿ!!

–ಮಾಮೂ

ಕುಮಾರಣ್ಣ-ರೇವಣ್ಣ ಕಾಳಗ

'ಮಿಷನ್ ಕಹಾ ಹೈ' ಅಂದರೆ 'ಬಗಲ್ ಮೆ ಹೈ' ಎಂಬಂತೆ ಮುಖ್ಯಮಂತ್ರಿ ಕುಮಾರಸ್ವಾಮಿಗೊಬ್ಬ ಮಿಷನ್ ಹುಟ್ಟಿಕೊಂಡಿದ್ದಾನೆ. ಮತ್ತವನು ಬಗಲಲ್ಲೇ ಇದ್ದಾನೆ. ಅದು ಅವರ ಅಣ್ಣ ಪಿಡಬ್ಲ್ಯೂಡಿ ಮಂತ್ರಿ ರೇವಣ್ಣ.

ಹಾಲಿ ಕೋ-ಜಾ ಸರ್ಕಾರದೊಳಗೇ ಭಿನ್ನಮತೀಯ ಚಟುವಟಿಕೆ ಎಂಬುದೇನಾದರೂ ನಡೆಯುತ್ತಿದ್ದರೆ ಅದರ ನಾಯಕ ಎಚ್.ಡಿ. ರೇವಣ್ಣನೇ ಎಂಬುದಕ್ಕೆ ಪ್ರತಿದಿನ ಹೊಸ ಸಾಕ್ಷಿಗಳು ಸಿಗುತ್ತಿವೆ.

ಮೈಸೂರಿನ ನಗರಪಾಲಿಕೆ ಎಲೆಕ್ಷನ್ ಸಂಬಂಧ ಕ್ಷೇತ್ರ ಮರುವಿಂಗಡಣೆ ಹಾಗೂ ಸ್ಥಾನ ಮೀಸಲಾತಿಯ ವಿಚಾರದಲ್ಲಿ ಇವರಿಬ್ಬರೂ ವಿಧಾನಸೌಧ ದೊಳಗೆ ಜಗಳವಾಡಿಕೊಂಡಿದ್ದಾರೆ. ನಾಲ್ಕು ಗೋಡೆಯ ನಡುವೆ ಈ ಕಿತ್ತಾಟ ನಡೆದಿದ್ದರೂ ಅದೀಗ ಹಾದಿರಂಪ ಬೀದಿರಂಪವಾಗಿ ಹೊರಬಂದಿದೆ.



ಕುಮಾರಸ್ವಾಮಿ ಅಣ್ಣನ ಬಗ್ಗೆ ಗರಂ ಆಗಿದ್ದಾರೆ. ಆದರೆ ರೇವಣ್ಣನನ್ನು ನರಂ ಮಾಡಲು ಅವರಿಂದ ಆಗಿಲ್ಲ. ಬಹುಶಃ ಮುಂದೆ ಆಗುವುದೂ ಇಲ್ಲ. ಏಕೆಂದರೆ ಇದು ಕೇವಲ ಸೋದರರ ಕಲಹವಲ್ಲ, ಬದಲಾಗಿ ವಾರಗಿತ್ತಿಯರಾದ ಅನಿತಾ ಹಾಗೂ ಭವಾನಿಯು ಮೈಸೂರು ಎಲೆಕ್ಷನ್‌ನಲ್ಲಿ ತಲೆ ಹಾಕಿರುವುದರಿಂದ ಅದಕ್ಕೀಗ ದೊಡ್ಡಗೌಡರ ಕುಟುಂಬ ಕಲಹದ ಹಿನ್ನೆಲೆಯೂ ಸೇರಿಕೊಂಡಿದೆ. ಈ ಮದಗಜಗಳ ಘರ್ಷಣೆಯಲ್ಲಿ ಸಿಕ್ಕು ಹೈರಾಣಾಗಿಹೋಗಿರುವ ಜಿಲ್ಲಾ ಉಸ್ತುವಾರಿ ಸಚಿವ ಜಿ.ಟಿ. ದೇವೇಗೌಡ 'ತಬ್ಬಲಿಯು ನೀನಾದೆ ಮಗನೆ' ಎಂದು ಶೋಕಗೀತೆ ಹಾಡಿಕೊಂಡು ತಲೆ ಮರೆಸಿಕೊಂಡು ಬಿಟ್ಟಿದ್ದಾರೆ.



ಅನಿತಾ

ಭವಾನಿ-ಅನಿತಾ ಫೈಟ್

ಗೌಡರ ಹಿರಿಯ ಮಗ ರೇವಣ್ಣನ ಬದಲಾಗಿ ಕುಮಾರಸ್ವಾಮಿ ಮುಖ್ಯಮಂತ್ರಿಯಾದನಲ್ಲ ಎಂಬ ಕಹಿ ಕುತ್ತಿಗೆಯವರೆಗೂ ತುಂಬಿಕೊಂಡಿರುವುದು ರೇವಣ್ಣನ ಪತ್ನಿ ಭವಾನಮ್ಮನವರಿಗೆ. ಸದ್ಯಕ್ಕೆ ರಾಜ್ಯಮಟ್ಟದಲ್ಲಿ ಬೇರೇನೂ ಮಾಡಲಿಕ್ಕೆ ಸಾಧ್ಯವಿರದ ಕಾರಣ ಕನಿಷ್ಠ ತನ್ನ ತವರು ಜಿಲ್ಲೆ ಮೈಸೂರಿನಲ್ಲಾದರೂ ಸ್ವಲ್ಪ ರಾಜಕೀಯ ಮಾಡಬೇಕು ಎಂಬ ಇರಾದೆ ಭವಾನಿಗೆ ಮೊದಲಿಂದಲೂ ಇದೆ. ಕೆ.ಆರ್. ನಗರದ ಸಾಲಿಗ್ರಾಮದವರಾದ ಭವಾನಿಗೆ ಮೈಸೂರು ನಗರ ಪಾಲಿಕೆ ಎಲೆಕ್ಷನ್‌ನಲ್ಲಿ ತಮಗೆ ಬೇಕಾದ ಕೆಲವರಿಗಾದರೂ ಟಿಕೆಟ್ ಸಿಗುವಂತೆ ನೋಡಿಕೊಳ್ಳಬೇಕೆಂಬ ಹಂಬಲವಿತ್ತು. ಆದರೆ ಸ್ವತಃ ಕುಮಾರಸ್ವಾಮಿಗೆ ಹಾಗೂ ಪತ್ನಿ ಅನಿತಾಗೂ ಮೈಸೂರಿನ ಸ್ಥಳೀಯ ರಾಜಕೀಯ ಬೇಕಿದೆ. ಮೈಸೂರು ಸುತ್ತಮುತ್ತ ಗೌಡರ ಕುಟುಂಬದವರ ನೂರಾರು ಎಕರೆ ಜಮೀನುಗಳಿವೆ. ಬಹಳ ಹಿಂದಿನಿಂದಲೂ ಕುಮಾರಸ್ವಾಮಿ ಮೈಸೂರಿಗೆ ಬಂದಾಗಲೆಲ್ಲಾ ಅವರ ವಾಸ್ತವ್ಯ, ಊಟದ (ಎಲ್ಲಾ ತರಹದ್ದು) ವ್ಯವಸ್ಥೆ ನೋಡಿಕೊಳ್ಳುತ್ತಿದ್ದ ಶಿಷ್ಯರ ಗುಂಪೇ ಇದೆ. ಈ ಬಾರಿಯ ಪಾಲಿಕೆ ಎಲೆಕ್ಷನ್‌ನಲ್ಲಿ ಅವರಲ್ಲಿ ಕೆಲವರಿಗಾದರೂ ಅವಕಾಶ ಕಲ್ಪಿಸಬೇಕೆಂಬ ಲೆಕ್ಕಾಚಾರ ಕುಮಾರಸ್ವಾಮಿಗಿತ್ತು. ಆದರೆ ಮಧ್ಯೆ ನುಗ್ಗಿಬಿಟ್ಟರಲ್ಲ ರೇವಣ್ಣ-ಭವಾನಿ ದಂಪತಿಗಳು.

ಒಟ್ಟು 65 ವಾರ್ಡುಗಳಿರುವ ಮೈಸೂರಿನ ಪ್ರತಿ ವಾರ್ಡಿನ ಮೀಸಲಾತಿಗೂ ಬೀದಿ ಜಗಳಗಳೇ ಆಗಿ ಹೋದವು. ಭರತೇಶ ಎಂಬಾತ ಜಿ.ಟಿ. ದೇವೇಗೌಡರ ವಿರೋಧಿ. ಈತನ ಬಗ್ಗೆ ಕುಮಾರಸ್ವಾಮಿಯ ಸಹಾನುಭೂತಿ ಇತ್ತು, ಜೊತೆಗೆ ಮೂಡಾದ ಮಾಜಿ ಅಧ್ಯಕ್ಷ ಬಸವೇಗೌಡರೂ ಆಗಲಿ ಎಂದಿದ್ದರು. ಆದರೆ ಜಿ.ಟಿ.ಗೆ ಇದಿಷ್ಟವಿರಲಿಲ್ಲ. ಇದು ರೇವಣ್ಣಗೆ ಗೊತ್ತಾಗಿ ಆ ಕ್ಷೇತ್ರ ಭರತೇಶನಿಗೇ ಸಿಗುವಂತೆ ಮೀಸಲು ನಿಗದಿಗೆ ಮುಂದಾದರು. ಕುಮಾರಸ್ವಾಮಿಗೆ

ಈಶ


ಮೊದಲು ಕೋಪ ಬಂದಿದ್ದೇ ಆವಾಗ. ಮೈಸೂರು ಜಿಲ್ಲೆ ವ್ಯವಹಾರಗಳಲ್ಲಿ ರೇವಣ್ಣ-ಭವಾನಿಯರಿಗಿಂತ ಜಿ.ಟಿ. ದೇವೇಗೌಡರೇ ಮುಖ್ಯ ಕುಮಾರಸ್ವಾಮಿಗೆ. ಆದರೆ ತಮ್ಮ ಮೂಗಿನ ನೇರಕ್ಕೇ ಎಲ್ಲಾ ನಡೆಯಬೇಕೆಂಬ ಹಠ ರೇವಣ್ಣ ದಂಪತಿಗಳದ್ದು. ಹಾಗಾಗಿ ಸಿದ್ಧರಾಮಯ್ಯ ಶಿಷ್ಯರನ್ನು ಹಣಿಯುವಂತೆ ನಟಿಸುತ್ತಾ ರೇವಣ್ಣ ಬಹುತೇಕ ವಾರ್ಡ್ ಮೀಸಲಾತಿಗಳಲ್ಲಿ ತಲೆ ಹಾಕಿ ಕುಮಾರಸ್ವಾಮಿ ಭಂಟರಿಗೇ ಅವಕಾಶ ಕಡಿಮೆ ಮಾಡಿಸಿಬಿಟ್ಟಿದ್ದಾರೆ. ಕುರುಬ ಮತದಾರರೇ ಮೆಜಾರಿಟಿ ಇರುವ ಕುರುಬರಳ್ಳಿ, ಗುಂಡೂರಾವ್ ನಗರ, ಕನಕಗಿರಿ, ಹೊಸಬಂಡಿಕೆರೆ ಮುಂತಾದೆಡೆ OBC ವರ್ಗಕ್ಕೆ ಮೀಸಲಿರುವಂತೆ ರೇವಣ್ಣ ಮಾಡಿಬಿಟ್ಟಿದ್ದಾರೆ. ಇದು ಕುರುಬ ಸ್ಪರ್ಧಾಕಾಂಕ್ಷಿಗಳನ್ನು ರೊಚ್ಚಿಗೆಬ್ಬಿಸಿಬಿಟ್ಟಿದೆ. ಇದರಿಂದ ಜೆಡಿಎಸ್ ವಿರೋಧಿಗಳು ಜಾಸ್ತಿಯಾಗುತ್ತಾರೆಂಬ ಆತಂಕ ಕುಮಾರಸ್ವಾಮಿಗೆ.

ಆದರೆ 'ಅದು ನಿನ್ ಕರ್ಮ, ನಾನೇನ್ ಮಾಡ್ಲಿ' ಎಂಬ ಉಡಾಫೆ ಧೋರಣೆ ರೇವಣ್ಣನದು.

ಹಾಗೆ ನೋಡಿದರೆ ಈ ಅಣ್ಣತಮ್ಮಂದಿರು ಹೀಗೆ ಜಗಳವಾಡಿಕೊಂಡಿರುವುದು ಕೇವಲ ಮೈಸೂರಿನ ರಾಜಕೀಯದ ಬಗ್ಗೆ ಮಾತ್ರವಲ್ಲ. ಕುಮಾರಸ್ವಾಮಿ ಮುಖ್ಯಮಂತ್ರಿಯಾದ ದಿನದಿಂದಲೇ ರೇವಣ್ಣನ ಭಿನ್ನಮತ ಶುರುವಾಗಿತ್ತು.

ಹೆಗಲೇರಿದ ಶನಿ

ಮೊನ್ನೆ ಯಡಿಯೂರಪ್ಪನ ಬಜೆಟ್ ಮಂಡನೆಯಾದ ನಂತರ



ಎಷ್ಟು ಅರ್ಥವಾಗಿತ್ತೋ ಏನೋ, ಆದರೂ ಬಿಜೆಪಿ-ಜೆಡಿಎಸ್‌ನ ಸಕಲರೂ 'ಇದೊಂದು ಜನಪರವಾದ ಉತ್ತಮ ಬಜೆಟ್' ಎಂದು ಕೊಂಡಾಡಿದ್ದರು. ಆದರೆ ಈ ಪರಿವಾರದೊಳಗಿಂದಲೇ "ಈ ಬಜೆಟ್ ಅಷ್ಟು ಚೆನ್ನಾಗಿಲ್ಲ, ಜನಪರ ಕಾರ್ಯಕ್ರಗಳಿಲ್ಲ, ನಾನು ಸೂಚಿಸಿದ್ದ ಯಾವ ಅಂಶವೂ ಬಜೆಟ್‌ನಲ್ಲಿಲ್ಲ ಎಂದು ಪಬ್ಲಿಕ್ಕಾಗಿ ಹೇಳಿದವನು ಒಬ್ಬಾತ.

ಅದು ರೇವಣ್ಣ.

ಇದರರ್ಥ ಈ ರೇವಣ್ಣ ದೊಡ್ಡ ಎಕಾನಮಿಸ್ಟ್ ಎಂದೇನಲ್ಲ, ಬದಲಾಗಿ ರೇವಣ್ಣನಿಗೆ ತನ್ನ ಬೇರಾವುದೋ ಅಸಮಾಧಾನ ತೋರಿಸಿಕೊಳ್ಳಬೇಕಿತ್ತು, ಬಜೆಟ್ ವೇಳೆ ಅವಕಾಶ ಸಿಕ್ಕಿತು. ರೇವಣ್ಣ ಅಷ್ಟೇ ಸಾಕೆಂಬಂತೆ ಕಲ್ಲೆತ್ತಿಕೊಂಡು ಕೋ-ಜಾ ಸರ್ಕಾರದ ಮೇಲೆ ಎಸೆದೇಬಿಟ್ಟ.



ಭವಾನಿ

ರೇವಣ್ಣನ ಅತೃಪ್ತ ಆತ್ಮದ ವಿಕಾರಗಳು ಹೊರಬೀಳುವುದೇ ಹೀಗೆ....!

ಕುಮಾರಸ್ವಾಮಿ ಮುಖ್ಯಮಂತ್ರಿಯಾದಾಗಲೂ ರೇವಣ್ಣ ಅವತ್ತಿನ ಸಮಾರಂಭಕ್ಕೆ ಬಂದಿರಲಿಲ್ಲ. ಈಗ್ಗೆ ಎರಡು ತಿಂಗಳ ಹಿಂದೆ ಜೆಡಿಎಸ್ ಶಾಸಕರೆಲ್ಲರೂ ಪೂನಾದ ಅಂಬಿ ವ್ಯಾಲಿ ರೆಸಾರ್ಟ್‌ಗೆ ಹೋದಾಗಲೂ ಮಂತ್ರಿ ರೇವಣ್ಣ ಅತ್ತಕಡೆ ತಲೆಯೂ ಹಾಕಲಿಲ್ಲ. ಅಷ್ಟೇ ಅಲ್ಲ, ಕುಮಾರಸ್ವಾಮಿಯ "ಕೈ ಬಲಪಡಿಸುವ" ಈ ಟೂರಿನಲ್ಲಿ "ನನಗೇನು ಕೆಲಸ?" ಎಂದು ಅಸಡ್ಡೆ ಮಾಡಿದ ರೇವಣ್ಣ.

ಇವೆಲ್ಲಾ ಆಕಸ್ಮಿಕ ವಿಚಾರಗಳಲ್ಲ, ಅವತ್ತಿನ ಮಟ್ಟಿಗಿನ ಸೈದ್ಧಾಂತಿಕ ಭಿನ್ನಾಭಿಪ್ರಾಯವೂ ಆಗಿರಲಿಲ್ಲ, ಒಟ್ಟಿನಲ್ಲಿ ರೇವಣ್ಣನಿಗೆ ಅದೆಲ್ಲಾ ಸಂತೋಷ ಕೊಟ್ಟಿರಲಿಲ್ಲ ಅಷ್ಟೆ. ಆದರೆ ಯಾವಾಗ ನಿಜಕ್ಕೂ ಕೋ-ಜಾ ಸರ್ಕಾರ ರಚನೆಯಾಗಿ ಕುಮಾರಸ್ವಾಮಿ ಯಡ್ಡಿಯ ಜಂಟಿ ಆಡಳಿತ ಶುರುವಾಗೇ ಬಿಟ್ಟಿತೋ ರೇವಣ್ಣನಿಗೆ ಅಧಿಕಾರದ ಕೆರೆತ ಶುರು ವಾಯಿತು. ಅತ್ತೂ ಕರೆದು ಕಡೆಗೂ ಕ್ಯಾಬಿನೆಟ್ ಮಂತ್ರಿಯಾಗಿ ಒಳತೂರಿಕೊಂಡ ರೇವಣ್ಣ ತಮ್ಮ ಕಿತಾಪತಿ ಶುರು ಮಾಡೇಬಿಟ್ಟರು. ಯಾರೇ ಸಚಿವರು, ಉನ್ನತಾಧಿಕಾರಿಗಳಿರುವ ಸಭೆಯಿರಲಿ ಅಲ್ಲಿ ರೇವಣ್ಣನಿದ್ದರೆ ಕುಮಾರಣ್ಣನಿಗೆ ರೇವಣ್ಣನಿಂದ ಮುಖಭಂಗ ಗ್ಯಾರಂಟಿ.

"ನಿನಗೊತ್ತಾಗಲ್ಲ ಸುಮ್ನಿರೋ ಕುಮಾರ" ಎಂಬ ಚಿಲ್ಲರೆ ಮಾತುಗಳನ್ನು ಯಾವುದೇ ಎಗ್ಗಿಲ್ಲದೆ ಆಡಿಬಿಡುತ್ತಿದ್ದ ರೇವಣ್ಣ, ಅಣ್ಣ-ತಮ್ಮ ಸಂಬಂಧ ಮನೆಯಲ್ಲಿರಬೇಕೇ ವಿನಃ ಸರ್ಕಾರಿ ಸಭೆಗಳಲ್ಲಲ್ಲ ಎಂಬ ಕನಿಷ್ಠ ಕಾಮನ್‌ಸೆನ್ಸ್‌ನ್ನೂ ರೇವಣ್ಣ ತೋರಿಸಿದ ನಿದರ್ಶನಗಳಿಲ್ಲ. ತಾನು ಸೀನಿಯರು, ಅಣ್ಣ ಎಂಬುದು ರೇವಣ್ಣನ ಸ್ವಭಾವ. ಇವನ್ನೆಲ್ಲಾ ನೋಡಿ ನೋಡಿ ರೋಸಿಹೋದ ಕುಮಾರಸ್ವಾಮಿ ರೇವಣ್ಣನನ್ನು ದೂರವಿಟ್ಟರು. ರೇವಣ್ಣ ಇದರಿಂದ ಇನ್ನಷ್ಟು ರೊಚ್ಚಿಗೆದ್ದ.

ಬರೀ ವಿಧಾನಸೌಧದಲ್ಲಿ ಮಾತ್ರವಲ್ಲ ಹಾಸನ, ಮೈಸೂರು ರಾಜಕೀಯದಲ್ಲೂ ನಿತ್ಯ ತಲೆ ಹಾಕುತ್ತಾ ನೂರೆಂಟು ಕಿರಿಕಿರಿ ಮಾಡುತ್ತಾ ಇದ್ದಾರೆ ರೇವಣ್ಣ. ಜಿ.ಟಿ. ದೇವೇಗೌಡ ಕುಮಾರಸ್ವಾಮಿಗೆ ಕ್ಲೋಸು ಎಂಬ ಅಸಹನೆಯಿಂದ ದಿನಬೆಳಗಾದರೆ ಫೋನು ಮಾಡಿ ಜಿಟಿಗೆ ಬಯ್ಯುವುದೇ ರೇವಣ್ಣನ ದಿನಚರಿಯಾಗಿ ಬಿಟ್ಟಿದೆ. ಮೈಸೂರಿನಲ್ಲಿ ಇವತ್ತಿಗೂ ರೇವಣ್ಣನ ಹಿಡಿತವೇ ಜಾಸ್ತಿ. ಅಧಿಕಾರಿಗಳ ಮಟ್ಟದಲ್ಲಂತೂ ರೇವಣ್ಣ ಮೈಸೂರಿನ ಸರ್ವಾಧಿಕಾರಿಯೇ ಸೈ. ಹಾಗಾಗಿ ಮೈಸೂರು ಮಹಾನಗರ ಪಾಲಿಕೆ ಎಲೆಕ್ಷನ್‌ನ ಕ್ಷೇತ್ರ ವಿಂಗಡಣೆ ಹಾಗೂ ಮೀಸಲಾತಿಯಲ್ಲೂ ರೇವಣ್ಣ ತಲೆ ಹಾಕಿ ಕುಮಾರಸ್ವಾಮಿ, ಜಿ.ಟಿ. ದೇವೇಗೌಡ ಹಾಗೂ ಡಿ.ಟಿ. ಜಯಕುಮಾರ್‌ಗೆ ಕಿರಿಕಿರಿ ಮಾಡಿಬಿಟ್ಟಿದ್ದಾರೆ.

ಇದೆಲ್ಲದರ ಪರಾಕಾಷ್ಠೆ ಎಂಬಂತೆ ಮೊನ್ನೆ ವಿಧಾನ ಸೌಧದೊಳಗೆ ಕುಮಾರಸ್ವಾಮಿ ಹಾಗೂ ರೇವಣ್ಣ 'ನೀನ್ಯಾವನೋ ನೀನೆಷ್ಟರವನೋ' ಎಂಬಂತೆ ಜಗಳ ಮಾಡಿಕೊಂಡಿದ್ದಾರೆ.

ವಿನಾಶಕಾಲೇ ವಿಪರೀತ ಬುದ್ಧಿ ತಾನೆ!

ಗೌಡರ ಒಳ ಮೀಸಲಾತಿಗೂ ರೇವ್ಣೂ ಗುನ್ನ

ಸಿದ್ಧರಾಮಯ್ಯನವರ ಬಲಗುಂದಿಸಲು ಗೌಡರು ಒಳ ಮೀಸಲಾತಿ ಎಂಬ ಸಿದ್ಧಾಂತ ತೇಲಿಬಿಟ್ಟಿದ್ದರಲ್ಲವೆ? ಆಚಾನಕ್ಕಾಗಿ ಈ ಸಂದರ್ಭ ಬಳಸಿಕೊಂಡು ಹಾಸನ ಜಿಲ್ಲಾ ಪಂಚಾಯತಿಗೆ ಅಧ್ಯಕ್ಷನಾಗಿದ್ದ ಅಪ್ಪಣ್ಣ ಶೆಟ್ಟಿ ಎಂಬ ಆಸಾಮಿ ಈಗ ರೇವಣ್ಣನ ಕಾಕದೃಷ್ಟಿಗೆ ಬಲಿಯಾಗಿ ಕುರ್ಚಿ ಕಳೆದುಕೊಂಡಿದ್ದಾನೆ.

ರೇವಣ್ಣನ ಕೃಪಾಕಟಾಕ್ಷ ಕಳೆದುಕೊಂಡ ಕಾರಣಕ್ಕೆ ಈ ಶಿಕ್ಷೆ. ಹಾಸನ ಜಿಲ್ಲಾ ಪಂಚಾಯತಿ ಸಿಇಓ ಜಮಾದಾರ್ ಹೇಳಿಕೇಳಿ ರೇವಣ್ಣನ ಖಾಸಾ ಬಂಟ. ಆದರೆ ಅಧ್ಯಕ್ಷನಾಗಿದ್ದ ಅಪ್ಪಣ್ಣನಿಗೂ ಈ ಜಮಾದಾರ್‌ಗೂ ಎಣ್ಣೆ-ಸೀಗೆಕಾಯಿ ಸಂಬಂಧ. ಆದರೆ ರೇವಣ್ಣ ಕೊನೆಗೆ ರಕ್ಷಿಸಿದ್ದು ತನ್ನ ಚೇಲಾ ಜಮಾದಾರ್‌ನನ್ನೇ. ಪಾಪ ದೊಡ್ಡಗೌಡರ ಒಳ ಮೀಸಲಾತಿಯ ಫಲಾನುಭವಿ ಅಪ್ಪಣ್ಣ ಶೆಟ್ಟಿಯನ್ನಲ್ಲ.

ಇದು ರೇವಣ್ಣನ ಜಾಯಮಾನ.

'ಓದಲಾರದವನು ಓಡಾಡಿದನಂತೆ'

ರೇವಣ್ಣ-ಕುಮಾರಸ್ವಾಮಿಯ ಕಾಳಗ ಕೇವಲ ಸಹೋದರರಿಗೆ ಮಾತ್ರ ಸೀಮಿತವಾಗಿಲ್ಲ, ಬದಲಾಗಿ ಅದು ದೇವೇಗೌಡರ ಇಡೀ ಫ್ಯಾಮಿಲಿಯಲ್ಲಿ ವ್ಯಾಪಕವಾಗಿ ಹರಡಿದೆ. ಇದಕ್ಕೆ ಇಂಬು ಕೊಡುವಂತೆ ಇತ್ತೀಚೆಗೆ ಕುಮಾರಸ್ವಾಮಿಯವರ ಭಾವ ಒಬ್ಬರು ಹೋದಲ್ಲಿ-ಬಂದಲ್ಲಿ ಮುಖ್ಯಮಂತ್ರಿ ಬಗ್ಗೆ ತುಚ್ಛವಾಗಿ ಮಾತನಾಡಲಾರಂಭಿಸಿದ್ದಾರೆ.

"ಆ ಕುಮಾರಣ್ಣನಿಗೆ ಏನು ಗೊತ್ತು ಆಡಳಿತ-ಅಧಿಕಾರವನ್ನು ನಡೆಸುವುದು? ಆತ ಓದಿದ್ದಾನಾ, ಒಂದು ಫೈಲನ್ನು ನೋಡಿದ್ದಾನಾ, ಯಾವುದೇ ಒಂದು ಸಂಸ್ಥೆಯ ಜವಾಬ್ದಾರಿಯನ್ನು ಎಂದಾದರೂ ನಿರ್ವಹಿಸಿದ್ದಾನಾ? ಹೇಗೋ ಮುಖ್ಯಮಂತ್ರಿ ಆದ. ಆದರೆ ಆಮೇಲೆ ನಮ್ಮತ್ತಲೂ ತಿರುಗಿ ನೋಡಿಲ್ಲ. ತಾನಾಯಿತು, ತನ್ನ ಹೆಂಡತಿ ಆಯಿತು, ತನ್ನ ಮಗನಾಯಿತು, ಯಾವುದರಿಂದ ಎಷ್ಟು ಬರುತ್ತಿದೆ ಎಂಬುದಾಯಿತು, ಅಷ್ಟೇ ಅವನ ಕಾಳಜಿ. ಈಗ ಸರ್ಕಾರ ನಡೆಸೋದು ಹೇಗೆ ಅಂತ ಗೊತ್ತಿಲ್ಲದಿರುವುದಕ್ಕೆ ಗ್ರಾಮವಾಸ, ಜನತಾದರ್ಶನ ಅಂತೆಲ್ಲಾ ಮಾಡುತ್ತಿದ್ದಾನೆ. ಅದೆಲ್ಲದರಿಂದ ವೋಟ್‌ಗಳು ಬರುತ್ತವೆ ಅಂದುಕೊಂಡಿದ್ದಾನೆ. ಅವನಿಗೆ ಬುದ್ಧಿ ಹೇಳಿದರೂ ಕೇಳುವುದಿಲ್ಲ. ನಮ್ಮ ಕರ್ಮ" ಎಂದು ಆತ ತಲೆ ತಲೆ ಚಚ್ಚಿಕೊಳ್ಳುತ್ತಿದ್ದಾನೆ.

ಇದು ಸುಳ್ಳಲ್ಲ, ಸತ್ಯ, ದೇವರಾಣೆ!

'ಏಯ್ ಹೋಗಲೋ' ಬ್ರದರ್ಸ್....!


ಬಹುಶಃ ಕೌರವರು-ಪಾಂಡವರು ಸೈತ ಇಷ್ಟು ಲೋ ಲೆವೆಲ್‌ಗಿಳಿದು ಕಿತ್ತಾಡಿಕೊಂಡಿರಲಿಲ್ಲವೆಂದು ಕಾಣುತ್ತದೆ. ಆ ಲೆವೆಲ್‌ಗಿಳಿದುಬಿಟ್ಟಿದ್ದಾರೆ ಈ ಕುಮಾರಣ್ಣ-ರೇವಣ್ಣ ಬ್ರದರ್ಸ್. ಮೊನ್ನೆ ವಿಧಾನಸೌಧದಲ್ಲಿ ನಡೆದ 'ನೀನ್ಯಾವನೋ ಕೇಳಕ್ಕೆ' ಎಂಬ ಜಗಳ ಸ್ಫೋಟಗೊಳ್ಳುವುದಕ್ಕೂ ಮೊದಲೇ ಇಂತಹ ಹತ್ತಾರು ಸುತ್ತಿನ ಜಗಳಗಳು ಆಗಿಹೋಗಿವೆ.

ಕುಮಾರಸ್ವಾಮಿ ಸಿಎಂ ಆದ ಹೊಸತರಲ್ಲಿ ಒಮ್ಮೆ ಹಾಸನಕ್ಕೆ ಹೋಗಿದ್ದಾಗ ಮೀಟಿಂಗ್‌ವೊಂದರಲ್ಲಿ ರೇವಣ್ಣ ಎಲ್ಲರಿಗೂ ಕೇಳಿಸುವಂತೆಯೇ 'ಏಯ್ ನಿನಗೊತ್ತಾಗಲ್ಲ ಸುಮ್ನಿರು' ಎಂದು ಗದರಿಸಿಬಿಟ್ಟಿದ್ದ. ಇದರಿಂದ ಕಿರಿಕಿರಿಗೊಂಡ ಕುಮಾರಸ್ವಾಮಿ ಮೀಡಿಯಾದವರಿಗೆ ಕೇಳಿಸುವ ಹಾಗೆಯೇ ರೇವಣ್ಣನಿಗೆ ಬಯ್ದರು. ಆದರೆ ಹಾಗೆ ಬಯ್ದಿದ್ದನ್ನು ಬರೆಯಬೇಡಿ ಎಂತಲೂ ಪತ್ರಕರ್ತರಿಗೆ ಬೇಡಿಕೊಂಡಿದ್ದರು.


ಮುಖ್ಯಮಂತ್ರಿಯಾದವನಿಗೆ ರೇವಣ್ಣನಂಥ ಅವಿವೇಕಿ ಸೋದರನೊಬ್ಬನಿದ್ದರೆ ಆ ಸ್ಥಾನದ ಗೌರವ, ಮರ್ಯಾದೆ ಉಳಿಸಿಕೊಳ್ಳುವುದು ನಿಜಕ್ಕೂ ಕಷ್ಟ ಅಲ್ಲವೆ?

...ಟ್ ಕೊಲೆಗಳನ್ನೂ ಮಾಡಿಸುವ ಹಂತಕ್ಕೆ ...ಿದೆ. ಪಾಕ್ ಕ್ರಿಕೆಟ್ ಕೋಚ್ ಬಾಬ್ ವೂಲ್ಮರ್ ... ಮಾಡಿದ ವ್ಯಕ್ತಿಗಳ್ಯಾರೆಂಬುದು ಈ ಕ್ಷಣದಲ್ಲಿ ...ಯಾಗದಿದ್ದರೂ ಈ ಹತ್ಯೆ ನಡೆಸಿದ್ದಂತೂ ಬೆಟ್ಟಿಂಗ್ ...ಫಿಯಾಗಳೇ ಎಂಬುದೀಗ ಗೊತ್ತಾಗಿದೆ.

...ಳೆದ ಭಾನುವಾರ ಬೆಳಗ್ಗೆ ಕಿಂಗ್‌ಸ್ಟನ್‌ನ ಪೆಗಾಸಸ್ ...ಟೆಲ್‌ನ 12 ನೇ ಮಹಡಿಯ ರೂಂ ನಂಬರ್ ...ರಲ್ಲಿ ವೂಲ್ಮರ್ ಶವ ಪತ್ತೆಯಾದ ಚೆನ್ನ ಹಿಂದೆಯೇ ...ನ ಮಾಜಿ ಕ್ಯಾಪ್ಟನ್ ಸರ್ಫರಾಜ್ ನವಾಜ್ ಒಂದು ...ಕೆ ಕೊಟ್ಟ. ವಿಶ್ವಕಪ್ ಶುರುವಾಗುವ ಮೊದಲೇ ...ೆ 5 ಮಂದಿ ಪಾಕಿಸ್ತಾನದ ಟಾಪ್ ಬುಕ್ಕಿಗಳು ...ೀಸ್‌ಗೆ ಹೋಗಿದ್ದರೆಂಬ ವಿಚಾರ ಅದು. ಅಂತವರ ... ಲಾಹೋರಿನ ಕುಖ್ಯಾತ ಖ್ವಾಜಾ ಆರೀಫ್ ಪಪ್ಪು ... ಇದ್ದನಂತೆ. ದಾವೂದ್ ಇಬ್ರಾಹಿಂನ ಬಲಗೈ ...ತ ಈ ಪಪ್ಪು ಇದೀ ಪಾಕಿಸ್ತಾನದ ಕ್ರಿಕೆಟ್ ಬೆಟ್ಟಿಂಗ್ ...ಟ್‌ನ ಕಿಂಗ್‌ಪಿನ್‌ಗಳಲ್ಲೊಬ್ಬ. ಈ ಬುಕ್ಕಿಗಳಿಗೆ ಹಾಲಿ ...ಸ್ತಾನ್ ಟೀಂನ ಐವರು ಆಟಗಾರರ ಜೊತೆ ... ವ್ಯವಹಾರಿಕ ...ಂಥ ...ದ್ದವೆಂತಲೂ ...ಳಲಾಗುತ್ತಿದೆ. ...ನ್ನೊಂದು ...ರಿರುವ ಒಂದು ...ಕ್ ಟೀಂನಲ್ಲಿ ...ರು ...ಗಾರರು ...ಕ್ಕಿಗಳು ಹೇಳಿದಂತೆ ಕೇಳಿದರೆ ಸಾಕಲ್ಲವೆ..... ...ದು ಮ್ಯಾಚ್‌ನ ಹಣೆಬರಹ ಬದಲಿಸಲು!



ಕಿಲ್ಲರ್ ಕ್ರಿಕೆಟ್



ಪೆಗಾಸಸ್ ಹೋಟೆಲ್





... ಪಾಕ್- ಐರ್ಲೆಂಡ್ ಮ್ಯಾಚ್‌ನಲ್ಲೂ ಆಗಿದ್ದು ಇದೇನೆ. ...ಪ್ 'ಡಿ'ಯಲ್ಲಿ ಪಾಕಿಸ್ತಾನದೊಂದಿಗೆ ವೆಸ್ಟ್‌ಇಂಡೀಸ್, ...ಬಾಬ್ವೆ ಹಾಗೂ ಐರ್ಲೆಂಡ್ ಟೀಮುಗಳಿದ್ದವು. ...ುಗಳ ಪೈಕಿ ಪಾಕ್ ನೂರಕ್ಕೆ ನೂರು ಗೆದ್ದೇ ...ಲ್ಲುತ್ತದೆಂದು ಆಡೋ ಮಗು ಕೂಡ ಹೇಳಬಹುದಾಗಿ ...ದು ಐರ್ಲೆಂಡ್ ವಿರುದ್ಧದ ಮ್ಯಾಚ್ ಅನ್ನು. ಹಾಗಾಗಿ ...ಟ್ ಜೂಜುಕೋರರು ನೂರಾರು ಕೋಟಿ ರೂಪಾಯಿ ...ನ್ನು ಪಾಕ್ ಪರ ಬೆಟ್ಟಿಂಗ್ ಮಾಡಿದ್ದರು.

... ಇದರ ಮೊತ್ತ ಐನೂರು ಕೋಟಿಗಳನ್ನು ...ರಿತ್ತು ಎನ್ನಲಾಗಿದೆ. ಬೆಟ್ಟಿಂಗ್ ದಂಧೆ ...ಸುವವರಿಗೆ ಇಷ್ಟೂ ಹಣ ತಮ್ಮ ಬಳಿಯೇ ...ಳಿದು ಹೋಗಬೇಕೆಂದರೆ ಪಾಕ್ ...ೇಲಲೇಬೇಕಿತ್ತು. ಹಾಗೂ ಈ ಮಾಫಿಯಾಗಳು ...ಕ್ ಸೋಲುವಂತೆ ...ೇಶಿಸಿದ್ದರು ಎಂಬುದೀಗ ...ತ್ತಾಗಿಲ್ಲ. ಆದರೆ ಅಷ್ಟರಲ್ಲಿ ...ಸ್ಟ್‌ಇಂಡೀಸ್ ವಿರುದ್ಧ ...ದ್ಧ ಮೊದಲ ...ಮ್ಯಾಚ್‌ನಲ್ಲೇ ಪಾಕ್ ...ೇತಿತ್ತು. ಸೂಪರ್ 8 ಕ್ಕೆ ... ಹೋಗಬೇಕೆಂದರೆ ...ಕ್ ತಂಡ ಐರ್ಲ್ಯಾಂಡ್ ...ಗೂ ಜಿಂಬಾಬ್ವೆ ...ದ್ಧ ಗೆಲ್ಲಲೇಬೇಕಿತ್ತು. ...ರೆ ಐರ್ಲ್ಯಾಂಡ್ ...ದ್ಧ ಪಾಕ್ ಸೋಲುತ್ತದೆ ಎಂಬುದನ್ನು ಮಾಫಿಯಾಗಳು ಬಹಳ ಹಿಂದೆಯೇ ತೀರ್ಮಾನಿಸಿಬಿಟ್ಟಿದ್ದರು. ಬೆಟ್ಟಿಂಗ್ ರ್ಯಾಕೆಟ ನೊಂದಿಗೆ ಡೀಲ್ ಕುದುರಿಸಿಕೊಂಡಿದ್ದ ಕೆಲ ಪಾಕ್ ಆಟಗಾರರು 'ನಾವು ಐರ್ಲ್ಯಾಂಡ್ ಮೇಲೆ ಗೆದ್ದರೆ ಮಾತ್ರ ನಮಗೆ ಸೂಪರ್ 8 ಕ್ಕೆ ಹೋಗುವ ಛಾನ್ಸ್ ಇದೆ' ಎಂದು ಕೇಳಿಕೊಂಡರೂ ಅವರ ಧಣಿಗಳು ಒಪ್ಪಲಿಲ್ಲವಂತೆ.



ದಾವೂದ್ ಇಬ್ರಾಹಿಂ

"500 ಕೋಟಿತನಕ ಬೆಟ್ಟಿಂಗ್ ಆಗಿದೆ, ಪಾಕ್ ಗೆದ್ದರೆ ನಷ್ಟ ತುಂಬಿ ಕೊಡುವವರ್‍ಯಾರು.... ಸುಮ್ಮನೆ ನಾವು ಹೇಳಿದಷ್ಟು ಮಾಡಿ" ಎಂಬ ಅಂತಿಮ ಆದೇಶ ಬಂದ ಮೇಲೆ ಪಾಕ್ ಆಟಗಾರರು ಏನೂ ಮಾಡುವಂತಿರಲಿಲ್ಲ.

ಪಾಕ್ ಐರ್ಲ್ಯಾಂಡ್ ವಿರುದ್ಧದ ಮ್ಯಾಚ್‌ನಲ್ಲಿ ಸೋಲನ್ನೇ ಆರಿಸಿಕೊಳ್ಳಬೇಕಾಗಿ ಬಂತು. ನಂತರ ವಿಶ್ವಕಪ್ ಟೂರ್ನಿಯಿಂದಲೇ ಪಾಕ್ ಹೊರಬಿತ್ತು.


ಬಾಬ್ ವೂಲ್ಮರ್ ಹತ್ಯೆಯ ಹಿನ್ನೆಲೆಯಲ್ಲಿ ಈ ಎಲ್ಲಾ ಅಂಶಗಳಿವೆ. ವಿಂಡೀಸ್ ಪೊಲೀಸರ ತನಿಖೆ ಕೊಲೆಗಾರ ಯಾರೆಂಬುದುದಕ್ಕಷ್ಟೇ ಈಗ ಸೀಮಿತವಾಗಿದೆ. ಆದರೆ **motive behind the murder** ವಿಚಾರ ಬಂದಾಗ ಇದೆಲ್ಲವನ್ನೂ ಅವರು ಗಮನಿಸುತ್ತಾರೆ ಎನ್ನಲಾಗಿದೆ.

ಒಬ್ಬ ಕೋಚ್ ಆಗಿ ವೂಲ್ಮರ್‌ಗೂ ತಂಡ ಹೇಗೆ ಆಡಿತು, ಬೇಕಂತಲೇ ಸೋತರಾ, ಯಾವ್ಯಾವ ಆಟಗಾರರು ಬೆಟ್ಟಿಂಗ್ ದಂಧೆಯವರೊಂದಿಗೆ ಲಿಂಕ್ ಹೊಂದಿದ್ದಾರೆಂಬ ಕನಿಷ್ಠ ಮಾಹಿತಿಯಾದರೂ ಇರುತ್ತದೆ. ಅಷ್ಟೇ ಅಲ್ಲದೆ ತನಗೆ ತಿಳಿದುಬಂದಿದ್ದ ವಿಚಾರಗಳನ್ನೆಲ್ಲಾ ಬರೆದು ಪುಸ್ತಕ ಪ್ರಕಟಿಸುವ ಯೋಚನೆಯೂ ವೂಲ್ಮರ್‌ಗಿತ್ತು. ಈ ಹಿನ್ನೆಲೆಯಲ್ಲಿ ವೂಲ್ಮರ್ 2005 ರ ಏಪ್ರಿಲ್‌ನಲ್ಲೊಮ್ಮೆ ದೆಹಲಿ ಪೊಲೀಸ್ ಕಮೀಷನರ್ ಕೆ.ಕೆ. ಪಾಲ್‌ರನ್ನೂ ಭೇಟಿಯಾಗಿದ್ದರು. ದಕ್ಷಿಣ ಆಫ್ರಿಕಾ, ಇಂಡಿಯಾ ಹಾಗೂ ಪಾಕ್‌ನ ಕೆಲ ಆಟಗಾರರು ಬುಕ್ಕಿಗಳಿಂದ ಲಂಚ ಪಡೆದಿದ್ದ ಪ್ರಕರಣಗಳ ಅನೇಕ ಮಾಹಿತಿ ಪಾಲ್ ಹತ್ತಿರ ಇತ್ತು. ಅದನ್ನೆಲ್ಲಾ ಪಡೆದು ತಮ್ಮ ಪುಸ್ತಕದಲ್ಲಿ ಸೇರಿಸುವ ಉದ್ದೇಶ ವೂಲ್ಮರ್‌ಗಿತ್ತು ಎನ್ನಲಾಗಿದೆ.

ಕ್ರಿಕೆಟ್ ಒಂದು ಶುದ್ಧ ಆಟವಾಗಿಯೇ ಉಳಿಯಬೇಕೆಂಬ ವೂಲ್ಮರ್‌ರ ಈ ಪ್ರಯತ್ನಗಳೇ ಈಗ ಅವರ ಪ್ರಾಣ ಕಳೆದುಕೊಳ್ಳುವಂತೆ ಮಾಡಿರುವುದು ದುರದೃಷ್ಟಕರ.

ಪಾಕ್‌ನ ಭ್ರಷ್ಟ ಆಟಗಾರರು

ವಿಶ್ವ ಕ್ರಿಕೆಟ್‌ನಲ್ಲಿ ಭ್ರಷ್ಟಾಚಾರದ ಹೆಚ್ಚು ಆರೋಪಗಳಿರುವುದೇ ಪಾಕಿಸ್ತಾನದ ಆಟಗಾರರ ವಿರುದ್ಧ. ಪಾಕ್ ತಂಡದ ಮಾಜಿ ವಿಕೆಟ್‌ಕೀಪರ್ ರಶೀದ್ ಲತೀಫ್, ಇಮ್ರಾನ್ ಖಾನ್ ಹಾಗೂ ಸರ್ಫರಾಜ್ ನವಾಜ್‌ರು ನೂರಾರು ಬಾರಿ ಈ ವಿಚಾರ ಪ್ರಸ್ತಾಪಿಸಿದ್ದಾರೆ. ಕೆಲ ಲಂಚಕೋರ ಆಟಗಾರರ ವಿವರಗಳನ್ನು ನೀಡಿದ್ದಾರೆ. ಅಂಥವರ ಪೈಕಿ ಕುಖ್ಯಾತನಾಗಿದ್ದವನು ಸಲೀಂ ಮಲ್ಲಿಕ್.



ಸಲೀಂ ಮಲ್ಲಿಕ್



ರಶೀದ್ ಲತೀಫ್



[illegible]

ಇವನು ಕ್ಯಾಪ್ಟನ್ ಆಗಿದ್ದಾಗ ಟಾಸ್ ಗೆದ್ದರೂ ಬೇಕಂತಲೇ ಫೀಲ್ಡಿಂಗ್ ಆರಿಸಿಕೊಳ್ಳುವುದು, ಸ್ವತಃ ತಾನೇ ಕಳಪೆ ಬೌಲಿಂಗ್ ಮಾಡಿ ಎದುರಾಳಿ ಟೀಂನವರಿಗೆ ಯಥೇಚ್ಛ ರನ್ ಕೊಟ್ಟು ಬಿಡುವುದು, ಜೊತೆ ಆಟಗಾರರನ್ನೇ ವಂಚಿಸಿ ರನ್‌ಔಟ್ ಮಾಡಿಸುವ ತಂತ್ರಗಳನ್ನೆಲ್ಲಾ ಸಲೀಂ ಮಲ್ಲಿಕ್ ಮಾಡುತ್ತಿದ್ದ. ಈ ಬಗ್ಗೆ ಆಗ ಟೀಂನೊಳಗೇ ಬೇಕಾದಷ್ಟು ಗಲಾಟೆಗಳೂ ಆಗಿದ್ದವು. ಅಷ್ಟೇ ಅಲ್ಲಾ 1994ರಲ್ಲೊಮ್ಮೆ ಆಸ್ಟ್ರೇಲಿಯಾದ ಸ್ಪಿನ್ನರ್ ಶೇನ್ ವಾರ್ನ್ ಹಾಗೂ ಓಪನರ್ ಮಾರ್ಕ್ ವಾ 'ಸಲೀಂ ಮಲ್ಲಿಕ್ ನಮಗೆ ಲಂಚದ ಆಮಿಷ ಒಡ್ಡಿ ಕಳಪೆಯಾಗಿ ಆಡುವಂತೆ ಕೇಳಿದ್ದ' ಎಂದು ಬಹಿರಂಗವಾಗೇ ಆರೋಪಿಸಿದ್ದರು. ನಂತರ ಪಾಕಿಸ್ತಾನ್ ಕ್ರಿಕೆಟ್ ಬೋರ್ಡ್ ಇದರ ಬಗ್ಗೆ ತನಿಖೆ ನಡೆಸಲು ಖಯ್ಯೂಂ ತನಿಖಾ ಆಯೋಗವನ್ನೇ ನೇಮಿಸಿತ್ತಾದರೂ ವಾರ್ನ್ ಹಾಗೂ ವಾ ಪಾಕಿಸ್ತಾನಕ್ಕೆ ಹೋಗಿ ಸಾಕ್ಷಿ ಹೇಳಲಿಲ್ಲ. ಅದೇ ವೇಳೆಗೆ ಸ್ವತಃ ಇವರಿಬ್ಬರೂ ಭಾರತೀಯ ಬುಕ್ಕಿಯೊಬ್ಬನಿಂದ ತಲಾ 3 ಲಕ್ಷ ಲಂಚ ಪಡೆದು ಶ್ರೀಲಂಕಾ ವಿರುದ್ಧದ ಮ್ಯಾಚ್‌ನ ಒಳವಿವರಗಳನ್ನೆಲ್ಲಾ ಮಾರಿಕೊಂಡು ಸಿಕ್ಕಿಬಿದ್ದರು. ಖಯ್ಯೂಂರ ತನಿಖೆ ದಡ ಸೇರಲೇ ಇಲ್ಲ. ಪಾಕ್ ಆಟಗಾರರ ಭ್ರಷ್ಟಾಚಾರವೂ ನಿಲ್ಲಲಿಲ್ಲ.

ಮೂರು ಸಾವಿರಕ್ಕೆ ಡ್ರೆಸ್ಸಿಂಗ್ ರೂಂ ಎಂಟ್ರಿ

ಕ್ರಿಕೆಟ್ ಆಟಗಾರರಿಗೆ ನಮ್ಮ ರಾಜಕೀಯ ನಾಯಕರಿಗೆ ಕೊಡುವಷ್ಟೇ ಸೆಕ್ಯುರಿಟಿ ಇರುತ್ತದೆ. ಅವರು ಪ್ರಯಾಣಿಸುವ ವಿಮಾನ, ಉಳಿಯುವ ಹೋಟೆಲ್, ಮ್ಯಾಚ್ ನಡೆಯುವ ಸ್ಟೇಡಿಯಂನ ಪೆವಿಲಿಯನ್‌ಗಳಲ್ಲೆಲ್ಲಾ ಭಾರಿ ಭದ್ರತಾ ವ್ಯವಸ್ಥೆ ಇರುತ್ತದೆ. ಹಾಗಿದ್ದಾಗಲೂ ಬೆಟ್ಟಿಂಗ್

ಬಿಳಿದಾಳೆ ಈಶ

ಮಾಫಿಯಾದ ಬುಕ್ಕಿಗಳು ಆರಾಮಾಗಿ ಆಟಗಾರರ ರೂಂಗಳಿಗೆ ಎಡೆ ತಾಕಿಕೊಂಡಿರುತ್ತಾರೆಂಬುದು ನಿಜ. ಪಾಕ್ ಮಾಜಿ ಕ್ಯಾಪ್ಟನ್ ರಶೀದ್ ಲತೀಫ್ ಇದಕ್ಕೇನು ಹೇಳಿದ್ದಾನೆ ಗೊತ್ತೆ?

"ಟೀಂ ಮ್ಯಾನೇಜರ್‌ಗಳ ಹತ್ತಿರ ಪ್ರತಿ ಮ್ಯಾಚ್‌ಗೆ ಮುನ್ನ 75 ಪಾಸ್ ಕೊಟ್ಟಿರುತ್ತಾರೆ. ಅವನು ತಲಾ 3 ಸಾವಿರ ಕೊಟ್ಟರೆ ಯಾರಿಗೆ ಬೇಕಾದರೂ ಪಾಸ್ ಮಾರಿಕೊಳ್ಳುತ್ತಾನೆ. ಆ ಅವಕಾಶ ಬಳಸಿಕೊಳ್ಳುವ ಬೆಟ್ಟಿಂಗ್ ದಂಧೆಕೋರರು ಪಾಸ್ ಖರೀದಿಸಿ ನೇರ ಪೆವಿಲಿಯನ್ ಹೊಕ್ಕು ಕೂರುತ್ತಾರೆ. ಅವಕಾಶ ಸಾಧಿಸಿ ತಮ್ಮ ಬಳಗದ ಆಟಗಾರರೊಂದಿಗೆ ಸಮಾಲೋಚಿಸಿ ಮ್ಯಾಚ್ ನಡೆಯುವಷ್ಟು ಹೊತ್ತು ಮುಂದೇನಾಗಬೇಕೆಂಬುದರ ಆದೇಶ ನೀಡುತ್ತಿರುತ್ತಾರೆ" ಎಂದು.

ಸ್ವತಃ ಪಾಕ್ ಟೀಮಿನ ಕ್ಯಾಪ್ಟನ್ ಆಗಿದ್ದವನೇ ಈ ಮಾತು ಹೇಳುತ್ತಾನೆಂದರೆ [illegible]

ಹ್ಯಾನ್ಸಿ ಕ್ರೊನಿಯೆನೂ ಕೊಲೆಯಾದ

ತಾನೊಬ್ಬ ಅವತಾರ ಪುರುಷನೇನೊ ಎಂಬಂತೆ ಗಂಭೀರ ಮುಖಭಾವ ಹೊತ್ತು ಕ್ರಿಕೆಟ್ ಆಡಿಕೊಂಡಿದ್ದ ...ನ್ಸಿ ಕ್ರೊನಿಯೆ ನಿಮಗೆ ನೆನಪಿರಬೇಕು.

ಅತೀ ಚಿಕ್ಕ ವಯಸ್ಸಿಗೇ ದಕ್ಷಿಣ ಆಫ್ರಿಕಾ ಟೀಂನ ಕ್ಯಾಪ್ಟನ್ ಆಗಿದ್ದ ಇವನು. ಎಲ್ಲರೂ ಇವನನ್ನು ಇಂದ್ರ ...ದ್ರ ಎಂದು ಹೊಗಳುತ್ತಿದ್ದಾಗಲೇ ಕ್ರೊನಿಯೆ ಮ್ಯಾಚ್ ಫಿಕ್ಸಿಂಗ್ ಹಗರಣದಲ್ಲಿ ಲಂಚ ಪಡೆದು ರೆಡ್ ...ಂಡಾಗಿ ಸಿಕ್ಕಿಬಿದ್ದ. ತನ್ನ ತಪ್ಪನ್ನು ಒಪ್ಪಿಕೊಂಡಿದ್ದ. ಆದರೆ ಆ ಬಗ್ಗೆ ತನಿಖೆ ಶುರುವಾದಾಗಲೇ ಕ್ರೊನಿಯೆ ಸತ್ತ. ...ನಿಯ ಹತ್ತಿ ಕೂತಿದ್ದ ಸಣ್ಣ ವಿಮಾನವೊಂದು ಆಫ್ರಿಕಾದಲ್ಲೇ ಉರುಳಿ ಬಿತ್ತು. ಕ್ರೊನಿಯೆ ಜತೆಗೆ ಇನ್ನಿತರ 14 ... ಸಾರ್ವಜನಿಕರೂ ಅವತ್ತು ಸತ್ತರು.

ತನಿಖೆ ಅರ್ಧದಲ್ಲೇ ನಿಂತು ಹೋಯಿತು. ಈಗ ಬಾಬ್ ವೂಲ್ಮರ್ ಹತ್ಯೆ ನಂತರ ಕ್ರೊನಿಯೆ ಸಾವಿನ ಬಗ್ಗೆಯೂ ಪಿತೂರಿ ಇದ್ದಿರಬಹುದಾ ಎಂಬ ಶಂಕೆ ಬಂದಿದೆ.



ದೂರದ ವೆಸ್ಟ್‌ಇಂಡೀಸ್ ತನಕ ಚಾಚಬಲ್ಲ ಮಾಫಿಯಾ ಕೈಗಳಿಗೆ ದಕ್ಷಿಣ ಆಫ್ರಿಕಾ ದೂರವಾಯಿತೆ?

ಕ್ರೊನಿಯೆ ಸಿಕ್ಕಿಬಿದ್ದಾಗಲೇ ಭಾರತದ ಅಜಯ್ ಜಡೇಜಾ, ಅಜರುದ್ದೀನ್ ಹಾಗೂ ನಯನ್ ಮೊಂಗಿಯರ ಲಂಚಾವತಾರಗಳ ಬಗ್ಗೆ ಭಾರೀ ವಿವಾದವೆದ್ದಿತ್ತು. ಆದರೆ ಯಾವುದೂ ಸಾಬೀತಾಗಲಿಲ್ಲ. ಚೆನ್ನಾಗಿ ಕಾಸು ಮಾಡಿಕೊಂಡ ಈ [illegible]ಗಳೆಲ್ಲಾ ಈಗಲೂ ನಗುನಗುತ್ತಾ ಓಡಾಡಿಕೊಂಡಿದ್ದಾರೆ.


ಆದರೆ [illegible] ಆಗಿದ್ದ ಬಾಬ್ ವೂಲ್ಮರ್ ಈ ದುಷ್ಕರ್ಮಿಗಳಿಗೆ ಬಲಿಯಾಗಿದ್ದಾನೆ.

ರಿವೇಂಜ್ ಕಿಲ್ಲಿಂಗ್ಸ್ 22

ಡಾ. ಸೋಮನಾಥ್

ಪುನಿತೇಶನ ಬೇಟೆಯಲ್ಲಿ ಕುರಿ ಹಿಂಡು

ಅವು 2003ರ ಜನವರಿ ಹತ್ತನೇ ತಾರೀಖು ಸುಂಕದಕಟ್ಟೆಯ ಕುರಿಕೃಷ್ಣನ ಅಡ್ಡೆಯ ಮೇಲೆ ದಾಳಿಸಿ ಬಂದ ಪುನಿತೇಶ ತನ್ನ ಹತ್ತು ಮಂದಿ ಹುಡುಗರನ್ನು ಕಟ್ಟಿಕೊಂಡು ಇನ್ನಿಲ್ಲವಂತೆ ತಾಂಡವ ಮಾಡಿಬಿಟ್ಟಿದ್ದ. ಕೈಗೆ ಸಿಕ್ಕ ಕುರಿಕೃಷ್ಣನ ಇಬ್ಬರು ಶಿಷ್ಯರನ್ನು ಮುಖಾಮೂತಿ ನೋಡದೇ ಸಮಾ ಚಚ್ಚಿಬಿಟ್ಟ. ಅದೃಷ್ಟವಶಾತ್ ಎರಡನೇ ಬಾರಿ ಪುನಿತೇಶನ ಕೈಯಿಂದ ಕುರಿ ಕೃಷ್ಣ ಬಚಾವಾಗಿದ್ದ. ಮೊದಲ ಸಾರಿ ಸುಂಕದಕಟ್ಟೆಯ ಮುರ್ಡೇಶ್ವರ ಬಾರಿನ ಮೇಲೆ ದಾಳಿ ಮಾಡಿ ತನ್ನಿಬ್ಬರು ಪ್ರಾಣ ಸ್ನೇಹಿತರಾದ ವಿಜಿ ಮತ್ತು ಶಂಕ್ರರನ್ನು ಕೊಂದು ತನ್ನ ಕೈ ಕತ್ತರಿಸಿದ್ದು, ಈಗ ಎಲ್ಲೆಂದರಲ್ಲಿ ತನ್ನನ್ನು ಮುಗಿಸಲು ರೇಡ್ ಮಾಡುತ್ತಿರುವುದು, ಎಲ್ಲಕ್ಕೂ ಒಂದೇ ಪರಿಹಾರವೆಂದರೆ ಅದು ಪುನಿತೇಶನನ್ನು ತೆಗೆದುಬಿಡುವುದು ಎಂಬ ನಿರ್ಧಾರಕ್ಕೆ ಬಂದ ಕುರಿಕೃಷ್ಣ ಇದಾಗಿ ಎರಡೇ ತಾಸಿನಲ್ಲಿ ತನ್ನ ಪರಮಾಪ್ತರಾದ ಹತ್ತು ಮಂದಿ ಹುಡುಗರನ್ನು ಕಲೆ ಹಾಕಿಬಿಟ್ಟ.



ನಟರಾಜ

ಆ ಪೈಕಿ ಮಹಾನ್ ಫೈಟರ್ ಕಮಲಾನಗರದ ದಿನೇಶ ಆವತ್ತು ಕುರಿ ಕೃಷ್ಣನ ಪಡೆಯಲ್ಲಿದ್ದ. ಜೊತೆಗೆ ವಾಲೆ ಮಂಜ, ರವಿ, ಮೆಡಿಕಲ್ ಸೋಮ, ಹಾಪ್ ರವಿ ಮುಂತಾದ ಖತರ್‌ನಾಕ್ ಹುಡುಗರ ದಂಡೇ ಕುರಿಕೃಷ್ಣನ ಬೆನ್ನಿಗಿತ್ತು. ಸಂಜೆಯ ಹೊತ್ತಿಗೆ ಪುನಿತೇಶ ಹೆಗ್ಗನಹಳ್ಳಿ ಮೇನ್ ರೋಡಿಗೆ ಬಂದೇ ಬರುತ್ತಾನೆಂಬ ಮಾಹಿತಿಯೂ ಸಿಕ್ಕಿತ್ತು.

ಮಧ್ಯಾಹ್ನ ತಾನು ಕುರಿ ಅಡ್ಡೆಯ ಮೇಲೆ ರೇಡ್ ಬದ್ದಿದ್ದಕ್ಕೆ, ಇಷ್ಟು ಬೇಗನೇ ಪ್ರತಿಫಲ ಉಣ್ಣಬೇಕಾದಿತೆಂಬ ಲೆಕ್ಕಾಚಾರ ತಾನೇ ಪುನಿತೇಶನಿಗೆಲ್ಲಿತ್ತು? ಬಹುಶಃ ತನಗೆ ಹೆದರಿಕೊಂಡೇ ಇನ್ನೊಂದು ತಿಂಗಳ ಕಾಲ ಕುರಿ ಯಾರ ಕಣ್ಣಿಗೂ ಬೀಳಲಾರ ಎಂದೇ ಆತ ಲೆಕ್ಕ ಹಾಕಿದ್ದ. ಅದೇ ಹುಂಬತನದಿಂದ ಆವತ್ತು ಸಂಜೆ ಹೆಗ್ಗನಹಳ್ಳಿ ಮೇನ್‌ರೋಡಿನ ಗಲ್ಲಿಯೊಂದರಲ್ಲಿ ತನ್ನ ಗೆಳೆಯ ರವಿಕುಮಾರ್ ಎಂಬಾತನ ಜೊತೆ ಮಾತಾಡುತ್ತಾ ನಿಂತುಬಿಟ್ಟ.

ಕುರಿಯನ ಲೆಕ್ಕಾಚಾರ ಹುಸಿಯಾಗಲಿಲ್ಲ. ತನ್ನ ಮೇಲೆ ಪ್ರತೀಕಾರ ನಡೆದೀತೆಂಬ ಸಣ್ಣದೊಂದು ಅಳಕೂ ಇಲ್ಲದೆ ಹರಟುತ್ತಿದ್ದ ಪುನಿತೇಶ ಸಲೀಸಾಗಿ ಕುರಿಯ ಬಲೆಯಲ್ಲಿ ಸಿಕ್ಕಿಬಿದ್ದಿದ್ದ. ತನ್ನನ್ನು ಸುತ್ತುವರಿದ ಕುರಿಯ ಹಿಂಡನ್ನು ಕಂಡಿದ್ದೇ ಅಲ್ಲಿಂದ ಓಡತೊಡಗಿದ ಪುನಿತೇಶ ಬಿಇಎಲ್ ನೌಕರ ನಾಗರಾಜ್ ಎಂಬುವವರ ಮನೆ ಕಾಂಪೌಂಡು ನುಗ್ಗಿಬಿಟ್ಟ. ಅಷ್ಟರೊಳಗೆ ಆತನ ಜೊತೆಗಿದ್ದ ರವಿಕುಮಾರನ ಎರಡೂ ಕೈಸಿಗಿದು ಹಾಕಿದ ಕುರಿಯನ ಗ್ಯಾಂಗ್ ಆತನನ್ನು ಅಲ್ಲೇಬಿಟ್ಟು ಇನ್ನೆಲ್ಲೂ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲದ ಅಸಹಾಯಕ ಸ್ಥಿತಿಯಲ್ಲಿದ್ದ ಪುನಿತೇಶನನ್ನು ಎದೆ, ಹೊಟ್ಟೆ, ಬೆನ್ನು ಹೀಗೆ ಇಪ್ಪತ್ತಕ್ಕೂ ಅಧಿಕ ಬಾರಿ ಕತ್ತರಿಸಿ ಹಾಕಿತ್ತು. ನಿಂತ ನೆಲದಲ್ಲೇ ಹೆಣವಾಗಿ ಹೋದ ಪುನಿತೇಶ.

ಅಲ್ಲಿಗೆ ವಿಜಿ, ಶಂಕ್ರರ ಜೋಡಿ ಕೊಲೆಗೆ ಬದಲಾಗಿ ಮಚ್ಚನ ಗ್ಯಾಂಗ್ ರವಷ್ಟಾದರೂ ಜಿದ್ದು ತೀರಿಸಿಕೊಂಡಂತಾಗಿತ್ತು. ಮಚ್ಚನೇ ನಿಂತು ಕುರಿ ಕೃಷ್ಣನ ಹಂತಕ ಪಡೆಯನ್ನು ರಾಜಗೋಪಾಲನಗರ ಪೊಲೀಸರಿಗೆ ಸರೆಂಡರ್ ಮಾಡಿಸಿದ್ದ. ಇಷ್ಟಾಗುತ್ತಿದ್ದಂತೆ ಕಾಮಾಕ್ಷಿಪಾಳ್ಯ, ಸುಂಕದಕಟ್ಟೆ, ಲಗ್ಗೆರೆ, ಹೆಗ್ಗನಹಳ್ಳಿ, ಇತ್ಯಾದಿ ಏರಿಯಾಗಳ ಜನ ಥರಗುಟ್ಟಿ ಹೋದರು. ಮುಲಾಮು ಮತ್ತು ಮಚ್ಚನ ಗ್ಯಾಂಗುಗಳು ಹೀಗೆ ಹೊಡೆದಾಟಕ್ಕೆ ನಿಂತುಬಿಟ್ಟರೆ ಗತಿಯೇನು? ಎಷ್ಟು ಹೆಣ ಬೀಳಬಹುದು? ಎಂಬುದೇ ಪ್ರತಿಯೊಬ್ಬರ ಆತಂಕವಾಗಿತ್ತು. ವಿಚಿತ್ರವೆಂದರೆ ಪುನಿತೇಶನ ಕೊಲೆ ಕೇಸಿನಿಂದ ಕುರಿಕೃಷ್ಣ ಬಚಾವಾಗಬೇಕೆಂದರೆ ಆತನೇ ಪ್ರಮುಖ ಸಾಕ್ಷಿಯಾಗಿದ್ದ ಸುಂಕದಕಟ್ಟೆ ಜೋಡಿ ಕೊಲೆ ಕೇಸಿನಲ್ಲಿ ಆತ ರಾಮ, ಲಕ್ಷ್ಮಣರನ್ನು ಬಚಾವು ಮಾಡಲೇಬೇಕಿತ್ತು. ರಾಮ-ಲಕ್ಷ್ಮಣರ ಪರವಾಗಿ ಮಾಳಗಾಲದ ಸಿಎಂಸಿ ಕೌನ್ಸಿಲರ್ ಉಗ್ರನರಸಿಂಹನೂ, ಕುರಿಕೃಷ್ಣನ ಪರ ವಹಿಸಿ ಪಟ್ಟಣಗೆರೆಯ ಮತ್ತೊಬ್ಬ ಸಿಎಂಸಿ ಕೌನ್ಸಿಲರ್ ತಿಮ್ಮಪ್ಪನೂ ರಾಜಿಗೆ ಮುತುವರ್ಜಿ ವಹಿಸಿದ್ದರೆ ಅದು ಅಂತಿಮವಾಗಿ ಕಾಮಾಕ್ಷಿಪಾಳ್ಯದ ಮಾಜಿ ಕೌನ್ಸಿಲರ್ ಗೋಪಾಲಯ್ಯನ ಮರ್ಜಿಯೊಳಕ್ಕೇ ಬಂದು ನಿಂತುಬಿಟ್ಟಿತ್ತು.



ಕೊಲೆಯಾದ ಪುನಿತೇಶ

ಏಕೆಂದರೆ ಪರಸ್ಪರ ಎದುರಾಳಿ ತಂಡಗಳೆರಡರ ಪರ ವಹಿಸಿದ ಇಬ್ಬರೂ ಕೌನ್ಸಿಲರ್‌ಗಳು ಜೆಡಿಎಸ್‌ನ ಸಕ್ರಿಯ ಕಾರ್ಯಕರ್ತರೆ. ಎರಡೂ ತಂಡಗಳನ್ನು ಈ ಮೂಲಕ ರಾಜಿ ಮಾಡಿಸಿಬಿಟ್ಟರೆ ಮುಂದೆ ಮಚ್ಚ ತನ್ನ ವಿರುದ್ಧ ಮೆದುವಾಗಿಬಿಡಬಹುದೆಂಬ ಲೆಕ್ಕಾಚಾರ ಗೋಪಾಲಯ್ಯನದಾದರೆ, ಮುಲಾಮು ಬೇರೆಯದೇ ಸ್ಕೆಚ್ ಹಾಕಿದ್ದ. ಆತನ ಗುರಿ ಮಚ್ಚನ ದೋಸ್ತಿಯಾಗಿರಲಿಲ್ಲ, ಬದಲಾಗಿ ತನ್ನ ಶಿಷ್ಯರಾದ ರಾಮ-ಲಕ್ಷ್ಮಣರನ್ನು ಕೊಲೆ ಕೇಸಿನಿಂದ ಮುಕ್ತಗೊಳಿಸಿ ಮುಂದೆ ಅವರನ್ನು ಛೂ ಬಿಟ್ಟೇ ಮಚ್ಚನನ್ನು ತೆಗೆದುಬಿಡುವುದು!

ಹುಂಬ ಮಚ್ಚನಿಗಿದು ಅರ್ಥವಾಗಲಿಲ್ಲ. ಸದರಿ ರಾಜಿಯಿಂದಾಗಿ ಮುಲಾಮು ತನ್ನ ವಿರುದ್ಧ ಮೆದುವಾಗಿದ್ದಾನೆಂದೇ ಲೆಕ್ಕಹಾಕಿದ. ಅಪಾಯವೇನಿದ್ದರೂ ಗೋಪಾಲಯ್ಯನ ಕಡೆಯಿಂದ ಮಾತ್ರವೆಂದು ಮುಲಾಮುನನ್ನು ನಿರ್ಲಕ್ಷಿಸಿಬಿಟ್ಟ. ಬದ್ಧವೈರಿಗಳಾಗಿದ್ದ ಮುಲಾಮು ಮತ್ತು ಜೇಕೆ ಮತ್ತೆ ಒಂದಾಗಿದ್ದರ ದೂರಗಾಮಿ ಪರಿಣಾಮವೇನೆಂಬುದನ್ನು ಊಹಿಸಲೇ ಇಲ್ಲ. ಅದೇ ಹೊತ್ತಿಗೆ ಮಚ್ಚ ಮಾಡಿದ ಮತ್ತೊಂದು ಯಡವಟ್ಟೆಂದರೆ ಮಾಗಡಿ ಶಾಸಕ ಬಾಲಕೃಷ್ಣರನ್ನು ಕೈಬಿಟ್ಟು ಡೀಕೆ ಪಾಳಯಕ್ಕೆ ನೆಗೆದದ್ದು.


ಮಚ್ಚನ ಈ ನಿರ್ಧಾರಕ್ಕಿದ್ದ ಅತೀದೊಡ್ಡ ಕಾರಣವೆಂದರೆ ಮುಂದಿನ ಕಾರ್ಪೊರೇಷನ್ ಚುನಾವಣೆಯಲ್ಲಿ ವೃಷಭಾವತಿನಗರ ವಾರ್ಡಿಗೆ ಕಾಂಗ್ರೆಸ್ ಅಭ್ಯರ್ಥಿಯಾಗುವುದು ಮತ್ತು ಗೋಪಾಲಯ್ಯನನ್ನು ಸೋಲಿಸಿ ತಾನು ಕೌನ್ಸಿಲರ್ ಆಗುವುದು!

ಇತ್ತ ಇಡೀ ಕಾಮಾಕ್ಷಿಪಾಳ್ಯದ ತುಂಬ ಮಚ್ಚ ಮತ್ತು ಕಾಂಗ್ರೆಸ್ ನಾಯಕ ಡೀಕೆ ಕಟೌಟುಗಳು ನೇತಾಡುತ್ತಿದ್ದರೆ ಅತ್ತ ಮುಲಾಮು ಒಳಗೊಳಗೇ ಕತ್ತಿ ಮಸೆಯಲಾರಂಭಿಸಿದ್ದ. ಕಾಮಾಕ್ಷಿಪಾಳ್ಯದ ಗಲ್ಲಿಗಲ್ಲಿಯಲ್ಲೂ ಮಚ್ಚನ ಪಡ್ಡೆ ಗ್ಯಾಂಗುಗಳು ತಲೆ ಎತ್ತಿ ನಿಂತವು. ಮಚ್ಚನ ಆರ್ಭಟವೇ ಹಾಗಿತ್ತು, ಏರಿಯಾದಲ್ಲಿ ಸಣ್ಣ ರಾಜ್ಯೋತ್ಸವಕ್ಕೂ ತಾನೇ ಮುಖ್ಯ ಅತಿಥಿಯಾಗಿ ವೇದಿಕೆಯನ್ನಲಂಕರಿಸುವ ಖಯಾಲಿಗೆ ಬಿದ್ದ.


ಇಡೀ ಕಾಮಾಕ್ಷಿಪಾಳ್ಯದ ಸಾರ್ವಜನಿಕ ಸಮಾರಂಭಗಳ ಪೈಕಿ ಊರಿನ ಜನರೆಲ್ಲರ ಬೆಂಬಲವಿರುವುದು ಅಂಬಾ ಮಹೇಶ್ವರಿ ಕನ್ನಡ ಯುವಕರ ಸಂಘದ ಅಧ್ಯಕ್ಷ ಕೆ. ನಟರಾಜ್ ನೇತೃತ್ವದಲ್ಲಿ ನಡೆಯುವ ಅಂಬಾ ಮಹೇಶ್ವರಿ ಉತ್ಸವ ಮತ್ತು ಕನ್ನಡ ರಾಜ್ಯೋತ್ಸವಕ್ಕೆ.

ಪ್ರತಿ ವರ್ಷ ಊರಹಬ್ಬದಂತೆ ನಡೆಯುವ ಈ ಕಾರ್ಯಕ್ರಮದ ರೂವಾರಿ ಹಿರಿಯ ಕಾಂಗ್ರೆಸ್ ಮುಖಂಡ ಕಾಳೇಗೌಡರು. 1995ರ ಕಾರ್ಪೊರೇಷನ್ ಚುನಾವಣೆಯಲ್ಲಿ ಬಿಜೆಪಿಯ ಕೆ. ರಂಗಣ್ಣನ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಕಾಳೇಗೌಡರು ಕೆಲವೇ ಮತಗಳ ಅಂತರದಲ್ಲಿ ಸೋತರಾದರೂ ಅವರ ಮಗ ಕೆ. ನಟರಾಜ್ ಮಾತ್ರ ಪಟ್ಟು ಬಿಡಲಿಲ್ಲ. ಒಂದಲ್ಲಾ ಒಂದು ದಿನ ತಾನು ಕಾಮಾಕ್ಷಿಪಾಳ್ಯದ ಕೌನ್ಸಿಲರ್ ಆಗಿಯೇ ತೀರುತ್ತೇನೆಂದು ರಂಗಣ್ಣನ ವಿರುದ್ಧ ಜಿದ್ದಾಜಿದ್ದಿಗೆ ನಿಂತ ನಟರಾಜ್ ಸದ್ಯ ಕಾಮಾಕ್ಷಿಪಾಳ್ಯದ ಜನಪ್ರಿಯ ಯುವ ನಾಯಕ. 2005ರ ಫೆಬ್ರವರಿ 11 ರಿಂದ 13ರ ತನಕ ನಟರಾಜ್ ನೇತೃತ್ವದಲ್ಲಿಯೇ ಊರಹಬ್ಬದ ಸಿದ್ಧತೆಗಳಾಗಿದ್ದವು. ಮೊದಲ ದಿನ ಗೋಪಾಲಯ್ಯ ಮುಖ್ಯ ಅತಿಥಿಯಾದರೆ, ಎರಡನೇ ದಿನ ಮಚ್ಚನೇ ಛೀಫ್‌ಗೆಸ್ಟ್. ಆಹ್ವಾನ ಪತ್ರಿಕೆಗಳೂ ಅಚ್ಚಾಗಿದ್ದವು. ಭರ್ಜರಿ ಆರ್ಕೆಸ್ಟ್ರಾಗಳೇ ಬುಕ್ಕಾಗಿದ್ದವು.

ಹಾಗೆ ನೋಡಿದರೆ ಮೊದಲ ದಿನ ಕಾರ್ಯಕ್ರಮಕ್ಕೆ ಬಂದ ಗೋಪಾಲಯ್ಯನ ಜೊತೆ ರೌಡಿಗಳ ಹಿಂಡೇ ಇರಬೇಕಿತ್ತು. ಕನಿಷ್ಠ ಮಚ್ಚನ ಭಯಕ್ಕಾದರೂ ಗೋಪಾಲಯ್ಯ ತನ್ನ ರಕ್ಷಣೆಗೆ ಹಿಂಡುಗಟ್ಟಲೇ ರೌಡಿಗಳನ್ನು ಕರೆತರಬಹುದೆಂಬ ಲೆಕ್ಕಾಚಾರ ಜನಕ್ಕಿತ್ತು. ಆದರೆ ಗೋಪಾಲಯ್ಯ ತನ್ನ ಜೊತೆ ಒಂದಿಬ್ಬರು ಊರ ಹಿರಿಯರ ಹೊರತಾ[…] ಬೇರೆ ಯಾರನ್ನೂ ಕರೆತರಲೇ ಇಲ್ಲ!



ಮುಲಾಮು



ಕೋತಿ ರಾಮ



[illegible] ಜಾನಿ

ತನ್ನ ಮೇಲೆ ಪ್ರತೀಕಾರ ನಡೆದೀತೆಂಬ ಸಣ್ಣದೊಂದು ಅಳಕೂ ಇಲ್ಲದೆ ಹರಟುತ್ತಿದ್ದ ಪುನಿತೇಶ ಸಲೀಸಾಗಿ ಕುರಿಯ ಬ[…]ಯಲ್ಲಿ ಸಿಕ್ಕಿಬಿದ್ದಿದ್ದ. ತನ್ನನ್ನು ಸುತ್ತು[…]ವರಿದ ಕುರಿಯ ಹಿಂಡನ್ನು ಕಂಡಿದ್ದೇ ಅಲ್ಲಿಂದ ಓಡತೊಡಗಿದ ಪುನಿತೇಶ ಎರಡೂ ಕೈ ಸಿಗಿದು ಹಾಕಿ[…] ಕುರಿಯನ ಗ್ಯಾಂಗ್ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲದ ಅಸಹಾಯಕ ಸ್ಥಿತಿಯಲ್ಲಿದ್ದ ಪುನಿತೇಶನನ್ನು ಕತ್ತರಿಸಿ ಹಾಕಿತ್ತು. ನಿಂತ ನೆಲದಲ್ಲೇ ಹೆಣವಾಗಿ ಹೋದ ಪುನಿತೇಶ.....

ಆ ಮೂಲಕ ತಾನು ರೌಡಿಯಲ್ಲ, ರಾಜಕಾ[…] ಎಂಬ ಸುಪ್ತ ಸಂದೇಶವೊಂದನ್ನು ಕೊಡುವುದು […] ಗೋಪಾಲಯ್ಯನ ಉದ್ದೇಶವಾಗಿತ್ತೆ?

ಇದು ಮಚ್ಚನಿಗೆ ಅರ್ಥವಾಗಲೇ ಇ[…] ಮರುದಿನ ತಾನೇ ಮುಖ್ಯ ಅತಿಥಿಯಾಗಿದ್ದನಲ್ಲ; ಆರ್ಕೆಸ್ಟ್ರಾ ಬೇರೆ ಇತ್ತು[…] ಆವತ್ತು ಮಚ್ಚ ಎಂಥಾ ಪೋ[…] ಕೊಟ್ಟನೆಂದರೆ ಆತ ವೇದಿಕೆಯತ್ತ ನಡೆದು[…] ಬರುತ್ತಿದ್ದರೆ, ಆತನ ಸುತ್ತ ಕಮ್ಮಿಯೆಂದರು[…] ನೂರೈವತ್ತು ಮಂದಿ ಪಡ್ಡೆ ಹುಡುಗರ [...]ದಂಡಿತ್ತು!

ಮಚ್ಚನ ಬಲಗೈ ಬಂಟ ಕೋತಿ[…] ಕಾಮಾಕ್ಷಿಪಾಳ್ಯದ ಜಾನಿ, ಕಿಲಾಡಿ ಪಂಟ[…] ಕೋಳಿ ಶಿವಾ, ಹಳೇ ಫೈಟರ್ ಬೂನು, ಮತ್ತು[…] ರೌಡಿ ಕಲಗಚ್ಚು ಸೀನ, ಕೇಸಿ ಸೂರಿ, ಯದು[…] ಬಲರಾಮ- ಹೀಗೆ ಗೋಪಾಲಯ್ಯನ ವಿರು[…]ಸೆದ್ದು ಹೊಡೆದಿದ್ದ ಅಷ್ಟೂ ಮಂದಿ ಪಂಟರ್‌ಗ[…] ಆವತ್ತು ಮಚ್ಚನನ್ನು ಮೆರವಣಿಗೆಯಲ್ಲಿ ತಂ[…] ವೇದಿಕೆ ಹತ್ತಿಸಿಬಿಟ್ಟರು. ಅಂಬಾಮಹೇಶ್ವರಿ ಕ[…] ಯುವಕರ ಸಂಘದ ನಾಯಕ ಕೆ. ನಟರಾ[…] ಹಿಂದಿನ ದಿನ ಗೋಪಾಲಯ್ಯಗೆ ಸನ್ಮಾನಿಸಿದ[…] ಮಚ್ಚನನ್ನೂ ಅದ್ದೂರಿಯಾಗೇ ಸನ್ಮಾನಿಸಿದ್ದ. ಸ[…] ಸಾವಿರಾರು ಜನರ ಎದುರು ಮಚ್ಚ ಚಕ್ಕದೊಂ[…] ಭಾಷಣವನ್ನೂ ಬಗಿದುಬಿಟ್ಟ. ಅಲ್ಲಿಗೆ ಮ[…] ರೌಡಿಜಮ್ಮಿನಿಂದ ಬದಿಗೆ ಸರಿದು ರಾಜಕೀಯ[…] ಕಾಲಿಕ್ಕಿದ್ದಾನೆಂಬುದು ಪೊಲೀಸರಿಗೆ [...]ಯಾಯಿತಾದರೂ, ಗೋಪಾಲಯ್ಯ ಆತ[…]ಗೊಂಡಿದ್ದು ನಿಜವೇ ಆದರೂ ಒಬ್ಬ ಮ[…] ತನ್ನ ಲೆಕ್ಕಾಚಾರಗಳೆಲ್ಲ ಕರಾರುವಾಕ್ಕಾಗಿ[…] ಸಂಭವಿಸುತ್ತಿವೆಯೆಂದು ಒಳಗೊಳಗೇ ಖು[…] ಪಡುತ್ತಿದ್ದ.

ಏಕೆಂದರೆ ಮಚ್ಚ ರಾಜಕಾರಣಿಯ ಗೆಟ[…] ಬಂದರೆ ಮಾತ್ರವೇ ತನ್ನ ಕೆಲಸ ಸಲೀಸು ಎಂ[…] ಆತ ಲೆಕ್ಕ ಹಾಕಿದ್ದ.

ಆತನೇ ಚಾಣಾಕ್ಷ ಸ್ಕೆಚ್ ಮಾಸ್ಟರ್ ಮುಲಾಮು!

(ಮುಂದಿನ ವಾ[…]



ಕುರಿಯ ಗ್ಯಾಂಗ್ ಪುನಿತೇಶನನ್ನು ಕತ್ತರಿಸಿಹಾಕಿದ ಜಾಗ


ಕೋಳಿವಾಡದ 'ತೋಳ' ಕತೆ

ಹಾವೇರಿ

ಮುಖ್ಯಮಂತ್ರಿ ಕುಮಾರಸ್ವಾಮಿಯ ನೈಟ್ ಹಾಲ್ಟ್ ಕಾರ್ಯಕ್ರಮಕ್ಕೆ ಕೆಟ್ಟ ಕನಸೊಂದು ಎದುರಾಗಿತ್ತು. ದಿಕ್ಕುದಿಸೆ ಇಲ್ಲದೆ ಪಸಂದಾಗಿ ಊರೂರು ಅಲೆಯುತ್ತಾ, ಅಪರಿಚಿತರ ಮನೆಯಲ್ಲಿ ಮಲಗುತ್ತಾ ಸಾಗಿರುವ ಕುಮಾರಸ್ವಾಮಿಯ ಗ್ರಾಮ ವಾಸ್ತವ್ಯ ಎಂಬ ಹಾಸ್ಯಾಸ್ಪದ ಕಾರ್ಯಕ್ರಮಕ್ಕೆ ಅವರ ಫ್ಯಾಮಿಲಿಯ ಕಡುವೈರಿ ಸಿದ್ದರಾಮಯ್ಯನವರು ಮ್ಯಾಚಿಗೆ ಬಿದ್ದಂತೆ "ನಾನೂ ಅದೇ ಊರುಗಳಲ್ಲಿ ಮಲಗುತ್ತೇನೆ" ಎಂದರಂತೆ ಎಂಬ ಸುದ್ದಿ ಹರಡಿ ಇಲ್ಲೊಂದು ವಿಶ್ವ ಕಪ್ ಪಂದ್ಯವೇ ಶುರುವಾಗುತ್ತದೇನೋ ಎಂಬಂಥ ವಾತಾವರಣ ಸೃಷ್ಟಿಯಾಗಿತ್ತು.

ಆದರೆ ಟಾಸ್ ಕೂಡ ನಡೆಯದೆ ಮ್ಯಾಚ್ ಭರ್ಕಾಸ್ತಾಯಿತು.

ಅದೆಲ್ಲ ಆದದ್ದು ಹೀಗೆ:-



ಕಳೆದ ತಿಂಗಳು 28ಕ್ಕೆ ಗದಗ ಜಿಲ್ಲೆಯ ಸುಗ್ನಳ್ಳಿಯಲ್ಲಿ ಮಲಗೆದ್ದು ಹೋಗಿದ್ದ ಕುಮಾರಸ್ವಾಮಿ ಹದಿನೈದು ದಿನಗಳ ನಂತರ ಹಾವೇರಿ ಜಿಲ್ಲೆಯಲ್ಲಿ ಹಾಲ್ಟ್ ಮಾಡಲು ಬರುತ್ತಾರೆ ಎಂದಾಗ ಇಲ್ಲಿಯ ಜನ ಮುಸಿಮುಸಿ ನಗಲಾರಂಭಿಸಿದರು. "ಕುಮಾರನಿಗೇನು ಇಲ್ಲಿ ಊಟ್ಯಾ, ನಿದ್ದಿ ಸವಿ ಹತ್ತೇತೆನು ರಾಜ್ಯದಲ್ಲಿ ಇಷ್ಟೊರದು ಜಿಲ್ಲೆಗಳಿದ್ದರೂ ಅವನೆಲ್ಲ ಬಟ್ಟು ಮತ್ತೆ ನಮ್ ಪ್ರದೇಶಕ್ಕೇ ಬರಾಕತ್ತಾರಲ್ಲಾ?" ಎಂದು ಗೇಲಿ ಮಾಡಿದರು.

ಇದೇ ಹೊತ್ತಿಗೆ ಜನರಲ್ಲಿ ಅಚ್ಚರಿ ಮೂಡಿಸುವಂತಹ ಮತ್ತೊಂದು ಸುದ್ದಿಯನ್ನು ಮಾಜಿ ಮಂತ್ರಿ ಕೆ. ಬಿ. ಕೋಳಿವಾಡ ರಿಲೀಜು ಮಾಡಿದ. "ಕುಮಾರಸ್ವಾಮಿ ಮಲಗುವ ದಿನಾನೇ ಅದೇ ಗ್ರಾಮದಲ್ಲಿ ನಮ್ಮ ಲೀಡರ್ ಸಿದ್ದರಾಮಯ್ಯನವರು ಮಲಗುತಾರೆ" ಎಂದು ಕೋಳಿವಾಡ ಹೇಳಿದಾಗ ಅಚ್ಚರಿ ಇರಲಿ, ಪೊಲೀಸರ ತಳಕ್ಕೂ ಬಿಸಿ ನೀರು ಹಾಯಿಸಿದಂತಾಯಿತು. ಹೇಳಾಕ ಹೆಸರಿಲ್ಲದೆ ಫ್ಲಾಪ್ ಆಗಿರುವ ಕೋಳಿವಾಡ ತೋಳ ಬಂತು ತೋಳದ ಕಥೆ ಹೇಳಿದನೋ ಅಥವಾ ನಿಜವಾಗಿಯೂ ಸಿದ್ದು ಮಲಗಾಕೆ ಬರತೇನಿ ಅಂದಿದ್ರೊ ಕೊನೆಗೂ ತಿಳಿಯಲಿಲ್ಲ. ಆದರೆ ಹೊಸಾ ಇಶ್ಯೂ ತೆಗೆದು ಕೋಳಿವಾಡನಂತೂ ಮನೆಬಾಗಿಲಲ್ಲಿ ಜನರನ್ನು, ಪೊಲೀಸರನ್ನು ಗುಡ್ಡೆ ಹಾಕೊಂಡು ಎರಡು ದಿನಾ ಸಖತ್ ಪ್ರಚಾರ ಗಿಟ್ಟಿಸಿಕೊಂಡ.

"ಸಿದ್ದರಾಮಯ್ಯ ನಾನು ಅದೇ ಗ್ರಾಮದಲ್ಲಿ ಮಲಗತೇನಿ, ಜನತಾ ದರ್ಶನ ಮಾಡತೇನಿ ಎಂದಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರು ಪ್ರಾಮ್ಟಾಗಿ ಕೆಲಸ ಮಾಡಿ. ಜೆ.ಡಿ.ಎಸ್. ನವರು ಸರಕಾರ ಇಟ್ಟುಕೊಂಡು ಏನ್ ಮಾಡತಾರೆ ನೋಡೋಣ. ಸಿದ್ದರಾಮಯ್ಯ ಚಳಗೇರಿಗೆ ಬಂದೇ ಬರ್‍ತಾರೆ" ಎಂದು ಕೋಳಿವಾಡ ಹೇಳಿ ಇದ್ದ ಬದ್ದವರಿಗೆ ತ್ರಾಸ ಕೊಟ್ಟದ್ದೇ ಬಂತು.



ಚಳಗೇರಿ ಗ್ರಾಮದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ದಂಡು ಕಟ್ಟಿಕೊಂಡು ಸಿದ್ದು ಮಲಗೋಕೆ ದಲಿತನ ಮನೆಯೊಂದನ್ನು ಕೊನೆಗೂ ಹುಡುಕಿ, ಅಲ್ಲಿಗೆ ಹಾಸಿಗೇನೂ ತಂದಿಟ್ಟು, ಅಲ್ಲೊಂದು ಇಲ್ಲೊಂದು ಬ್ಯಾನರ್ ಕಟ್ಟಿ, ಮೀಟಿಂಗ್ ಮಾಡಿದ ಕೋಳಿವಾಡ.

ಬಾಯಿ ತುಂಬಾ ಪಾನ್ ಹಾಕಿಕೊಂಡು "ಅವನಷ್ಟೇ ಏನ್ರಿ ಮಲಗೋನು? ನಮ್ಮ ಲೀಡರಗಳೂ ಮಲಗತಾರೆ" ಎಂದು ಕೋಳಿವಾಡ ಹೇಳಿದ್ದಕ್ಕೆ ಹಾವೇರಿಯ ಮಾಜಿ ಮಂತ್ರಿ ಶಿವಣ್ಣನವರ, ಮಾಜಿ ಎಂ.ಪಿ. ಸನದಿ, ಹಾನಗಲ್‌ನ ಮನೋಹರ ತಹಶೀಲ್ದಾರ್ ಎಲ್ಲರೂ ತಮ್ಮ ಗೋಣು ಹೊರಳಾಡಿಸಿದರು. ಇದನ್ನು ಕಂಡು ಡಿ.ಸಿ., ಎಸ್.ಪಿ.ಗಳಿಗೆ ನಿದ್ದೆನೇ ಬಾರದಂತಾಯಿತು.



ಈ ನೈಟ್ ಹಾಲ್ಟ್ ಕಾಂಪಿಟೇಶನ್‌ನಿಂದ ತಲೆಬಿಸಿ ಮಾಡಿಕೊಂಡಿದ್ದ ಡಿ.ಸಿ. ಅಮ್ಲಾನ್ ಆದಿತ್ಯ ಬಿಸ್ವಾಸ್ "ನೋಡಿ ಸ್ವಾಮಿ, ಪರಮೀಷನ್ ಕೊಡಾಕೆ ಆಗಲ್ಲಾ, ಪ್ಲೀಜ್ ಮುಂದೊಂದು ದಿನಾ ಫಿಕ್ಸ್ ಮಾಡ್ರಿ" ಎಂದು ಕೋಳಿವಾಡನ ಮುಂದೆ ವಿನಂತಿಸಿಕೊಂಡರೆ "ಅದೆಲ್ಲಾ ಆಗಲ್ಲ, ಸಿದ್ರಾಮಯ್ಯನವರು ಅದೇ ದಿನ ಅದೇ ಗ್ರಾಮದಲ್ಲಿ ಮಲಗತಾರೆ, ಭಾಷಣಾನು ಮಾಡತಾರೆ, ಜನತಾದರ್ಶನ ಮಾಡಿ ಕುಮಾರಸ್ವಾಮಿಗಿಂತಾ ಹೆಚ್ಚು ಅರ್ಜಿ ಸ್ವೀಕರಿಸುತ್ತಾರೆ. ನಿಮ್ಮ ಪರಮೀಷನ್ ಆರ್ಡರ ನಿಮ್ಮ ಹತ್ರ ಇಟ್ಟುಕೊಳ್ಳಿ" ಎಂದು ಹೇಳಿ ಅಂಗಿ ಜಾಡಿಸಿ ತನ್ನ ಪಟಾಲಂ ಕಟಕೊಂಡು ಹೋದನಂತೆ.

ಹೀಗೆ ಸುದ್ದಿ ಮಾಡುತ್ತಾ ಎರಡು ದಿನಾ ಜಾಲಿಯಾಗಿ ಓಡಾಡಿದ ಕೋಳಿವಾಡ ಶುಕ್ರವಾರ ಸಂಜೆ ವೇಳೆಗೆ "ಸಿದ್ರಾಮಯ್ಯ ಬಜೆಟ್ ಮೇಲಿನ ಚರ್ಚೆಗಾಗಿ ಟಿ.ವಿ.ಯೊಂದರ ಮುಖಾಮುಖಿ ಕಾರ್ಯಕ್ರಮದಲ್ಲಿ ಯಡಿಯೂರಪ್ಪನವರಿಗೆ ನೀರು ಇಳಸಾಕೆ ಹೋಗ್ಯಾರ, ಬರೋದು ಡೌಟು ಅನಸುತ್ತ" ಎಂದು ಹೊಸರಾಗ ಹಾಡಲಾರಂಭಿಸಿದ.

ನೈಟ್ ಟೈಂಗೆ ಸಿ.ಎಂ. ಬಂದ್ರು

ಸಿ.ಎಂ. ಬರುವ ದಿನ, ಟೈಂ ಎಲ್ಲಾ ಫಿಕ್ಸ್ ಆಗಿರುತ್ತೆ. ಆದರೆ ಎಂದೂ, ಎಲ್ಲೂ ನಿಗದಿತ ಸಮಯಕ್ಕೆ ಬಾರದ ಸಿ.ಎಂ. ಸಾಹೇಬರು ರಾಣೆ ಬೆನ್ನೂರಿನ ಚಳಗೇರಿಗೆ ಸಂಜೆ 7-30ಕ್ಕೆ ಹಾಜರಾಗಿ ಜನರಿಗೆ ಶಾಕ್ ನೀಡಿದರು. ಅಲ್ಲಿಗೆ ಸಿದ್ರಾಮಯ್ಯನವರೂ ಬರುತ್ತಾರೆಂಬ ರೂಮರ್‌ನಿಂದಾಗಿ ಕುಮಾರಸ್ವಾಮಿ ಪ್ರಥಮ ಬಾರಿಗೆ ಟೈಂ ಸೆನ್ಸ್ ತೋರಿಸಿದ್ದಿರಬಹುದು ಎಂದು ಜನ ಆಡಿಕೊಂಡರು. ಸಿದ್ದರಾಮಯ್ಯ ಇನ್ನೂ ಬೆಂಗಳೂರಲ್ಲೇ ಇದ್ದಾರೆ ಎಂದಾಗ ರಿಲ್ಯಾಕ್ಸ್ ಆದ ಕುಮಾರಸ್ವಾಮಿ ಚಳಗೇರಿ ಗ್ರಾಮದಲ್ಲಿ ಮೆರವಣಿಗೆ ಅದೂ ಇದೂ ಅಂದುಕೊಂಡು ರಾತ್ರಿ ಸ್ವಲ್ಪ ಜನರೊಂದಿಗೆ ಮಾತಾಡಿ 11-00 ಗಂಟೆಗೆ ಹಾಸಿಗೆ ಸೇರಿದರು. ಯಥಾಪ್ರಕಾರ ಬೆಳಿಗ್ಗೆ ವೃದ್ಧರು, ವಿಧವೆಯರು, ಅಂಗವಿಕಲರು, ಬೇರೆ ಜನರು- ಹೀಗೆ ಎಲ್ಲರಿಂದ ಅರ್ಜಿಗಳನ್ನು ಸ್ವೀಕರಿಸಿ, ಹತ್ತಿರ ಇದ್ದ ಅಧಿಕಾರಿಗಳಿಗೆ ಅಲ್ಪ ಸ್ವಲ್ಪ ಉಗಿದು, ತಮ್ಮ ಕಾರ್ಯಕ್ರಮವನ್ನು ಮುಗಿಸಿದರು.

ಮುಂದೆ ಹಾವೇರಿಯಲ್ಲಿ ಜರುಗಿದ ಜಿಲ್ಲಾ ಜೆ.ಡಿ.ಎಸ್. ಕಾರ್ಯಕರ್ತರ ಸಮಾವೇಶದಲ್ಲಿ "ಸಾರಾಯಿ, ಲಾಟರಿ ನಿಷೇಧ, ಗ್ರಾಮ ವಾಸ್ತವ್ಯ, ಜನತಾ ದರ್ಶನದಿಂದ ವೈಯಕ್ತಿಕವಾಗಿ ನನಗೆ ಮತ್ತು ಪಕ್ಷಕ್ಕೆ ಸಾಕಷ್ಟು ಪ್ರಾಫಿಟ್ ಆಗಿದೆ. ಅದನ್ನೇ ಓಟಾಗಿ ಪರಿವರ್ತಿಸಬೇಕು. ಎಲ್ಲರು ಓಟಾಗಿ ಕನವರ್ಟ್ ಮಾಡುವ ಕೆಲಸಕ್ಕೆ ಪ್ರಾಮಾಣಿಕವಾಗಿ ದುಡಿರಿ" ಎಂದು ಹೇಳಿ ಇನ್‌ಡೈರೆಕ್ಟ್ ಆಗಿ ಚುನಾವಣೆಯ ವಾಸನೆ ಹಚ್ಚಿದರು.

ಕೋಳಿವಾಡ ಎಂಬ ಬಾಯಿಬಡುಕನ ಮಾತನ್ನೇ ಸೀರಿಯಸ್ಸಾಗಿ ತೆಗೆದುಕೊಂಡಿದ್ದ ಹಂಗಾಮಿ ಎಸ್.ಪಿ. ಶ್ರೀಧರ ಚಳಗೇರಿ ಸೇರಿದಂತೆ ಹತ್ತಿರದ ಗ್ರಾಮಗಳ ತುಂಬಾ ಖಾಕಿಧಾರಿಗಳನ್ನು ತಂದು ಗುಡ್ಡೆ ಹಾಕಿದ್ದರು. ಇಬ್ಬರು ಕಡು ವೈರಿಗಳ ಸೇಮ್ ಡೇ-ಸೇಮ್ ಪ್ಲೇಸ್‌ನಲ್ಲಿ ಮಲಗುವ ಕಾರ್ಯಕ್ರಮದ ಸೆಕ್ಯೂರಿಟಿಗೆಂದು ಅದೆಷ್ಟು ಹಣ ಖರ್ಚಾಗಿದೆಯೋ?

ಕೊನೆಗೆ ಕೋಳಿವಾಡ ಹೇಳಿದ್ದು ತೋಳ ಬಂತು ತೋಳ ಎಂಬ ಕಥೆ ಎಂದು ಗೊತ್ತಾಯಿತು. ಆದರೆ ಕುಮಾರಸ್ವಾಮಿಯ ನಿದ್ದೆಗೆ ಭಂಗ ಬಂದಿದ್ದಂತೂ ನಿಜ. ಮುಂದೆ ಕುಮಾರಸ್ವಾಮಿ ಎಲ್ಲೆಲ್ಲಿ ಮಲಗಲು ಸಿದ್ದರಾಗುತ್ತಾರೋ ಅಲ್ಲೆಲ್ಲ ಸಿದ್ದರಾಮಯ್ಯನವರೂ ಬರುತ್ತಾರೆ ಎಂಬ ಕತೆ ಕೇಳಿ ಬರಬಹುದು. ತೋಳ ಬಂತು ತೋಳ ಇನ್ನೆಷ್ಟು ದಿನ?

-ಹುರಳಿಕುಪ್ಪಿ ವಿನಯ

'ಕೌರವ'ನ ಹೊಸ ರೂಪ

'ಕೌರವ' ಕೊನೆಗೂ ತೆರೆಕಂಡಿದೆ! ಇದೇನು ಎಷ್ಟೋ ವರ್ಷಗಳ ಹಿಂದೆ ಬಿಡುಗಡೆಯಾದ ಸಿನಿಮಾ ಅದು ಹೇಗೆ ಮತ್ತೊಮ್ಮೆ ರಿಲೀಜ್ ಎಂದು ಅಚ್ಚರಿ ಪಡಬೇಡಿ. ಈಗ ರಿಲೀಸ್ ಆಗಿರೋದು 'ಕೌರವ' ಚಿತ್ರದ ನಾಯಕ ನಟ ಕಂ ಜನತಾ ದಳದ ಶಾಸಕ ಬಿ. ಸಿ. ಪಾಟಲರ 'ಕೌರವ' ಎಂಬ ದಿನ ಪತ್ರಿಕೆ!

ಇದನ್ನು ಮುಖ್ಯಮಂತ್ರಿಯಿಂದಲೇ ರಿಲೀಜ್ ಮಾಡಿಸಬೇಕೆಂದು ನಾಲ್ಕು ತಿಂಗಳಿನಿಂದ ನಾಲ್ಕು

ಕೌರವ


ಟೆಸ್ಟ್ ಪೇಪರ್ ತೆಗೆದು ಕುಮಾರಸ್ವಾಮಿಯ ಕಾಲ್‌ಶೀಟ್‌ಗಾಗಿ ಕಾದು ಕೂತಿದ್ದರು ಪಾಟೀಲ್. ಆದರೆ ಅವರ ಡೇಟ್ ಸಿಗದ ಕಾರಣ ಇದೇ ತಿಂಗಳ 17 ರಂದು ಕೊನೆಗೂ ಮಾರ್ಕೆಟ್‌ಗೆ ಬಂದಿದೆ. 'ಕೌರವ'ಕ್ಕೆ ಬಿ.ಸಿ. ಪಾಟೀಲರ ಧರ್ಮಪತ್ನಿ ಚಿತ್ರ ನಿರ್ಮಾಪಕಿ ವನಜಾ ಪಾಟೀಲರೇ ಸಂಪಾದಕಿ.

ಅಂದಹಾಗೆ ಈ ಪತ್ರಿಕೆಯಲ್ಲಿ ಸಿನಿಮಾ ಸುದ್ದಿಗಳಿಗೆ ಪ್ರಾಶಸ್ತ್ಯವೋ, ಅಥವಾ ಜೆ.ಡಿ.ಎಸ್ ಪಕ್ಷದ ಸುದ್ದಿಗಳಿಗೆ ಫಸ್ಟ್ ಪ್ರಿಫರೆನ್ಸೋ, ಇಲ್ಲಾ ಎಲ್ಲ ಸಭೆಗಳಲ್ಲಿ ಪಾಟೀಲರ ಹೊಡೆಯುವ ಸಿನಿಮಾ ಡೈಲಾಗ್‌ಗಳೇ ನ್ಯೂಸ್ ಆಗುತ್ತೋ ಗೊತ್ತಿಲ್ಲ. ಇದೆಲ್ಲದರ ಹೊರತಾಗಿ ಹಿಂದುಳಿದ ಹಾವೇರಿ ಜಿಲ್ಲೆಯ ಸಮಸ್ಯೆಗಳನ್ನು ಎತ್ತಿ ತೋರಿಸುವ ಪ್ರಾಮಾಣಿಕ ಪ್ರಯತ್ನ 'ಕೌರವ' ಮಾಡುತ್ತದೆ ಎಂದು ಆಶಿಸುವ ಧೈರ್ಯ ಮಾಡಬಹುದೋ ಎಂಬುದೂ ಗೊತ್ತಿಲ್ಲ.

ಕಾಮ್ರೇಡ್ ಡೇವಿಡ್ ಕರ್ಕಡ: ಒಂದು ಶ್ರದ್ಧಾಂಜಲಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಉಡುಪಿಯ ಹಿರಿಯ ಕಾರ್ಯಕರ್ತ ಡೇವಿಡ್ ಕರ್ಕಡ ಮಾ. 3 ರಂದು ತಮ್ಮ 80 ರ ಹರೆಯದಲ್ಲಿ ನಿಧನರಾದರು. 1946 ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದ ಡೇವಿಡ್, ಪಕ್ಷ ವಿಭಜನೆಯಾದಾಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜೊತೆ ತಮ್ಮನ್ನು ಗುರುತಿಸಿಕೊಂಡರು. ಕೊನೆಯವರೆಗೂ ಅವರು ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಉಡುಪಿಯ ನೇಯ್ಗೆ, ಬೀಡಿ, ಹಂಚು ಮತ್ತು ಪ್ರೆಸ್ ಕಾರ್ಮಿಕರ ಸಂಘಟನೆಗಳಲ್ಲಿ ದುಡಿದರು. ಉಡುಪಿಯ ಆಸುಪಾಸಿನ ಹಳ್ಳಿಗಳ ಗೇಣಿದಾರ ರೈತರನ್ನು ಸಂಘಟಿಸಿ, ಭೂಸುಧಾರಣಾ ಶಾಸನದನ್ವಯ ಗೇಣಿದಾರ ಒಕ್ಕಲುಗಳು ತಮ್ಮ ಭೂಮಿ ಸ್ವಾಧೀನಪಡಿಸಿಕೊಳ್ಳುವ ಚಳವಳಿಯಲ್ಲೂ ಡೇವಿಡ್ ಸಕ್ರಿಯವಾಗಿ ಕೆಲಸ ಮಾಡಿದ್ದರು. ಅವರು ಗೋವಾ ವಿಮೋಚನಾ ಚಳವಳಿಯಲ್ಲೂ ಭಾಗವಹಿಸಿದ್ದರು. ಉಡುಪಿಯ ಹಳೆಯ ಪ್ರಾಟೆಸ್ಟಂಟ್ ಕ್ರೈಸ್ತ ಕುಟುಂಬವೊಂದರಲ್ಲಿ ಹುಟ್ಟಿ ಬೆಳೆದ ಡೇವಿಡ್‌ರಿಗೆ ನೇಯ್ಗೆಯ ಕಸುಬು ಗೊತ್ತಿತ್ತು, ಇಲ್ಲಿನ ಅನೇಕ ಪ್ರಾಟೆಸ್ಟಂಟ್ ಕುಟುಂಬಗಳ ಪಾರಂಪರಿಕ ಕಸುಬು ಅದು. ಡೇವಿಡ್, ಕಮ್ಯುನಿಸ್ಟ್ ಕಾರ್ಯಕರ್ತನಾಗಿದ್ದಂತೆ ಒಬ್ಬ ನಿಷ್ಠಾವಂತ ಕ್ರೈಸ್ತನೂ ಆಗಿದ್ದರು. ಅವರ ಶವಸಂಸ್ಕಾರದ ಸಂದರ್ಭದಲ್ಲಿ ಮಾತನಾಡಿದ ಅವರ ಕುಟುಂಬದ ಹಿರಿಯರೊಬ್ಬರು ಹೇಳಿದ ಪ್ರಕಾರ, ಕಮ್ಯುನಿಸ್ಟ್ ಪಕ್ಷದ ಸಭೆಗಳು ಇಲ್ಲದ ಭಾನುವಾರಗಳಂದು ಡೇವಿಡ್ ತಪ್ಪದೆ ಚರ್ಚ್‌ಗೆ ಹೋಗುತ್ತಿದ್ದರು. ಆದರೆ ಪಕ್ಷದ ಸಭೆಗಳು ಹೆಚ್ಚಾಗಿ ಭಾನುವಾರಗಳಂದೇ ಇರುತ್ತಿದ್ದವು ಎಂಬ ಮಾತನ್ನೂ ಅವರು ಸೇರಿಸಿದರು. ಡೇವಿಡ್‌ರಿಗೆ ಪಕ್ಷದ ಪ್ರಕಟಣೆಗಳ ಜೊತೆಗೆ ಬೈಬಲ್‌ನ ವಿವಿಧ ಆವೃತ್ತಿಗಳನ್ನು ಸಂಗ್ರಹಿಸುವ ಹವ್ಯಾಸವೂ ಇತ್ತು. ಈ ಸಂಗತಿಯನ್ನು ವಿಶೇಷವಾಗಿ ನೆನಪಿಸಿಕೊಳ್ಳುವುದಕ್ಕೆ ಕಾರಣವಿದೆ.

ಉಡುಪಿಯ ಪುಟ್ಟ ಪ್ರಾಟೆಸ್ಟಂಟ್ ಕ್ರೈಸ್ತ ಸಮುದಾಯಕ್ಕೆ 200 ವರ್ಷಗಳ ಇತಿಹಾಸವಿದೆ. ಇಲ್ಲಿನ ಅತ್ಯಂತ ಹಳೆಯ ಆಸ್ಪತ್ರೆಯನ್ನು ಪ್ರಾರಂಭಿಸಿದವರೇ ಪ್ರಾಟೆಸ್ಟಂಟರು; ಮೊದಲ ಶಾಲೆಗಳನ್ನು ಕಟ್ಟಿದವರೂ ಅವರೇ. ಮೊತ್ತ ಮೊದಲ ಕನ್ನಡ ಬೈಬಲ್ ಮಂಗಳೂರಿನ ಬಾಸೆಲ್ ಮಿಷನ್ ವತಿಯಿಂದ 1865ರಲ್ಲಿ ಪ್ರಕಟವಾಯಿತು. ಆ ನಂತರ ಕನ್ನಡವಲ್ಲದೆ ತುಳು, ಕೊಂಕಣಿಗಳಲ್ಲೂ ಬೈಬಲ್‌ನ ಹಲವು ಆವೃತ್ತಿಗಳು ಪ್ರಕಟಗೊಂಡಿವೆ. ಆದಾಗ್ಯೂ ಕರಾವಳಿಯಲ್ಲಿ ಈಗ ವಿಜೃಂಭಿಸುತ್ತಿರುವ ಹಿಂದೂತ್ವದ ಸಿದ್ಧಾಂತದ ಪ್ರಕಾರ ಇಲ್ಲಿನ ಕ್ರೈಸ್ತರು 'ಅನ್ಯಮತೀಯರು'. ಆದರೆ ಡೇವಿಡ್ ಅಂತಹವರು ನಮಗೆ ಹೇಗೆ 'ಅನ್ಯ'ರಾಗುತ್ತಾರೆ?



ಡೇವಿಡ್ ಕರ್ಕಡ ಓದಿದ್ದು ಕೇವಲ 7 ನೆಯ ಇಯತ್ತೆಯವರೆಗಾದರೂ, ಸ್ವಪ್ರಯತ್ನದಿಂದ ಇಂಗ್ಲಿಷ್ ಭಾಷೆಯಲ್ಲಿ ಓದಿ ಅರ್ಥ ಮಾಡಿಕೊಳ್ಳುವಷ್ಟು ಪ್ರಾವೀಣ್ಯವನ್ನು ಸಾಧಿಸಿಕೊಂಡಿದ್ದರು. ಅವರನ್ನು ನಾನು ಕಳೆದ 35 ವರ್ಷಗಳಿಂದ ಬಲ್ಲೆ, ಮೊದಲ ಭಾರಿ ನಾನು ಅವರನ್ನು ನೋಡಿದಾಗ ಹೇಗಿದ್ದರೋ, ಹಾಗೆಯೇ ಕೊನೆಯವರೆಗೂ ಇದ್ದರು. ಸರಳವಾಗಿ ಆದರೆ ನೀಟಾಗಿ ಬಟ್ಟೆ ಧರಿಸುತ್ತಿದ್ದರು. ಮಾತುಕತೆಯಲ್ಲಿ ಸಾವಧಾನಿ. ಸ್ಫುಟವಾಗಿ, ವ್ಯಾಕರಣಬದ್ಧವಾಗಿ ಮಾತಾಡುತ್ತಿದ್ದರು. ಕರಾವಳಿಯ ಪ್ರಾಟೆಸ್ಟಂಟರು ಕನ್ನಡ ಮಾತಾಡುವುದೇ ಹಾಗೆ. ಡೇವಿಡ್ ಇತರರ ಕಷ್ಟಸುಖವನ್ನು ವ್ಯವಧಾನದಿಂದ ಕೇಳಿಸಿಕೊಳ್ಳುತ್ತಿದ್ದರು; ಆದರೆ ತನ್ನ ಬಗ್ಗೆ ಏನೂ ಹೇಳಿಕೊಳ್ಳುತ್ತಿರಲಿಲ್ಲ. ಕೊನೆಗಾಲದಲ್ಲಿ ಅವರನ್ನು ಮಂಡಿನೋವು ವಿಪರೀತ ಬಾಧಿಸುತ್ತಿತ್ತು. ಆದರೂ ಅವರು ತನ್ನ ನೋವಿನ ಸುಳಿವು ಬಿಟ್ಟುಕೊಡದೆ ಪಕ್ಷದ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಈ ಕಾರ್ಯಕ್ರಮಗಳಿಗೆ ಎಂದೂ ಡೇವಿಡ್ ನಿರೀಕ್ಷಿಸಿದಷ್ಟು ಜನ ಸೇರುತ್ತಿರಲಿಲ್ಲ. ಆದರೆ ಜನ ತಮ್ಮೊಟ್ಟಿಗೆ ಇದ್ದಾರೆ ಎಂಬುದು ಅವರ ದೃಢವಾದ ನಂಬಿಕೆ. "ಎಲ್ಲಾ ಕಡೆ ಜನರ ಪ್ರತಿಭಟನೆ ಬೆಳೆದು ಬರುತ್ತಿದೆ ಕಾಮ್ರೇಡ್" ಎಂದು ಅವರು ಯಾವಾಗಲೂ ಹೇಳುತ್ತಿದ್ದರು. ಅದು ಕಾಮ್ರೇಡ್ ಕರ್ಕಡರ 'ಗುಣಪಡಿಸಲಾಗದ ಆಶಾವಾದ'. ಆದರೆ ಗುಜರಾತ್ ನರಮೇಧದ ವಿರುದ್ಧ ದೊಡ್ಡಮಟ್ಟದ ಪ್ರತಿಭಟನೆಯನ್ನು ಉಡುಪಿಯಲ್ಲಿ ಸಂಘಟಿಸಲು ತಾವು ವಿಫಲರಾದೆವು ಎಂಬ ಕೊರಗು ಅವರಿಗೆ ಸದಾ ಇತ್ತು.

ಕಮ್ಯುನಿಸ್ಟ್ ಕಾರ್ಯಕರ್ತರ ಬಗ್ಗೆ ಅನೇಕ ರಮ್ಯ ನಿರೂಪಣೆಗಳಿವೆ. ಆದರೆ ವಾಸ್ತವವಾಗಿ ಅವರ ನಿತ್ಯದ ಬದುಕಿನಲ್ಲಿ ರಮ್ಯತೆಗೆ ಎಡೆಯೇ ಇಲ್ಲ. ಪಕ್ಷಕ್ಕೆ ದೇಣಿಗೆ ಸಂಗ್ರಹಿಸುವುದು, (ಯಾರೂ ಇಷ್ಟಪಡದ ಕೆಲಸ ಅದು!) ಕರಪತ್ರ ಹಂಚುವುದು, ಸಭೆ ಮೆರವಣಿಗೆಗಳಿಗೆ ಮೈಕ್ ಪರ್ಮಿಷನ್ ಮಾಡಿಸುವುದು, ತಮ್ಮ ಬಳಿ ಬಂದವರ ರೇಶನ್ ಕಾರ್ಡು, ಪಿಎಫ್ ಪಾವತಿ ಮುಂತಾದ್ದಕ್ಕೆ ಅರ್ಜಿ ಬರೆಯುವುದು, ಅವನ್ನು ಹಿಡಿದುಕೊಂಡು ಕಚೇರಿಗಳಲ್ಲಿ ಅಲೆದಾಡುವುದು-ಪಕ್ಷದ ಸಾಮಾನ್ಯ ಕಾರ್ಯಕರ್ತನದ್ದು ಇಂತಹ ನೀರಸ ದಿನಚರಿ. ಈ ಕಾರ್ಯಕರ್ತರಿಗೂ ಒಂದು ಸ್ವಂತದ ಬದುಕಿದೆ ಎಂಬ ಕಲ್ಪನೆ ಇತರರಿಗೆ ಇರುವುದಿಲ್ಲ; ಎಷ್ಟೋ ವೇಳೆ ಈ ಕಾರ್ಯಕರ್ತರಿಗೂ ಇರುವುದಿಲ್ಲ. ಡೇವಿಡ್ ಕೂಡ ಇದ್ದದ್ದು ಹಾಗೆಯೇ. ಅವರಿಗೆ ಮಕ್ಕಳಿರಲಿಲ್ಲ. ಅವರ ಏಕಮಾತ್ರ ಪುತ್ರಿ ಬಹಳ ಎಳೆಯ ಪ್ರಾಯದಲ್ಲೇ ತೀರಿಕೊಂಡಿದ್ದಳಂತೆ. ನನಗೆ ಈ ವಿಷಯ ತಿಳಿದದ್ದು ಅವರ ಮರಣ ನಂತರವೇ!

ಉಡುಪಿಯಲ್ಲಿ ಈಗ ಅಕ್ಷರ, ಆರೋಗ್ಯ, ಧರ್ಮ, ಸಂಸ್ಕೃತಿ-ಏನನ್ನಾದರೂ ಪ್ಯಾಕ್ ಮಾಡಿ ಮಾರುವ ಚಾಲೂಗಳೇ ದೊಡ್ಡ ಮನುಷ್ಯರು. ಇಲ್ಲಿನ ಸಾಂಪ್ರದಾಯಿಕ ಉದ್ಯಮಗಳಾದ ಬೀಡಿ, ಹಂಚು, ನೇಯ್ಗೆ, ಪ್ರಿಂಟಿಂಗ್ ಪ್ರೆಸ್ ಮುಂತಾದವು ಈಗ ಅವನತಿಯ ಅಂಚಿನಲ್ಲಿವೆ. ಡೇವಿಡ್ ಈ ಉದ್ಯಮಗಳ ಕಾರ್ಮಿಕರ ನ್ಯಾಯಕ್ಕಾಗಿ ತಮ್ಮನ್ನು ತೊಡಗಿಸಿಕೊಂಡವರು; ಜೊತೆಗೆ ಕೋಮುವಾದದ ವಿರುದ್ಧ ದನಿ ಎತ್ತಿದವರು. ಬದುಕಿದ್ದಾಗ ಡೇವಿಡ್ ಕರ್ಕಡ ಸಾಮಾನ್ಯರಲ್ಲಿ ಸಾಮಾನ್ಯನಂತೆ ಇದ್ದರು. ಆದರೆ ಈಗ ಅವರು ಈ ಊರಿನ ಅಳಿದುಳಿದ ಮರ್ಯಾದೆ ಮತ್ತು ಘಟನೆಗಳ ಪ್ರತೀಕದಂತೆ ಕಾಣುತ್ತಾರೆ. ಇಂತಹವರನ್ನು ಕುರಿತೇ ವಾಲ್ಟರ್ ಬೆಂಜಮಿನ್ ಹೇಳಿದ್ದು- "ಸಾವು ಬದುಕನ್ನು ದಂತಕತೆಯ ಮಟ್ಟಕ್ಕೆ ಏರಿಸುತ್ತದೆ"

-ಜಿ.ರಾಜಶೇಖರ

ಹುಬ್ಬಳ್ಳಿ

ಸಿದ್ಧಾರೂಢ ಮಠಕ್ಕೆ ಗಂಟುಬಿದ್ದ ಹೆಗಡೆ ಎಂಬ ಹೆಗ್ಗಣ

ಎಂಥ ದುರಂತ ನೋಡಿ. ಶಿಕ್ಷಣ, ಕಾಯಕ ತತ್ವ, ಅಧ್ಯಾತ್ಮಗಳ ಕೇಂದ್ರಗಳಾಗಿ ಸಮಾಜದ ಸ್ವಾಸ್ಥ್ಯಕ್ಕಾಗಿ ಶ್ರಮಿಸಬೇಕಿದ್ದ ರಾಜ್ಯದ ಮಠಮಾನ್ಯಗಳು ಅವ್ಯವಸ್ಥೆಗಳ ಆಗರವಾಗಿ, ಮೇಯುವ ಹೆಗ್ಗಣಗಳಿಗೆ ಕಣಜಗಳಾಗಿ ಪರಿವರ್ತನೆಯಾಗುತ್ತಿವೆ. ರಾಜ್ಯದ ಹಲವಾರು ಮಠ-ಮಾನ್ಯಗಳು, ದೇವಸ್ಥಾನಗಳು ಇಂತಹ ದುರಂತದ ಹಾದಿಯನ್ನು ಈಗಾಗಲೇ ಹಿಡಿದಿದ್ದು ಈಗ ಹುಬ್ಬಳ್ಳಿಯ ಸಿದ್ಧಾರೂಢ ಮಠದ ಸರದಿ. ಇಲ್ಲಿ ವಕ್ಕರಿಸಿಕೊಂಡಿರುವ ಹಲವು ಹೆಗ್ಗಣಗಳಿಗೆ ಬಿ.ಡಿ. ಹೆಗಡೆ ಎಂಬ ಹೆಗ್ಗಣವೇ ಸಾರಥಿ.

ಹುಬ್ಬಳ್ಳಿಯಲ್ಲಿರುವ ಅನೇಕ ಮಠ ಮಾನ್ಯಗಳಲ್ಲಿ ಶ್ರೀ ಸಿದ್ಧಾರೂಢ ಮಠವು ಪ್ರಮುಖವೂ, ಪ್ರಭಾವ ಶಾಲಿಯೂ ಆಗಿದ್ದು ಇದಕ್ಕೆ ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ, ನೆರೆಯ ಮಹಾರಾಷ್ಟ್ರ, ಗೋವ ಮತ್ತು ಆಂಧ್ರಪ್ರದೇಶಗಳಲ್ಲಿಯೂ ದೊಡ್ಡ ಭಕ್ತ ಸಮೂಹವಿದೆ. ಇದು ಬಹುತೇಕ ಎಲ್ಲ ಲಿಂಗಾಯತ ಮಠಗಳಂತೆ ಅನ್ನದಾಸೋಹಕ್ಕೆ ಪ್ರಸಿದ್ಧಿಯಾಗಿದೆ. ಕನ್ನಡದ ವರನಟ ದಿವಂಗತ ಡಾ. ರಾಜ್‌ಕುಮಾರ್‌ರವರಿಗೂ ಕೂಡ ಇದು ಅಚ್ಚುಮೆಚ್ಚಿನ ಮಠಗಳಲ್ಲೊಂದಾಗಿತ್ತು. ಇವತ್ತು ಅವರು ಬದುಕಿದ್ದರೆ ಸಿದ್ಧಾರೂಢ ಮಠದ ದುರವಸ್ಥೆ ಅವ್ಯವಹಾರಗಳನ್ನು ನೋಡುವ ದೌರ್ಭಾಗ್ಯ ಬಂದೊದಗಿರುತ್ತಿತ್ತು.

ಲಕ್ಷಾಂತರ ಭಕ್ತ ಸಮೂಹವನ್ನು ಹೊಂದಿರುವ ಈ ಮಠವು ಅಂಧರ ಶಾಲೆಯನ್ನೂ, ಸಂಸ್ಕೃತ ವಿದ್ಯಾಪೀಠವನ್ನೂ ನಡೆಸುತ್ತಿದೆ. ಈ ಮಠದಲ್ಲಿ ಸುಮಾರು 60 ಸಾಧುಗಳು ಸೇವೆ ಸಲ್ಲಿಸುತ್ತಿದ್ದಾರೆ. ಮಠಕ್ಕೆ ಸಾಕಷ್ಟು ಆಸ್ತಿ-ಪಾಸ್ತಿ ಇದೆ. ಅನ್ನ ದಾಸೋಹಕ್ಕಾಗಿ ಪ್ರತಿ ತಿಂಗಳು ಸುಮಾರು 500 ಚೀಲ ಅಕ್ಕಿ, ಸಾಕಷ್ಟು ಪ್ರಮಾಣದಲ್ಲಿ ದವಸ ಧಾನ್ಯಗಳು,



ಮೆಣಸಿನಕಾಯಿ ಬಂದು ಬೀಳುತ್ತದೆ. ಮಠದ ಹುಂಡಿಯಲ್ಲಿ ತಿಂಗಳಿಗೆ ಬೀಳುವ ಲಕ್ಷಾಂತರ ರೂಪಾಯಿಗಳಷ್ಟಿರುತ್ತದೆ. ಜಾತ್ಯತೀತತೆ-ಧರ್ಮ ನಿರಪೇಕ್ಷತೆಗಳ ಆಧಾರದಲ್ಲಿ ಬೆಳೆದ ಈ ಮಠಕ್ಕೆ ಜಾತಿ-ಮತಗಳ ಗಡಿಗಳಿಲ್ಲದೇ ಅಪಾರ ಸಂಖ್ಯೆಯ ಭಕ್ತರಿದ್ದು ಅಂತೆಯೇ ಅಪಾರ ಆದಾಯವೂ ಇದೆ.



ಬಿ.ಬಸವಣ್ಣ

ಈ ಮಠದ ಆಡಳಿತವನ್ನು ಸುಗಮವಾಗಿ ನಡೆಸಿಕೊಂಡು ಹೋಗುವುದಕ್ಕಾಗಿ ಒಂದು ಟ್ರಸ್ಟ್ ಕೂಡ ಇದೆ. ಈ ಟ್ರಸ್ಟ್‌ಗೆ ಸದಸ್ಯರನ್ನು ನೇಮಕ ಮಾಡುವ ಅಧಿಕಾರ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಿಗೆ ಇದೆ. ಮಠದ ತತ್ವಾದರ್ಶಗಳಲ್ಲಿ ನಂಬಿಕೆ ಇಟ್ಟು, ಮಠದ-ಸಮಾಜದ ಶ್ರೇಯೋಭಿವೃದ್ಧಿಗೆ ನಿಸ್ವಾರ್ಥವಾಗಿ ಸೇವೆ ಸಲ್ಲಿಸಬಹುದಾದ ಸಮರ್ಥರನ್ನು ಸದಸ್ಯರನ್ನಾಗಿ ನೇಮಿಸಬೇಕು. ಆದರೆ ಇಲ್ಲಿ ಎಲ್ಲಾ ಉಲ್ಟಾಪಲ್ಟಾ. ಈ ಆಶಯಕ್ಕೆ ತದ್ವಿರುದ್ಧವಾಗಿ ಕೇವಲ ಸ್ವಾರ್ಥಿ, ಸ್ವಜನ ಪಕ್ಷಪಾತಿ ಹಾಗೂ ಭ್ರಷ್ಟರೇ ಈಗ ಮಠದ ಆಡಳಿತ ಮಂಡಳಿಯಲ್ಲಿ ತುಂಬಿಕೊಂಡು ಸಮಾಜ ಸೇವೆ, ಮಠದ ಸೇವೆಗಳ ಬದಲಾಗಿ ಸ್ವಸೇವೆಯಲ್ಲಿ ತೊಡಗಿಕೊಂಡಿದ್ದಾರೆ. ಇದನ್ನು ಒಂದು ದುರಂತ ಎನ್ನಬೇಕೋ, ಸಿದ್ಧಾರೂಢ ಮಠದ ಭಕ್ತರ ದೌರ್ಭಾಗ್ಯ ಎನ್ನಬೇಕೋ ಗೊತ್ತಿಲ್ಲ.

ಬಿ.ಡಿ. ಹೆಗಡೆಯ ಪಾಶುಪತ್ಯ-ಸಿದ್ಧಾರೂಢ ಮಠ ಅವನತಿಯತ್ತ

ಸಿದ್ಧಾರೂಢ ಮಠಕ್ಕೆ ಅಷ್ಟೊಂದು ಆಸ್ತಿ-ಪಾಸ್ತಿ ಆದಾಯವಿದೆ ಎಂದಮೇಲೆ ಇಲಿ ಹೆಗ್ಗಣಗಳು ಸುಳಿದಾಡದಿರುತ್ತವೆಯೇ? ಮಠದಲ್ಲಿ ಗೂಡು ಕಟ್ಟಿಕೊಂಡು ಪುಷ್ಕಳವಾಗಿ ತಿಂದು ಹೊರಳಾಡುವುದಕ್ಕೆ ಸಾಕಷ್ಟು ಅವಕಾಶ ಇದೆ ಎಂದು ಅರ್ಥ ಮಾಡಿಕೊಂಡ ಬಿ.ಡಿ. ಹೆಗಡೆ ಎಂಬ ವಕೀಲ ಒಂದು ದಂಡು ಕಟ್ಟಿಕೊಂಡು ಸಿದ್ಧಾರೂಢ ಮಠಕ್ಕೆ ನಾಲ್ಕೂ ದಿಕ್ಕಿನಿಂದ ಲಗ್ಗೆ ಇಟ್ಟ. ಈಗ ಅವನು ಆಡಳಿತ ಮಂಡಳಿಯ ಛೇರ್‌ಮನ್. ಅಲ್ಲಿಯತನಕ ಸಾಪೇಕ್ಷವಾಗಿ ಆರೋಗ್ಯ ಸ್ಥಿತಿಯಲ್ಲಿದ್ದ ಮಠ ಇವನು ಛೇರ್‌ಮನ್ ಆಗುವುದರೊಂದಿಗೆ ಸೊರಗಲಾರಂಭಿಸಿತು. ಅದರ ಲಾಜಿಕಲ್ ಬೆಳವಣಿಗೆ ಎಂಬಂತೆ ಹೆಗಡೆ ಕೊಬ್ಬಿ ದಪ್ಪಗಾಗಲಾರಂಭಿಸಿದ. ವೃತ್ತಿಯಲ್ಲಿ ವಕೀಲನಾದ ಇವನಿಗೆ ವ್ಯವಸ್ಥಿತವಾಗಿ ಮೇಯುವುದಕ್ಕೆ ಅದು ಪ್ರಾಯಶಃ ಹೇಳಿ ಮಾಡಿಸಿದ ಜಾಗದಂತಿದೆ.

ಮಠಕ್ಕೆ ಬರುವ ಭಕ್ತಾದಿಗಳಿಗೆ ಉಳಿಯಲು ಅನುಕೂಲವಾಗಲೆಂದು ಮಠದ ಎದುರೆ ಒಂದು 'ಯಾತ್ರಿ ನಿವಾಸ' ಕಟ್ಟಿಸಿದ ಹೆಗಡೆ ಅದರಿಂದ ಬರೋಬ್ಬರಿ 2.80 ಲಕ್ಷ ರೂಪಾಯಿಗಳನ್ನು ಜೇಬಿಗೆ ಇಳಿಸಿ ಬಿಟ್ಟ. ಮಠದ ಪಕ್ಕದಲ್ಲಿಯೇ ಮಠಕ್ಕೆ ಸೇರಿದ 6 ಎಕರೆ ಜಮೀನಿದೆ. ಅದರಲ್ಲಿ ಸಂಸ್ಕೃತ ವಿದ್ಯಾಪೀಠಕ್ಕೆ ಕಟ್ಟಡ ಕಟ್ಟಿಸುವ ಬದಲಿಗೆ ಪ್ರತಿ ವರ್ಷ 79,000 ರೂಪಾಯಿಗಳ ಬಾಡಿಗೆ ಆಧಾರದಲ್ಲಿ ಬೇರೆ ಖಾಸಗಿ ಜಮೀನಿನಲ್ಲಿ ಕಟ್ಟಡ ಕಟ್ಟಿಸಿದ್ದಾನೆಂದರೆ ಅವನಿಗೆ ಕಮೀಷನ್ನು ಎಷ್ಟು ಸಿಗುತ್ತದೆಂದು ನೀವೇ ಯೋಚನೆ ಮಾಡಿ. ಇಂತಹ ಯೋಜನೆಗಳಿಂದ ಸಾರ್ವಜನಿಕರಿಗೆ ಎಷ್ಟು ಅನುಕೂಲವಾಗುತ್ತಿದೆಯೋ ಇಲ್ಲವೋ ಗೊತ್ತಿಲ್ಲ, ಆದರೆ ಹೆಗಡೆಯ ಜೇಬು ಮಾತ್ರ ತುಂಬುತ್ತಿದೆ ಎಂಬುದಂತೂ ಸ್ಪಷ್ಟ.

ಹೆಗಡೆ ತಾನು ಮೇಯುವುದರ ಜೊತೆಗೆ ಇತರ ತನ್ನ ಪಟಾಲಂಗೂ ಚೆನ್ನಾಗಿ ಮೇಯಿಸುತ್ತಿದ್ದಾನೆ. ಮಠಕ್ಕೆ ಸೇರಿದ ಸುಮಾರು 4 ಎಕರೆ ಜಮೀನನ್ನು ಇನ್ನೊಬ್ಬ ವಕೀಲ ಉಜ್ಜಣ್ಣನವರ ಹೊಡೆದುಕೊಂಡು ಲೇಔಟ್ ಮಾಡಿಸಿ ಮಾರಿ ನೀರು ಕುಡಿದಾಗ ಛೇರ್‌ಮನ್ ಹೆಗಡೆ ಮಾತ್ರ ತನ್ನ ಪಾಲಿನ ಪ್ರಸಾದ ಸೇವಿಸಿ ಸುಮ್ಮನಾದ. ಕೊರವಿ ಎನ್ನುವ ಮಾಜಿ ಕಾರ್ಪೊರೇಟರ್ ಮಠದ ಒಂದೂವರೆ ಎಕರೆ ಆಸ್ತಿಯನ್ನು ನುಂಗಿ ನೀರು ಕುಡಿದಾಗಲೂ ಪ್ರಸಾದ ಸೇವಿಸಿ ತಪಸ್ಸಿಗೆ ಕುಳಿತ ಮೌನ ತಪಸ್ವಿ ಹೆಗಡೆ.

ಗೌರವ ಕಾರ್ಯದರ್ಶಿ ಬಿ. ಬಸವಣ್ಣ ಎಂಬ ನಿವೃತ್ತ ಇಂಜಿನಿಯರ್ ತನ್ನ ಭ್ರಷ್ಟತೆಗೆ ಕುಖ್ಯಾತಿ. ಹೆಗಡೆಯ ಎಲ್ಲ ಭ್ರಷ್ಟಾಚಾರಗಳಿಗೆ ಕೋಲೇಬಸವನಂತೆ ತಲೆ ಅಲ್ಲಾಡಿಸಿ ಸಾಥ್ ನೀಡುವ ಸಾಥಿ!

ಛೇರ್‌ಮನ್ ಹೆಗಡೆಯೇ ಸಿಕ್ಕಾಪಟ್ಟೆ ಮೇಯುತ್ತಿರುವಾಗ ಉಳಿದ ಪದಾಧಿಕಾರಿಗಳೂ 'ನಾವೇನೂ ಕಡಿಮೆ ಇಲ್ಲ' ಅಂತ ಮಠವನ್ನು ಕೊಳ್ಳೆ ಹೊಡೆಯಲಾರಂಭಿಸಿದ್ದಾರೆ. ವೈಸ್ ಛೇರ್ಮನ್ ಮಹಾ ದೇವ ಬಾಗೇವಾಡಿ ಕೆಲಸ ಕೊಡಿಸುತ್ತೇನೆ ಎಂದು ಹೇಳಿ ಇಬ್ಬರು ಅಮಾಯಕರಿಂದ ತಲಾ 50,000 ರೂಪಾಯಿಗಳನ್ನು ಗೆಬರಿಕೊಂಡು ಕೈ ಎತ್ತಿದ್ದಾನೆ.



ಬಿ.ಡಿ. ಹೆಗಡೆ

ಕೆಲಸ-ದುಡ್ಡು ಎಲ್ಲವನ್ನೂ ಕಳೆದುಕೊಂಡ ಅಮಾಯಕರಿಬ್ಬರು ದೊಡ್ಡ ಗಲಾಟೆ ಎಬ್ಬಿಸಿದಾಗ ಮಠದ ಮಾನಮರ್ಯಾದೆ ಬೀದಿಗೆ ತರಬಾರದೆಂದು ಧಾರವಾಡದ ಪ್ರಧಾನ ಜಿಲ್ಲಾ ನ್ಯಾಯಾಧೀಶ ಪ್ರದೀಪ ವೈಂಗಣಕರ್ ಮತ್ತು ಇನ್ನು ಯಾರ್‍ಯಾರೋ ಮಧ್ಯಸ್ಥಿಕೆ ವಹಿಸಿ ಹಣ ವಾಪಾಸ್ಸು ಕೊಡಿಸಿದ್ದಾರೆ.

ಇನ್ನು ಮಠದ ಧರ್ಮದರ್ಶಿಗಳೇನೂ ಕಡಿಮೆ ಇಲ್ಲ. ಸದಾಶಿವ ಚೌಶೆಟ್ಟಿ ಎಂಬ ಕಾಂಗ್ರೆಸ್‌ನ ಮಾಜಿ ಕಾರ್ಪೊರೇಟರ್ ಕಮ್ ಧರ್ಮದರ್ಶಿ ಮಠದ ದಕ್ಷಿಣೆಯ ಹುಂಡಿಯಿಂದಲೇ 90,000 ರೂಪಾಯಿಗಳನ್ನು ತಿಂದು ತೇಗಿದ. ಜನರೆಲ್ಲಾ ಸೇರಿ ಗಲಾಟೆ ಮಾಡಿ, ಪಂಚಾಯ್ತಿ ಸೇರಿಸಿ ಛೀ.... ಥೂ... ಅಂತ ಉಗಿದ ಮೇಲೆ 90,000 ರೂಪಾಯಿಗಳಿಗೆ ಚೆಕ್ ಕೊಟ್ಟ. ಬ್ಯಾಂಕಿಗೆ ಅದನ್ನು ತೆಗೆದು ಕೊಂಡ ಹೋದರೆ ಬೌನ್ಸ್! ಇಲ್ಲೂ ಮಧ್ಯಸ್ಥಿಕೆ ವಹಿಸಿದವರು ಪ್ರದೀಪ ವೈಂಗಣಕರ್‌ರವರೇ.



ಮಹಾದೇವ ಬಾಗೆವಾಡಿ

ಕೆಎಸ್‌ಆರ್‌ಟಿಸಿಯ ಮಾಜಿ ಉಪಾಧ್ಯಕ್ಷ ಮತ್ತು ಕಾಂಗ್ರೆಸ್‌ನ ಹಿರಿಯ ಕುಳಗಳು ಹುಬ್ಬಳ್ಳಿಗೆ ಬಂದಾಗ ಅವರು ಉಳಿದುಕೊಂಡಿರುವ ಗೆಸ್ಟ್‌ಹೌಸ್‌ಗೆ ಹೆಣ್ಣು-ಹೆಂಡ ಸಪ್ಲೈ ಮಾಡುವ ಕಿರಾತಕ ಬಾಬು ಅಣವೇಕರ್, ರೇಷನ್ ಇಲಾಖೆಯಲ್ಲಿ ಇದ್ದು ಸಬ್ಸಿಡಿ ಸಕ್ಕರೆ, ಅಕ್ಕಿ, ಗೋಧಿ ಮೇಯ್ದು ನಿವೃತ್ತಿ ಹೊಂದಿದ ಡಿ. ಹನುಮಂತಪ್ಪ, ಪತ್ತೆಶಾವಲಿ ದರ್ಗಾದ ಆಸ್ತಿಯನ್ನೇ ನುಂಗಿ ನೀರು ಕುಡಿದ ಡಾ. ತಲವಾಯಿ-ಹೀಗೆ ಒಬ್ಬರ ಮೇಲೆ ಒಬ್ಬರು ನಾ ಮುಂದು-ತಾ ಮುಂದು ಎಂಬಂತೆ ಮಠಕ್ಕೆ ಲಗ್ಗೆ ಇಟ್ಟದ್ದರೆ ಛೇರ್‌ಮನ್ ಮಾತ್ರ ಎಲ್ಲರಿಗೂ ಆಶ್ರಯ ನೀಡಿದ್ದಾನೆ. ತಲವಾಯಿಯಂತೂ ತನ್ನ ಹೆಂಡತಿ ಗಿರಿಜಾದೇವಿಯನ್ನು ಮಠದ ಧರ್ಮದರ್ಶಿಯನ್ನಾಗಿ ಮಾಡಿ ಮೇಯುವ ಹಾದಿಯನ್ನು ಸುಗಮಗೊಳಿಸಿ ಕೊಂಡಿದ್ದಾನೆ.

ಬಿ.ಎ. ಸೋಮಾಪುರ, ಕೆ.ಎಲ್. ಪಾಟೀಲ್, ಆರ್.ಜಿ. ನಲವಾಡಿ ಎಂಬ ರೆಡ್ಡಿಗಾರು ವಕೀಲರುಗಳು, ಎಸ್.ಎಸ್. ಹಸಬಿ ಎಂಬ ನಿವೃತ್ತ ಎಸ್.ಪಿ., ಡಾ. ಮಲ್ಲಿಕಾರ್ಜುನ ಸಿಂಧಗಿ ಎಂಬ ನಿವೃತ್ತ ಪ್ರೊಫೆಸರ್, ನಾರಾಯಣ್ ಹಬೀಬ್ ಎಂಬ ಉದ್ಯಮಪತಿ, ಗೀತಾ ಎಸ್.ಬಿ. ಎಂಬ ಗೃಹಿಣಿ ಇಂಥ ಹಲವಾರು ಜನರು ಒಂದಿಷ್ಟು ಪ್ರಾಮಾಣಿಕತೆ ಉಳಿಸಿಕೊಂಡು ಮಠದ ಧರ್ಮದರ್ಶಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರಾದರೂ ಮಠವನ್ನು ಕೊಳ್ಳೆ ಹೊಡೆಯುತ್ತಿರುವ ಹೆಗ್ಗಣಗಳ ಬಗ್ಗೆ ಮಾತ್ರ ತುಟಪಿಟಕ್ ಎನ್ನದೇ ಕುಳಿತಿರುವುದು ಆಶ್ಚರ್ಯ.

ಎಲ್ಲಾ ಧರ್ಮದರ್ಶಿಗಳ ಅಧಿಕಾರಾವಧಿ ಮೂರು ವರ್ಷ. ಈಗ ಅದು ಮುಗಿಯುತ್ತಾ ಬಂದಿದೆ. ಪುನರ್‌ನೇಮಕಾತಿಗಾಗಿ ಸುಮಾರು 475 ಅರ್ಜಿಗಳು ಈಗಾಗಲೇ ಬಂದಿವೆ. ಈ ಬಾರಿಯಾದರೂ ಮಠಕ್ಕೆ ಪ್ರಾಮಾಣಿಕರು ಆಯ್ಕೆಯಾಗಿ ಸೊರಗುತ್ತಿರುವ ಮಠವನ್ನು ಪುನಃ ಆರೋಗ್ಯ ಸ್ಥಿತಿಗೆ ತರುತ್ತಾರೆಯೇ ಮತ್ತು ಈವರೆಗೆ ಮೇಯ್ದು ಎಲ್ಲಾ ಹೆಗ್ಗಣಗಳ ವಿರುದ್ಧ ವಿಚಾರಣೆ ನಡೆಸುತ್ತಾರೆಯೇ ಎಂಬುದು ಈಗ ಧಾರವಾಡ-ಹುಬ್ಬಳ್ಳಿ ಜನರ ಪ್ರಶ್ನೆ. ಇದಾಗದೇ, ಈ ಹೆಗ್ಗಣಗಳೇ ಮುಂದು ವರೆದು ಮಠವನ್ನು ಅಧೋಗತಿಗೆ ತರಲು ಹೊರಟರೆ ಭಕ್ತ ಸಮೂಹ ಮೆಟ್ಟು ಹಿಡಿದು ಬೀದಿಗೆ ಬರುವ ದಿನ ದೂರವಿಲ್ಲ.

-ವರದಿಗಾರ

ಕರ್ನಾಟಕದಲ್ಲೊಂದು ನಂದಿಗ್ರಾಮ?

ರಾಜ್ಯದ ಒಂಬತ್ತು ಕಡೆ ವಿಶೇಷ ಆರ್ಥಿಕವಲಯ (SEZ)ಗಳ ಹೆಸರಲ್ಲಿ ರೈತರ ಫಲವತ್ತಾದ ಭೂಮಿ ಕಿತ್ತುಕೊಂಡು ಬಂಡವಾಳಶಾಹಿಗಳಿಗೆ ನೀಡುತ್ತಿರುವ ಕುಮಾರಸ್ವಾಮಿಯ ಜನವಿರೋಧಿ ಸರ್ಕಾರ ಕೊಪ್ಪಳದಲ್ಲಂತೂ SEZ ಹೆಸರಿಲ್ಲದೆಯೇ ಭೂಮಿ ಕಿತ್ತುಕೊಳ್ಳುತ್ತಿದೆ. ಬಾಯಿಗೆ ಬಂದ ಬೆಲೆಯನ್ನು 'ಮಾರ್ಕೆಟ್ ರೇಟ್' ಎಂದುಹೇಳಿ ಬೆಲೆಬಾಳುವ ರೈತರ ಫಲವತ್ತಾದ ಭೂಮಿಯನ್ನು ಕಿತ್ತುಕೊಂಡು ಹೊಸಪೇಟೆಯ ಬಲ್ಡೋಟಾನಿಗೆ ನೀಡಲು ಹೊರಟಿದೆ. ರೈತರನ್ನು ಒಕ್ಕಲೆಬ್ಬಿಸಿ ಅವರ ಭೂಮಿಯನ್ನು ಬಂಡವಾಳಗಾರರ ಕೈಗೆ 'ಕಾನೂನು ಮೂಲಕ' ನೀಡಿ ಅಭಿವೃದ್ಧಿ ಹೆಸರಲ್ಲಿ ರೈತರ ಸಮಾಧಿ ಕಟ್ಟಲು ರೆಡಿಯಾಗಿ ಕೊಪ್ಪಳದಿಂದ ಬರೀ 1. ಕಿ.ಮೀ ಅಂತರದಲ್ಲಿ ಕಾರ್ಖಾನೆ ಸ್ಥಾಪಿಸಿ ಮುಂದೆ ಕೊಪ್ಪಳವನ್ನು ಒಂದು ದೊಡ್ಡ ರೋಗಿಷ್ಠರ ಬೀಡನ್ನಾಗಿ ಪರಿವರ್ತಿಸುವ ಕೆಲಸ ನಡೆದಿದೆ. ಇದನ್ನು ವಿರೋಧಿಸಿ ಕೊಪ್ಪಳ ಬಂದ್ ನಡೆಯುತ್ತಿದೆ.

ಅಲ್ಲಿ ಟಾಟಾ ಇಲ್ಲಿ ಬಲ್ಡೋಟಾ!

ಕೊಪ್ಪಳ

ಇಷ್ಟು ದಿನ ರೈತ ಕಾರ್ಮಿಕ ಅಂತ ಜಪಿಸುತ್ತಿದ್ದ ಬಂಗಾಳದ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರ ಸಿಂಗೂರಿನಲ್ಲಿ ಟಾಟಾ ಮೋಟಾರ್ಸ್‌ಗಾಗಿ ಸಾವಿರ ಎಕರೆ ಭೂಮಿ ಕಿತ್ತುಕೊಂಡಿದೆ. 'ಕೆಂಪು ಧ್ವಜ'ದವರೇ ಕಾರ್ಖಾನೆಗಳಿಗೆ ಹೀಗೆ 'ಹಸಿರು ನಿಶಾನೆ' ತೋರಿಸುತ್ತಿರುವಾಗ ಇಲ್ಲಿ ಕರ್ನಾಟಕದ 'ಹಸಿರು ಧ್ವಜ'ದ ಜೆಡಿಎಸ್ ಇಂತಹದಕ್ಕೆಲ್ಲ ರೆಡ್ ಸಿಗ್ನಲ್ ತೋರಿಸುತ್ತಾ? ಅಲ್ಲಿನ ರೈತರಿಗೆ ಟಾಟಾ ಗಂಟು ಬಿದ್ದರೆ ಇಲ್ಲಿನ ರೈತರಿಗೆ ಬಲ್ಡೋಟಾ ತಗುಲಿಕೊಂಡಿದ್ದಾನೆ. 2292 ಕೋಟಿ ಬಂಡವಾಳದಲ್ಲಿ ಪ್ರತಿವರ್ಷ 1.20 ದಶಲಕ್ಷ ಟನ್ ಕಬ್ಬಿಣದ ಅದಿರು ಸಂಸ್ಕರಣ ಮತ್ತು ವರ್ಷಕ್ಕೆ 1.00 ದಶಲಕ್ಷ ಟನ್ ಉಕ್ಕು ಉತ್ಪಾದನೆಯ ಹೊಸಪೇಟೆಯ ಎಂಎಸ್‌ಪಿಎಲ್ ಕಾರ್ಖಾನೆಗೆ ಡಿ.2005 ರಲ್ಲಿ ಅನುಮತಿ ಕೊಟ್ಟದ್ದು ಹಿಂದಿನ ಮುಖ್ಯಮಂತ್ರಿ ಧರಂಸಿಂಗ್

ಬಳ್ಳಾರಿ ಜಿಲ್ಲೆಯಲ್ಲಿ ಮೈನಿಂಗ್, ಮೆಡಿಕಲ್ ಗ್ಯಾಸಸ್ ಇನ್ನಿತರ ವ್ಯವಹಾರದಲ್ಲಿ ವರ್ಷಕ್ಕೆ ನೂರಾರು ಕೋಟಿ ಕಮಾಯಿಸುತ್ತಿರುವ ಎಂಎಸ್‌ಪಿಎಲ್ ಇಲ್ಲಿ ಉಕ್ಕು ಕಾರ್ಖಾನೆ ಸ್ಥಾಪಿಸುತ್ತೇನೆಂದಾಗ ಧರಂಸಿಂಗ್ ಅನುಮತಿ ನೀಡಿ 418 ಎಕರೆ ಭೂಮಿ ಸ್ವಾಧೀನಕ್ಕೆ ತೆಗೆದುಕೊಂಡು ನಿಮಗೆ ನೀಡುತ್ತೇವೆಂದು ಮಾತು ಕೊಟ್ಟಿದ್ದರು. ಅಷ್ಟೇ ಅಲ್ಲ, ಈ ಕಾರ್ಖಾನೆಗೆ 12.55 ಮಿಲಿಯನ್ ಗ್ಯಾಲನ್ ನೀರು, 20 ಮೆಗಾ ವ್ಯಾಟ್ ಕರೆಂಟ್ ಕೊಡುತ್ತೇವೆ ಎಂದೂ ಹೇಳಿದ್ದರು ಧರಂಸಿಂಗ್.

ಈಗ ಕುಮಾರಸ್ವಾಮಿ ಸರ್ಕಾರವೂ ಅದನ್ನೇ ಮಾಡುತ್ತಿದೆ. ಸರಿ, ಕೊಪ್ಪಳದಂತಹ ಬೆಳೆಯುವ ಜಿಲ್ಲಾ ಕೇಂದ್ರಕ್ಕೆ ಬರೀ 1.ಕಿ.ಮೀ ಅಂತರದಲ್ಲಿ ಕಾರ್ಖಾನೆ ಸ್ಥಾಪಿಸಿ ಸಾವಿರ ಜನಕ್ಕೆ ಉದ್ಯೋಗ ಕೊಟ್ಟು ಕೊಪ್ಪಳ, ಬಸಾಪುರ, ಕಿಡದಾಳನ ಲಕ್ಷ ಮಂದಿಯನ್ನು ಶಾಶ್ವತ ರೋಗಿಷ್ಠರಾಗಿ ಮಾಡೋದ್ಯಾಕೆ? ಈಗಾಗಲೇ ಇಲ್ಲಿಗೆ ಬಂದಿರುವ ಎಷ್ಟು ಕಾರ್ಖಾನೆಗಳು ಸ್ಥಳೀಯರಿಗೆ ಕೆಲಸ ನೀಡಿವೆ?

ನಾಪತ್ತೆಯಾದ ಮೂಡಿಗೆರೆ ಮಠದ ಸ್ವಾಮಿ

ಚಿಕ್ಕಮಗಳೂರು

ಫೇಟ್ ಬ್ಲೇಡ್‌ಕಂಪನಿಯಂತೆ ವ್ಯಾಪಾರ ಮಾಡುವ, ಂಕ್‌ನಲ್ಲಿ ಹಣ ಇಲ್ಲದಿದ್ದರೂ ಚೆಕ್ ಕೊಟ್ಟು ಮೋಸ ಡುವ, ಕಂಡಕಂಡಲ್ಲೆಲ್ಲಾ ಸಾಲ ಮಾಡಿ ಕೊನೆಗೆ ಎತ್ತುವ, ಸಾಲಗಾರರು ಮನೆಗೆ ಬಂದು ಪೀಡಿಸುತ್ತಾರೆ, ೆ ಪಟ್ಟಿ ಹಿಡಿಯುತ್ತಾರೆ ಅಂತ ಹೆದರಿ ಮನೆ-ಮಠ ್ಟು, ಯಾರಿಗೂ ಹೇಳದೇ ಕೇಳದೆ, ರಾತ್ರೋರಾತ್ರಿ ಿಹೋಗುವ ಜನರನ್ನಂತೂ ದಿನಾಲು ನೋಡುತ್ತಿರು ರಿ. ಆದರೆ ಇದನ್ನೆಲ್ಲಾ ಮಾಡುವ ಮಠಾಧೀಶ ಮೀಜಿ(!)ಗಳನ್ನು ಎಲ್ಲಾದರೂ ನೋಡಿದ್ದೀರಾ? "ಛೇ... ನೆಂಥಾ ಪ್ರಶ್ನೆ, ಕಾಯಕ ತತ್ವ, ಆಧ್ಯಾತ್ಮ, ಶಿಕ್ಷಣ ನ್ನದಾಸೋಹಗಳ ಮೂಲಕ ಸಮಾಜ ಸೇವೆಯಲ್ಲಿ ಡಗಿರುವ ಮಠ-ಮಾನ್ಯಗಳ ಮೀಜಿಯವರು ಇಂತಹ ಹೀನ ಸ ಮಾಡಲು ಸಾಧ್ಯವೇ ಇಲ್ಲ" ದು ಮೂಗು ಮುರಿಯಬೇಡಿ. ತಹ ಸ್ವಾಮೀಜಿಗಳೂ ನಮ್ಮ ುವಿದ್ದಾರೆ. ಅಂಥವರನ್ನು ಒಮ್ಮೆ ೋಡಿ ಪುಣ್ಯ ಕಟ್ಟಿಕೊಳ್ಳಬೇಕೆಂಬ ಬಯಕೆ ನಿಮಗಿದ್ದರೆ ಲೆನಾಡಿನ ಮೂಡಿಗೆರೆಗೆ ಬನ್ನಿ. ಅಂತಹ ಮಹಾ ಮಿಯ ದರ್ಶನ ಮುಂದೊಂದು ದಿನ ನಿಮಗೆ ಗಲೂಬಹುದು. ಈಗಲೇ ದರ್ಶನ ಯಾಕಾಗುವುದಿಲ್ಲ ದರೆ ಆ ಮಹಾಸ್ವಾಮಿ ಮಠ ಬಿಟ್ಟು ಹೇಳದೆಕೇಳದೆ ಡಿಹೋಗಿದ್ದಾನೆ.

ಹೌದು. ಮೂಡಿಗೆರೆಯ ಮಹಂತಿನ ಮಠದ ಶಿವಾಯೋಗಿ ಶಿವಚಾರ್ಯ ಮಹಾಸ್ವಾಮಿಯೇ ಡಿಹೋಗಿ ನಾಪತ್ತೆಯಾಗಿರುವ ಮಹಾನುಭಾವ. ಾರ್ಚ್ ಒಂದರಂದು ಬಾಳೆಹೊನ್ನೂರಿನ ರಂಭಾಪುರಿ ಠದ ಜಾತ್ರಾ ಮಹೋತ್ಸವಕ್ಕೆಂದು ಹೋದ ಈತ ರಳಿ ಬಂದೇ ಇಲ್ಲ. ಸ್ವಾಮಿ ಯಾಕೆ ಹೀಗೆ ನಾಪತ್ತೆ ಾದ ಎಂದು ಕೆದಕುತ್ತಾ ಹೋದರೆ ಅನೇಕ ಕಹಿ ್ಯಗಳ ಅನಾವರಣವಾಗುತ್ತದೆ; ಮಾಡಬಾರದ ಕೆಲಸಗ ನ್ನೆಲ್ಲಾ ಮಾಡಿ ಓಡಿಹೋಗಿ ತಲೆ ಮರೆಸಿಕೊಂಡಿರುವ ವಯೋಗಿ ಶಿವಾಚಾರ್ಯನ ಅಸಲಿ ಚಹರೆಯ ಗ್ದರ್ಶನವಾಗುತ್ತದೆ.

ಮಹಂತಿನ ಮಠಕ್ಕೆ ವಕ್ಕರಿಸಿದ ಮಹಾಸ್ವಾಮಿ

ಮೂಡಿಗೆರೆ ಸಮೀಪದ ಮೇಗಲಪೇಟೆ ಬಳಿ ರುವ ಮಹಂತಿನ ಮಠಕ್ಕೆ ಸುಮಾರು 600 ವರ್ಷಗಳ ತಿಹಾಸವಿದೆ. 1416 ನೇ ಇಸ್ವಿಯಲ್ಲಿ ಸಿದ್ಧೇಶ್ವರ ಾಚಾರ್ಯರು ಈ ಮಠ ಪ್ರಥಮ ಧರ್ಮಗುರುಗಳಾ ವುದರೊಂದಿಗೆ ಆರಂಭವಾದ ಈ ಮಠ 1946ರ ರೆಗೆ ಸುಮಾರು 12 ಮಂದಿ ಗುರುಗಳನ್ನು ನೋಡಿದೆ. ದರೆ 1946 ರ ನಂತರ ಸುಮಾರು 60 ವರ್ಷಗಳ ಲ ಮಠಕ್ಕೆ ಗುರುಗಳಿಲ್ಲದೇ ಗುರುಪಾರಿಚಾರಿಕೆ ತುಹೋಗಿತ್ತು. ಮಠದ ಆಸ್ತಿಯಾಗಿದ್ದ ನೂರಾರು ಕರೆ ಜಮೀನು ಕಂಡಕಂಡವರಿಗೆ ಮಾರಾಟವಾಗಿ ೋಗಿತ್ತು. ಕೊನೆಯಲ್ಲಿ ಉಳಿದದ್ದು ಮಠ ಮಾತ್ರ. ಠದ ಜಮೀನನ್ನೆಲ್ಲಾ ಮಾರಾಟ ಮಾಡಿ ಮಠದ ಾಬ್ದಾರಿಯನ್ನು ಹೊತ್ತುಕೊಂಡವರು ಶಾಂತ ಮಲ್ಲಯ್ಯ ಬುವವರು. ಅವರು ಸತ್ತು ಹೋದ ನಂತರ ಅವರ ಗ ದಿವಾಕರಯ್ಯ ಮಠದ ಪಾರುಪತ್ಯವನ್ನು ೋಡಿಕೊಳ್ಳಲಾರಂಭಿಸಿದರು.

ತಮ್ಮ ಜನಾಂಗದ ಮಠವು ಅವನತಿಯತ್ತ ಗುವುದನ್ನು ಕಂಡ ವೀರಶೈವ ಸಮಾಜ ಜನ ಳೆಹೊನ್ನೂರು ಶ್ರೀಗಳಲ್ಲಿ ಹೋಗಿ ಮಹಂತಿನ ಠವನ್ನೂ ಬಾಳೆಹೊನ್ನೂರಿನ ಮಠಕ್ಕೆ ಸೇರಿಸಿಕೊಳ್ಳ ಕೆಂದು ಬೇಡಿಕೊಂಡರು. ಬಾಳೆಹೊನ್ನೂರು ಮಠದ ಜಗದ್ಗುರು ಪ್ರಸನ್ನ ರೇಣುಕ ವೀರ ಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ಮೂಡಿಗೆರೆ ವೀರಶೈವ ಸಮಾಜದ ಮುಖಂಡರುಗಳನ್ನು ಕರೆಸಿ ಮಾತುಕತೆ ನಡೆಸಿ "ಮಹಂತಿನ ಮಠಕ್ಕೆ ಒಬ್ಬ ಗುರುವಿನ ಅಗತ್ಯವಿದೆ, ಅವರನ್ನು ನೀವೇ ಹುಡುಕಿ. ನಾನು ಬಂದು ಪಟ್ಟಾಭಿಷೇಕ ಮಾಡಿ ಕೊಡುತ್ತೇನೆ" ಎಂದರು.

ವೀರಶೈವ ಸಮಾಜದವರು ಗುರುವಿಗಾಗಿ ಹುಡುಕಾಡಿದಾಗ ಅವರ ಕಣ್ಣಿಗೆ ಕಂಡದ್ದು ಮಠದ ಗುರುಪರಂಪರೆಯ ವಂಶಸ್ಥರಾದ ಹಾಗೂ ಮಠದಲ್ಲಿಯೇ ವಾಸವಾಗಿದ್ದ ದಿವಾಕರಯ್ಯನವರ ಮಗ ಧರಣೇಶ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ತುಮಕೂರಿನ ಹುಳಿಯೂರಿನಲ್ಲಿ ಹಾಗೂ ಪದವಿಪೂರ್ವ ಶಿಕ್ಷಣವನ್ನು ಸಿದ್ಧಗಂಗಾ ಸಂಸ್ಕೃತ ಶಾಲೆಯಲ್ಲಿ ಮುಗಿಸಿದ್ದ ಧರಣೇಶ ಸುಮಾರು 22 ವರ್ಷದ ಯುವಕ. ತನ್ನ ವಯಸ್ಸಿನ ಯುವಕರಂತೆ ಎಲ್ಲ ರೀತಿಯ ಗುಣ-ಅವಗುಣಗಳನ್ನು ಹೊಂದಿದ್ದ ಈತನನ್ನು ಮಹಂತಿನ ಮಠದ ಗುರುವನ್ನಾಗಿ ಪಟ್ಟಕ್ಕೇರಿಸಲು ಒಪ್ಪಿಸಿ ಅದಕ್ಕೆ ಬೇಕಾದ ಧಾರ್ಮಿಕ ವಿದ್ಯಾಭ್ಯಾಸವನ್ನು ತೋಪಿನ ಮಠದ ಶಿವಾಚಾರ್ಯ ಸ್ವಾಮಿಗಳಲ್ಲಿ ಕೊಡಿಸಿದ್ದಾರೆ. ಧರಣೇಶ ಎಂಬ ಹೆಸರಿನ ಬದಲಿಗೆ ಷ.ಬ್ರ. ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು ಎಂದು ನೂತನವಾಗಿ ನಾಮಕರಣ ಮಾಡಿ 2006 ರ ಮೇ 11 ರಂದು ಮಹಂತಿನ ಮಠದ ಗುರುಗಳನ್ನಾಗಿ ಪಟ್ಟಕ್ಕೇರಿಸಲಾಯಿತು.

ಅಧಿಕಾರಕ್ಕೆ ಬಂದ 10 ತಿಂಗಳಲ್ಲೇ ಈ ಮಹಾಸ್ವಾಮಿ ಆಡಬಾರದ ಆಟಗಳನ್ನು ಆಡಿದ, ಮಾಡಬಾರದ ಕೆಲಸಗಳನ್ನು ಮಾಡಿದ. ಮಠದ ಕಾರ್ಯಕಾರಿ ಸಮಿತಿಯವರು ಸ್ವಾಮಿಗಳಿಗೆ ಹಣ ಸಿಕ್ಕದಂತೆ ಮಾಡಿದಾಗ ಹಣಕ್ಕಾಗಿ ಹಪಹಪಿಸಿದ ಸ್ವಾಮಿ ಗೋಲ್‌ಮಾಲ್ ದಂಧೆಗಿಳಿದ.

ಕೆಲವು ಚಿನ್ನದ ಅಂಗಡಿಯ ಮಾಲೀಕರನ್ನು ಕರೆಸಿದ ಸ್ವಾಮಿ ಅವರಿಂದ ಬಂಗಾರದ ವಸ್ತುಗಳನ್ನು ಪಡೆದು ಅವರಿಗೆ ಹಣ ಕೂಡ ನೀಡಲಿಲ್ಲ, ಆದರೆ ಅದೇ ಬಂಗಾರವನ್ನು ಬೇರೆ ಅಂಗಡಿಗಳಲ್ಲಿ ಗಿರವಿ ಇಟ್ಟು ಹಣ ಪಡೆದ. ಇನ್ನು ಕೆಲವರ ಜೊತೆ ಏನೇನೋ ಖಾಸಗಿ ವ್ಯವಹಾರಗಳನ್ನು ಮಾಡಿ ಸಾಲ ಮಾಡಿ, ಅದನ್ನು ತೀರಿಸುವುದಕ್ಕಾಗಿ ಮನ ಬಂದಂತೆ ಎಲ್ಲರಿಗೂ ಚೆಕ್ ನೀಡಿದ. ಆದರೆ ಚೆಕ್ ಡ್ರಾ ಮಾಡಿಕೊಳ್ಳಲು ಬ್ಯಾಂಕಿನಲ್ಲಿ ಹಣವೇ ಇಲ್ಲ! ಎಲ್ಲಾ ಚೆಕ್‌ಗಳೂ ಬೌನ್ಸ್! ಕೊನೆಗೆ ಹಣ ಕಳೆದುಕೊಂಡವರೆಲ್ಲ ಮಹಂತಿನ ಮಠಕ್ಕೆ ಮುತ್ತಿಗೆ ಹಾಕಿದರೆ, ಸ್ವಾಮಿಯೇ ನಾಪತ್ತೆ!

11 ಸಾವಿರಕ್ಕೆ 20 ಸಾವಿರದ ಚೆಕ್ ನೀಡಿದ ಧರಣೇಶ ದೇವರು

ಹೀಗೆ ಸ್ವಾಮೀಜಿಯ ಕುತಂತ್ರಕ್ಕೆ ಬಲಿಯಾದವರಲ್ಲಿ ಚಿನ್ನದ ಅಂಗಡಿ ಮಾಲೀಕ ಕೆ.ಎಲ್. ಹರೀಶ್ ಕೂಡ ಒಬ್ಬರು. ಮೂಡಿಗೆರೆ ಪಟ್ಟಣದ ಎಂ.ಜಿ. ರಸ್ತೆಯಲ್ಲಿ ಚಿನ್ನದ ಅಂಗಡಿ ಇಟ್ಟುಕೊಂಡಿರುವ ಹರೀಶ್‌ರವರನ್ನು ಇತ್ತೀಚೆಗೆ ಮೇಗಲಪೇಟೆಯ ಬಸವೇಶ್ವರ ದೇವಾಲಯದಲ್ಲಿ ಪರಿಚಯ ಮಾಡಿಕೊಂಡ ಸ್ವಾಮಿ ಅವರನ್ನು ಮಠಕ್ಕೆ ಬರುವಂತೆ ಆಹ್ವಾನಿಸಿದ. ಸ್ವಾಮಿಯ ಆದೇಶದಂತೆ ಅವರು ಮಠಕ್ಕೆ ಬಂದಾಗ "ಮಠಕ್ಕೆ ಕೆಲವು ಬೆಳ್ಳಿ ಒಡವೆಗಳು ಬೇಕು" ಎಂದು ನಂಬಿಸಿ ಅವುಗಳನ್ನು ಕಿತ್ತುಕೊಂಡ. ಎರಡು ದಿನಗಳ ನಂತರ "ಬಾಳೆಹೊನ್ನೂರಿನ ಗುರುಗಳಿಗೆ ಎರಡು ಚಿನ್ನದ ಉಂಗುರಗಳು ಬೇಕಾಗಿವೆ" ಎಂದು ಸುಳ್ಳು ಹೇಳಿ 11 ಸಾವಿರ ಬೆಲೆ ಬಾಳುವ ಉಂಗುರಗಳನ್ನು ಮಠಕ್ಕೆ ತರಿಸಿಕೊಂಡ. ಪ್ರಾಮಾಣಿಕವಾಗಿ ಅವುಗಳಿಗೆ ಹಣ ಕೊಡುವವನಂತೆ ನಟಿಸಿದ ಸ್ವಾಮಿ 20 ಸಾವಿರ ರೂ.ಗಳ ಚೆಕ್‌ನ್ನೂ ಬರೆದುಕೊಟ್ಟ! ಅದೂ ಖಾತೆಯಲ್ಲಿ ಹಣವಿಲ್ಲದೇ ಬೌನ್ಸ್!



ಮಹಂತಿನ ಮಠ ಮತ್ತು ಧರಣೇಶ ದೇವರು

ಇಂತಹುದೇ ಪ್ರಯೋಗವನ್ನು ಸ್ವಾಮಿ ಬೇರೆ ಬೇರೆ ಚಿನ್ನದ ವ್ಯಾಪಾರಿಗಳ ಮೇಲೆ ಮಾಡಿದ್ದಾನೆಂದು ಗೊತ್ತಾದ ತಕ್ಷಣ ಮಠಕ್ಕೆ ಫೋನಾಯಿಸಿದ ಹರೀಶ್ "ನಾನು ನಿಮಗೆ ಕೊಟ್ಟಿರುವ ಉಂಗುರಗಳು ಬೇರೆ ಗಿರಾಕಿಯವು. ಅವುಗಳನ್ನು ಮಿಸ್ ಆಗಿ ನಿಮಗೆ ಕೊಟ್ಟಿರುವೆ. ಅವುಗಳನ್ನು ವಾಪಾಸ್ಸು ಕೊಡಿ, ನಿಮಗೆ ಬೇರೆ ಉಂಗುರಗಳನ್ನೂ ಕೊಡುತ್ತೇನೆ" ಎಂದು ಉಪಾಯದಿಂದ ಕೇಳಿದರು. ಆದರೆ ಸ್ವಾಮಿ ರಂಗೋಲಿ ಕೆಳಗೆ ನುಸುಳುವ ಚಾಲಾಕಿ. ಬಹಳ ವಿನಯದಿಂದ ಆ ಉಂಗುರಗಳನ್ನು ಈಗಾಗಲೇ ಬಾಳೆಹೊನ್ನೂರು ಮಠದ ಸ್ವಾಮಿಗಳಿಗೆ ಕಳಿಸಿಕೊಟ್ಟಾಗಿದೆ ಎಂದು ಹೇಳಿ ಜಾರಿಕೊಂಡ. ಅದೇ ಉಂಗುರಗಳನ್ನು ಮೂಡಿಗೆರೆ ಪಟ್ಟಣದ ಬೇರೊಂದು ಅಂಗಡಿಗೆ 2500 ರೂಪಾಯಿಗಳಿಗೆ ಕಳ್ಳಸ್ವಾಮಿ ಮಾರಾಟ ಮಾಡಿರುವುದು ಹರೀಶನಿಗೆ ಗೊತ್ತಾಗಲು ಬಹಳ ದಿನ ಬೇಕಾಗಲಿಲ್ಲ.

ಮಠದ ವಿದ್ಯಾರ್ಥಿಯೂ ನಾಪತ್ತೆ

ಸ್ವಾಮೀಜಿ ಅಂಡರ್‌ಗ್ರೌಂಡ್ ಆಗಿರುವ ಎಪಿಸೋಡ್‌ಗೆ ಹೊಂದಿಕೊಂಡೇ ಇನ್ನೊಂದು ಪ್ರಕರಣವೂ ತಡವಾಗಿ ಬೆಳಕಿಗೆ ಬಂದಿದೆ. ಸ್ವಾಮೀಜಿ ಮಾರ್ಚ್ ಒಂದರಿಂದ ಕಾಣೆಯಾಗುವ 4 ದಿನಗಳ ಮೊದಲೇ ಅದೇ ಮಠದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಒಬ್ಬ ವಿದ್ಯಾರ್ಥಿಯೂ ಕಾಣೆಯಾಗಿದ್ದು ಈವರೆಗೆ ಆತನ ಪತ್ತೆ ಇಲ್ಲ. 60 ವರ್ಷಗಳ ಕಾಲ ಪಾಳು ಬಿದ್ದಿದ್ದ ಮಠಕ್ಕೆ ಧರಣೇಶ ದೇವರು ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಯಾಗಿ ಬಂದ ನಂತರ ಮೂರು ಜನ ವಿದ್ಯಾರ್ಥಿಗಳು ವಿದ್ಯಾರ್ಜನೆಗಾಗಿ ಬಂದಿದ್ದರು. ಅದೂ 1500 ರೂಪಾಯಿ ಫೀಸು ಕೊಟ್ಟು. ಈ ಧರಣೇಶ ದೇವರು ಆಡುವ ಮಂಗನಾಟಕ್ಕೆ ಅನಗತ್ಯ ಬೈಗುಳ-ಹೊಡೆತಗಳಿಗೆ ಈ ಅಮಾಯಕರು ಪರಿತಪಿಸ ಬೇಕಾಯ್ತು. ಈಗ ಅದರಲ್ಲೂ ಒಬ್ಬ ವಿದ್ಯಾರ್ಥಿ ನಾಪತ್ತೆ.

ಗೋಣಿಬೀಡಿನ ಹಿರೇಶಿಗಿರ ವಾಸಿ ದಿವಂಗತ ತ್ಯಾಗರಾಜ್ ಅವರ ಮಗನಾದ ಹದಿನಾರು ವರ್ಷ ವಯಸ್ಸಿನ ಶರತ್‌ಕುಮಾರ್ ಈ ಮಠದಲ್ಲಿದ್ದುಕೊಂಡೇ ವಿದ್ಯಾಭ್ಯಾಸ ಮಾಡುತ್ತಿದ್ದ. ಫೆಬ್ರವರಿ 25 ರಂದು ಆತ ಮಠದಿಂದ ಕಾಣೆಯಾಗಿದ್ದು ಈತನಕ ಪತ್ತೆ ಇಲ್ಲ. ಸ್ವಾಮಿ ನಾಪತ್ತೆಯಾದ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದಂತೆ ಹಿರೆಸಿಗದ ದ್ಯಾವಪ್ಪಗೌಡರು ತಮ್ಮ ಮೊಮ್ಮಗ ಶರತ್ ಕುಮಾರನನ್ನು ಸಂಪರ್ಕಿಸಲು ಪ್ರಯತ್ನಿಸಿದಾಗಲೇ ಈತನೂ ಕಾಣೆಯಾಗಿರುವುದು ಬೆಳಕಿಗೆ ಬಂತು. ಈಗ ಅವರು ಮೂಡಿಗೆರೆ ಪೊಲೀಸ್ ಠಾಣೆಯಲ್ಲಿ ಮೊಮ್ಮಗ ಕಾಣೆಯಾದ ಬಗ್ಗೆ ದೂರು ದಾಖಲಿಸಿದ್ದಾರೆ.

ಸ್ವಾಮೀಜಿ ಮೊದಲೇ ಆ ವಿದ್ಯಾರ್ಥಿಯನ್ನು ಬೇರೆಡೆ ಕಳಿಸಿ ನಂತರ ತಾನೂ ಹೊರಟು ಹೋದನೋ ಅಥವಾ ಆ ವಿದ್ಯಾರ್ಥಿಗೆ ಏನೋ ಮಾಡಿ ಭಯದಿಂದ ಈತ ಓಡಿಹೋದನೋ ಗೊತ್ತಿಲ್ಲ. ಬರುವ ದಿನಗಳಲ್ಲಿ ಈ ಸ್ವಾಮಿಯ ನಗ್ನತೆ ಇನ್ನಷ್ಟು ಅನಾವರಣಗೊಳ್ಳಲಿರುವುದಂತೂ ಸತ್ಯ. ■

ಕಂಟಕವಾಯಿತೆ ಜೀವ ಜಲ

ಎಂಎಸ್‌ಪಿಎಲ್‌ಗೆ ಅನುಮತಿ ಜೊತೆಗೆ ಕಾರ್ಖಾನೆಗೆ ೂಲಭೂತ ಸೌಕರ್ಯ ಹಾಗೂ ರಿಯಾಯತಿಗಳನ್ನೂ ಡಲಾಗಿದೆ. ಸರ್ಕಾರ ನೀಡಲು ಬಯಸಿರುವ ಮೂಲ ೂತ ಸೌಲಭ್ಯಗಳಲ್ಲಿ ಮೊದಲನೆಯದು KIADBಯು 34 ಎಕರೆ ಭೂಮಿಯನ್ನು ರೈತರಿಂದ ಪಡೆದು ರ್ಖಾನೆಗೆ ನೀಡಬೇಕು. ಕಾರ್ಖಾನೆ ನಿರ್ಮಾಣದಿಂದ ರ್ಖಾನೆ ಆರಂಭವಾದ ಮೇಲೂ 20 ಮೆಗಾವ್ಯಾಟ್ ಂಟನ್ನು ಮುನಿರಾಬಾದ್ ವಿದ್ಯುತ್‌ಕೇಂದ್ರ ನೀಡಬೇಕು. ಾಗಲೇ ಕಿರ್ಲೋಸ್ಕರ್ ಮತ್ತು ಕಲ್ಯಾಣಿ ಕಾರ್ಖಾನೆ ತುಂಗಭದ್ರಾ ಜಲಾಶಯದಿಂದ ನೀರು ಪಡೆಯುತ್ತಿವೆ. ೇ ರೀತಿ ಎಂಎಸ್‌ಪಿಎಲ್‌ಗೂ 12.55 ಎಂಜಿಡಿ ಮಾಣದ ನೀರನ್ನು ಕೊಡಬೇಕಂತೆ. ಹೌದು, ೂಲಭೂತ ಸೌಕರ್ಯದ ಹೆಸರಲ್ಲಿ ರೈತರ 1034 ರೆ ಭೂಮಿ, ರೈತನಿಗೆ ಕೊಡದ 20 ಮೆಗಾವ್ಯಾಟ್ ಂಟ್, 12.55 ಮಿಲಿಯನ್ ಗ್ಯಾಲನ್ ನೀರು ಬೇಕಾಬಿಟ್ಟಿ ಬಲ್ಡೋಟಾನಿಗೆ ನೀಡುವುದರ ಹಿಂದಿನ ಗುಟ್ಟೇನು? ಬಲ್ಡೋಟಾನ ಕಾರ್ಖಾನೆ ಆರಂಭವಾದರೆ ಆದರ ಬಾರ್ಡರ್‌ನಿಂದ1 ಕಿ.ಮೀ ಅಂತರದಲ್ಲಿ ನಿರ್ಮಾಣವಾಗುತ್ತಿರುವ 400 ಹಾಸಿಗೆಯ ಆಸ್ಪತ್ರೆಯು ರೋಗಿಷ್ಠವಾಗಲಿದೆ. ಈ ಭಾಗದ ರೈತರಿಗೆ ಜೀವಜಲವಾದ ತುಂಗಭದ್ರಾ ಜಲಾಶಯವನ್ನು ನೆಚ್ಚಿಕೊಂಡೆ ಇಲ್ಲೀಗ ಸ್ಾಲುಸಾಲು ಕಾರ್ಖಾನೆಗಳು ಬರುತ್ತಿವೆ. ನೀರಾವರಿ ಉದ್ದೇಶಕ್ಕೆ ನಿರ್ಮಿಸಿದ ತುಂಗಭದ್ರಾ ಅಣೆಕಟ್ಟು ನೀರು ಈಗ ಕೈಗಾರಿಕೆಗಳಿಗೆ ಬಳಕೆಯಾಗುತ್ತಿದೆ.

ರೈತರ ವಿರೋಧ!

ಉದ್ದೇಶಿತ ಈ ಎಂಎಸ್‌ಪಿಎಲ್ ಕಾರ್ಖಾನೆಗೆ ಭೂಸ್ವಾಧೀನಪಡಿಸಿಕೊಳ್ಳುವ ಕೆಲಸಕ್ಕೆ ಇಲ್ಲಿನ ರೈತರು ಉಗ್ರವಾಗಿ ವಿರೋಧಿಸಿದ್ದಾರೆ. ಅತ್ಯಂತ ಕಡುಬಡವರಿಂದ ಹಿಡಿದು ಆಗರ್ಭ ಶ್ರೀಮಂತರಾದ ತಾಲೇಡಾ, ವಿಜಯ ಮೆಹತಾ, ಅಶ್ವಿನ್ ಜಾಂಗಡಾ, ಗೋಪಾಲಕೃಷ್ಣ ನಗರಿ ಸೇರಿದಂತೆ ಅನೇಕರ ಭೂಮಿಗಳು ಕಾರ್ಖಾನೆಗೆ ವಶವಾಗಲಿದೆ. ಇಲ್ಲಿನ ರೈತರ ಒಗ್ಗಟ್ಟನ್ನು ಕಂಡು ಹೆದರಿರುವ ಬಂಡವಾಳಶಾಹಿಗಳು ಕೆಲ ಬಡ ರೈತರ ಮೂಲಕ ಕಾರ್ಖಾನೆ ಬರಲಿ, ಕಾರ್ಖಾನೆಗೆ ಭೂಮಿ ನೀಡುತ್ತೇವೆ ಎಂದು ಗಿಳಿಪಾಠ ಹೇಳಿಸುತ್ತಿವೆ. ಮೊನ್ನೆ ಎಂಎಸ್‌ಪಿಎಲ್‌ನ ಏಜೆಂಟ್‌ನಂತೆ ಬಂದಿದ್ದ ಧಾರವಾಡದ KIADBಯ ವಿಶೇಷ ಭೂಸ್ವಾಧೀನಾಧಿಕಾರಿ ರಿಸಾಲ್ದಾರ್‌ನಿಗೆ ಭೂಮಿ ನೀಡೋಲ್ಲ ಎಂದು ಸರಿಯಾಗಿ ಹೇಳಿ ಕಳಿಸಿದ್ದಾರೆ. ಒಂದು ಸಾವಿರ ಎಕರೆ ಭೂಮಿ ರೈತರ ಕೈ ತಪ್ಪಿಹೋಗಲಿದೆ ಎಂಬುದನ್ನು ಕೇಳಿಯೇ ಇಲ್ಲಿನ ರಾಜಕೀಯ ವಲಯ ತಲ್ಲಣಗೊಳ್ಳಬೇಕಿತ್ತು. ಆದರೆ ಕಾಂಗ್ರೆಸ್‌ನ ಮಾಜಿ ಶಾಸಕ ಎಂ.ಬಿ. ದಿವಟರ್, ಮಾಜಿ ಎಂಎಲ್‌ಸಿ ಕರಿಯಣ್ಣ ಸಂಗಟಿ, ರುದ್ರ ಮುನಿಗಾಳಿ, ಬಜೆಪಿಯ ರಾಷ್ಟ್ರೀಯ ಸದಸ್ಯ ಪೀರಾ ಹುಸೇನ್ ಹೊಸಳ್ಳಿ ಬಿಟ್ಟರೆ ಉಳಿದವರಿಂದ ಅಂತಹ ಪ್ರತಿಕ್ರಿಯೆ ಬರುತ್ತಿಲ್ಲ. ಮೊನ್ನೆ ವರ್ಷದ ಕೊನೆಯಲ್ಲಿ ಕಾರ್ಖಾನೆ ಬೇಡ ಎಂದು ಒಂದು ಮನವಿ ಕೊಟ್ಟಿದ್ದ ಜೆಡಿಎಸ್‌ನ ಅಧ್ಯಕ್ಷ ಸಂಗಣ್ಣ ಕರಡಿಯ ನಡೆಯೇ ಇಂದಿಗೂ ಅನುಮಾನ ಹುಟ್ಟಿಸುತ್ತಿದೆ.

ಒಂದೆಡೆ ರೈತರ ಭೂಮಿಯನ್ನು ಕಿತ್ತುಕೊಂಡು ಅವರನ್ನು ಬೀದಿಗೆ ತಳ್ಳುವ ಕ್ರೌರ್ಯದ ಜೊತೆಗೆ 3-4 ವರ್ಷಗಳಲ್ಲಿ ಕೊಪ್ಪಳವನ್ನು ಕಾಡಲಿರುವ ಪರಿಸರ ಮಾಲಿನ್ಯದ ಬಗ್ಗೆ ಜಾಗೃತಿ ಮೂಡಿಸಲು ಮಾಜಿ ಶಾಸಕ ಎಂ.ಬಿ. ದಿವಟರ್ ಅಧ್ಯಕ್ಷರಾಗಿ, ವಕೀಲ ಪೀರಾ ಹುಸೇನ್ ಕಾರ್ಯದರ್ಶಿಯಾಗಿ ಪರಿಸರ ರಕ್ಷಣಾ ಹೋರಾಟ ಸಮಿತಿಯನ್ನು ರಚಿಸಿಕೊಂಡಿದ್ದಾರೆ. ಇದಾಗಿ ಬಹಳ ವರ್ಷಗಳೇ ಆಗಿದೆ. ಈಗ ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕಾಗಿ, ಇದೇ 26 ಸೋಮವಾರದಂದು ಕೊಪ್ಪಳ ಬಂದ್ ನಡೆಯಲಿದೆ. ಈ ಬಂದ್ ಯಶಸ್ವಿಯಾಗುವ ಎಲ್ಲಾ ಲಕ್ಷಣಗಳೂ ಕಂಡುಬರುತ್ತಿವೆ. ಇಲ್ಲಿನ ಶಾಸಕ, ಸಂಸದರು ಫೇಟ್ ಬಂಡವಾಳಶಾಹಿಗಳಂತೆ ವರ್ತಿಸುತ್ತಿರುವಾಗ ಇದನ್ನು ತಡೆಯದೇ ಹೋದರೆ ಇನ್ನು ಕೆಲವೇ ದಿನಗಳಲ್ಲಿ ಮತ್ತೆ ಸಾವಿರಾರು ಎಕರೆ ಭೂಮಿ ರೈತರು ಕೈ ತಪ್ಪಲಿದೆ.

-ವರವಿಗಾವ

ನರಭಕ್ಷಕ ಹುಟ್ಟಿಸಿದ ಉತ್ಸಾಹ



ನಾನು ಹೇಗೊ ಅಲ್ಲಿಂದ ತಪ್ಪಿಸಿಕೊಂಡೆ. ಅವನೂ ದಾರಿ ಹುಡುಕಿಕೊಂಡು ಈ ಬಂಗಲೆಯ ಕಡೆ ಬಂದ. ಕರಡಿಯ ಮೇಲೆ ಬಿದ್ದಿದ್ದ ಅವನ ಕಾಲು ಜಖಂ ಆಗಿತ್ತು, ಅದನ್ನು ರಿಪೇರಿ ಮಾಡಿಸಿಕೊಳ್ಳಲು ಈಗವನು ಊರು ಬಿಟ್ಟಿದ್ದಾನೆ. ಸಧ್ಯಕ್ಕೆ ಕೋಸಿ ನದಿಯಲ್ಲಿ ಹಿಡಿಯಲು ಮೀನುಗಳೂ ಇಲ್ಲ ಬಿಡಿ' ಎಂದ.

ಮಧ್ಯಾಹ್ನದ ಹೊತ್ತಿಗೆ ನಾವು ಮುಂದಿನ ಪ್ರಯಾಣಕ್ಕೆ ಸಿದ್ಧರಾದೆವು. ನಮ್ಮ ಸುತ್ತ ಸ್ಥಳೀಯ ಹಾಗೂ ನಮ್ಮನ್ನು ನೋಡಲು; ಹಾರೈಸಲು; ಎಚ್ಚರಿಕೆ ಹೇಳಲು ಜನರ ದಂಡೇ ನೆರೆದಿತ್ತು. ಮುಂದೆ ದಟ್ಟವಾದ ಕಾಡಿದೆ ಎಂದು ಅಲ್ಲಿ ಹೋಗುವಾಗ ಸುತ್ತಮುತ್ತ ಎಚ್ಚರಿಕೆಯಿಂದ ನೋಡಿ ಕೊಂಡು ಹೋಗಬೇಕೆಂದು ಸೂಚನೆಗಳು ಬಂದವು. ನಾವು ಅವರಿಂದ ಬೀಳ್ಕೊಂಡು ಕಾರ್ತ್‌ಕಾನೌಲಾದತ್ತ ನಡೆದೆವು. ಅಲ್ಲಿಗೆ ತಲುಪಲು ನಾವು ನಾಲ್ಕು ಸಾವಿರ ಅಡಿಗಳಷ್ಟು ಕಡಿದನ್ನು ಏರಬೇಕಿತ್ತು.

ಈ ಪ್ರಯಾಣದಲ್ಲಿ ನಮ್ಮ ಪ್ರಗತಿ ತೀರಾ ನಿಧಾನ ವಾಗಿತ್ತು. ನನ್ನ ಜನ ಭಾರಿ ತೂಕದ ಸಾಮಾನುಗಳನ್ನು ಹೊತ್ತಿದ್ದರಲ್ಲದೆ ದಾರಿಯೂ ವಿಪರೀತ ಗೋಜಲಿನದಾಗಿತ್ತು, ಇವೆಲ್ಲದರೊಂದಿಗೆ ಸುಟ್ಟು ಕರಕಲಾಗಿಸುವ ಬಿಸಿಲು-ಧಗೆ. ಇಷ್ಟೊಂದು ಸಾಮಾನು ಸರಂಜಾಮುಗಳ ರಾಶಿಗೆ ಕೆಲವೇ ದಿನಗಳ ಹಿಂದೆ ಇಲ್ಲಿಂದ ಹಿಂತಿರುಗಿದ್ದ ಪೊಲೀಸರ ತುಕಡಿ ಯೊಂದು ಕಾರಣವಾಗಿತ್ತು. ನಾನು ನೈನಿತಾಲನ್ನು ಬಿಡುವಾಗ ಈ ತುಕಡಿ 'ಅಲ್ಲಿ ನಿಮಗೆ ಬೇಕಾದ ಯಾವ ಸಾಮಾನೂ ಸಿಗುವುದಿಲ್ಲ, ನಿಮಗೆ ಬೇಕಾದನ್ನೆಲ್ಲಾ ಇಲ್ಲಿಂದಲೇ ತೆಗೆದುಕೊಂಡು ಹೋಗಬೇಕು' ಎಂದು ಹೇಳಿ ಗಾಬರಿ ಹುಟ್ಟಿಸಿದ್ದರು; ಹಾಗಾಗಿ ನಮ್ಮ ಹೊರೆಗಳು ವಿಪರೀತವಾಗಿದ್ದವು.

ಅನೇಕ ಕಡೆ ನಿಂತು, ಸುಧಾರಿಸಿಕೊಂಡು ಏಗುತ್ತಾ ಸಾಗಿದ ನಾವು ಇಳಿ ಹೊತ್ತಿನ ಸುಮಾರಿಗೆ ಒಂದು ಕೃಷಿ ಪ್ರದೇಶವನ್ನು ತಲುಪಿದೆವು. ಅಲ್ಲಿಂದ ಮುಂದಕ್ಕೆ ನಮಗೆ ನರಭಕ್ಷಕನ ಭೀತಿ ಇರಲಿಲ್ಲ, ಹಾಗಾಗಿ ಅವರನ್ನು ಮುಂದೆ ಕಳುಹಿಸಿ, ಹಳ್ಳಿಯ ಮೂಲಕ ಸಾಗಿ ಮುಂದೆ ನನ್ನನ್ನು ಕೂಡಿಕೊಳ್ಳುವಂತೆ ಹೇಳಿ ನಾನು ಕಾಡಿನ ನಡುವೆ ಕಾಣುತ್ತಿದ್ದ ಗುಡಿಸಲಿನತ್ತ ಸಾಗಿದ್ದ ಕಾಲು ದಾರಿ ಹಿಡಿದು ಹೊರಟೆ.

ಈ ಗುಡಿಸಲು ಮೋಹನದಿಂದಲೂ ಕಾಣುತ್ತಿತ್ತು, ಅಲ್ಲಿ ಸಿಕ್ಕಿದ ಗಾರ್ಡುಗಳು ಕಾರ್ತ್‌ಕಾನೌಲಾದಲ್ಲಿ ನಾನು ಉಳಿಯಲು ಇದು ಸೂಕ್ತವಾದ ಜಾಗವೆಂದು ಹೇಳಿದ್ದರು.

ಈ ಗುಡಿಸಲು ಎತ್ತರದ ಕಣಿವೆಯ ಮೇಲೆ ಮೋಹನದ ಕಡೆ ಮುಖ ಮಾಡಿ ಕುಂತಿತ್ತು, ನಾನು ಪರ್ವತದುದ್ದಕ್ಕೂ ಕಣಿವೆಯ ನೆತ್ತಿಯಲ್ಲಿಯೇ ಹರಿಯುವ ದಾರಿಯನ್ನು ಹಿಡಿದು ಗುಡಿಸಲಿನ ಕಡೆಗೆ ಸಾಗಿದ್ದೆ. ಈ ಮಾರ್ಗ ಮಧ್ಯದಲ್ಲಿ ಒಂದು ತಿರುವು ಸಿಕ್ಕಿತು, ಈ ತಿರುವಿನಿಂದ ಸ್ವಲ್ಪ ತಗ್ಗಿನಲ್ಲಿ ದಟ್ಟವಾದ ಕಾಡು ಹಬ್ಬಿತ್ತು, ಅಲ್ಲಿ ಒಬ್ಬ ಹೆಂಗುಸು ಮೇಲಿನಿಂದ ಸಣ್ಣಗೆ ಸುರಿಯುತ್ತಿದ್ದ ನೀರನ್ನು ಕೊಡಕ್ಕೆ ತುಂಬಿಸಿಕೊಳ್ಳುತ್ತಿದ್ದಳು. ನಾನು ನಿಧಾನವಾಗಿ ತಗ್ಗನ್ನು ಇಳಿದು ಕಾಡನ್ನು ಸೀಳಿಕೊಂಡು ಆಕೆಯತ್ತ ನಡೆದೆ. ರಬ್ಬರಿನ ಅಟ್ಟೆಯ ನನ್ನ ಬೂಟಿನ ಸದ್ದು ತೀರಾ ಹತ್ತಿರಾಗುವವರೆಗೂ ಸಾಮಾನ್ಯವಾಗಿ ಕೇಳುತ್ತಿರಲಿಲ್ಲ, ನಾನು ಆಕೆಗೆ ತೀರಾ ಸಮೀಪಗತನಾದೆ. ಆಗ ಆಕೆ ಬೆಚ್ಚಿಬಿದ್ದು ಹಿಂತಿರುಗಿ ನೋಡಿದಳು. ಅಲ್ಲಿ ನನ್ನನ್ನು ಕಂಡವಳೇ ಹಾಗೆ ಸದ್ದಿಲ್ಲದೆ ಬಂದುದಕ್ಕೆ ನನ್ನ ಮೇಲೆ ಎಗರಿಬಿದ್ದಳು. ಅವಳ ಬೈಗುಳದ ರಭಸಕ್ಕೆ ಅವಳಿಂದ ಕೆಲವೇ ಗಜಗಳ ದೂರದಲ್ಲಿದ್ದ ನಾನು ಸಿಗರೇಟನ್ನು ಆರಿಸಿ, ಸುಮ್ಮನೆ ನಿಂತೆ. ಸುಮಾರು ಹೊತ್ತು ಬೈದ ಅವಳು ಸುಮ್ಮನಾದಳು. ಸ್ವಲ್ಪ ಸಮಯದ ನಂತರ ಅವಳತ್ತ ತಿರುಗದೆ ನಾನು ಕೇಳಿದೆ 'ಈ ನಿರ್ಜನ ಪ್ರದೇಶ ಯಾರಿಗಾದರೂ ಕ್ಷೇಮವೇ?' ಸ್ವಲ್ಪ ಹೊತ್ತಿನ ಮುಜುಗರದ ನಂತರ ಆಕೆ 'ಇಲ್ಲ, ಆದರೆ ಮನೆಗೆ ನೀರು ತುಂಬಲೇ ಬೇಕಲ್ಲ, ಮನೆಯಲ್ಲಿ ನನ್ನ ಜೊತೆ ಬರಲು ಯಾರೂ ಇಲ್ಲ ಹಾಗಾಗಿ ನಾನೊಬ್ಬಳೇ ಬಂದಿದ್ದೇನೆ' ಎಂದಳು.

ಮನೆಯಲ್ಲಿ ಯಾರೂ ಇಲ್ಲವೇ?

ಇದ್ದಾರೆ! ಒಬ್ಬ ಗಂಡಸು, ಅವರು ಹೊಲ ಉಳಲು ಹೋಗಿದ್ದಾರೆ. ಆದರೇನು, ನೀರು ತುಂಬುವುದು ಹೆಂಗುಸರ ಕೆಲಸ ತಾನೇ? ಎಂದಳು.

ಸ್ವಲ್ಪ ಹೊತ್ತಿನಲ್ಲಿ ಅವಳ ಸಿಟ್ಟು ಸಂಕೋಚಗಳು ಕಡಿಮೆಯಾಗಿದ್ದವು. ಈಗ ನಾನು ಅವಳ ತನಿಖೆಗೆ ಒಳಗಾಗಬೇಕಾಯಿತು.

ನೀನೇನು ಪೊಲೀಸಿನವನೇ ?

ಅಲ್ಲ!

ಅರಣ್ಯಾಧಿಕಾರಿಯೋ?

ಅಲ್ಲ!

ಮತ್ತೆ ನೀನ್ಯಾರು?

ನಾನು ಕೇವಲ ಒಬ್ಬ ಮನುಷ್ಯ!

ಇಲ್ಲಿಗೇಕೆ ಬಂದಿದ್ದೀಯ?

ನರಭಕ್ಷಕನನ್ನು ಕೊಂದು ಕಾರ್ತ್‌ಕಾನೌಲಾ ಜನಕ್ಕೆ ಸಹಾಯ ಮಾಡಲು!!

ನೀನು ಈ ನರಭಕ್ಷಕನ ಬಗ್ಗೆ ಎಲ್ಲಿ ಕೇಳಿದೆ?

ನೀನೊಬ್ಬನೇ ಏಕೆ ಬಂದಿದ್ದೀಯ?

ನಿನ್ನ ಜನರೆಲ್ಲಿ? ಅವರೆಷ್ಟು ಜನ ಇದ್ದಾರೆ.

ನೀನಿನ್ನೂ ಎಷ್ಟು ದಿನ ಇಲ್ಲಿರುತ್ತೀಯ? ಹೀಗೆ ಅವಳ ಪ್ರಶ್ನೆಗಳ ಸರಣಿ ಮುಂದುವರೆದಿತ್ತು.

ಅವಳ ಕುತೂಹಲ ತಣಿಯುವವರೆಗೆ ಅವಳ ಕೊಡವೂ ತುಂಬುತ್ತಿಲ್ಲ, ಕೊನೆಗೆ ನಾನು ಮುಂದೆ ನಡೆದೆ, ಆಕೆ ನನ್ನನ್ನು ಹಿಂಬಾಲಿಸಿದಳು. ಸ್ವಲ್ಪ ದೂರ ಬಂದಮೇಲೆ ದಕ್ಷಿಣದ ಇಳಿಜಾರಿನ ಕಡೆಗಿದ್ದ ಹಲವು ಕಂದರಗಳತ್ತ ಕೈಮಾಡಿ ಅದರಲ್ಲಿ ಒಂದು ಕಂದರದ ದಂಡೆಯಲ್ಲಿ ದಟ್ಟವಾದ ಹುಲ್ಲುಗಾವಲಿನ ನಡುವೆ ಎತ್ತರಕ್ಕೆ ಬೆಳೆದಿ ಮರವೊಂದನ್ನು ತೋರಿಸುತ್ತಾ... 'ಅಲ್ಲಿ ಮೂರು ದಿನಗ ಹಿಂದೆ ಆ ನರಭಕ್ಷಕ ಒಬ್ಬ ಹೆಂಗಸನ್ನು ಹಿಡಿದು ತಿಂದ ಹಾಕಿತ್ತು' ಎಂದು ಹೇಳಿದಳು. ನಾನು ಆ ಮರವ ಗುರುತಿಟ್ಟುಕೊಂಡೆ. ಅದು ನಾನು ಹೋಗಲಿದ್ದ ಗುಡಿಸ ನಿಂದ ಇನ್ನೂರು-ಮುನ್ನೂರು ಗಜಗಳ ದೂರದಲ್ಲಿತ್ತು ಆಕೆ ಹೇಳಿದಳು 'ನಮ್ಮ ಹಳ್ಳಿ ಹೀಗೆ ಬಳಸಿಹೋದ ಇದೇ ಪರ್ವತದ ಭುಜ ಮಟ್ಟದಲ್ಲಿ ಮುಂದಿನ ತಿರುವಿನ ಇದೆ, ಇಲ್ಲಿಂದ ನನಗೆ ಭಯವಿಲ್ಲ.... ನಾನು ಸುರಕ್ಷಿ ಎಂದು.

ಭಾರತದ ಮಹಿಳೆಯರ ಬಗ್ಗೆ ತಿಳಿವಳಿಕೆ ಇರು ನಿಮ್ಮಲ್ಲಿ ಯಾರಿಗಾದರೂ ಅನ್ನಿಸಬಹುದು ನಾನು ನ ಹೊಣೆಗಾರಿಕೆಯನ್ನು ಸಮರ್ಥವಾಗಿ ಪೂರೈಸಿದ್ದೇನೆಂದು ಬಹಳ ಮುಖ್ಯವಾಗಿ ಕೆಲವು ದಿನಗಳ ಹಿಂದೆ ಇ ಬಡಾರ ಹೂಡಿದ್ದ ಪೊಲೀಸರಿಂದ ಸಂಭವಿಸಿದ್ದ ಕೆಲ ತೊಂದರೆಗಳಿನ್ನೂ ಅವರ ನೆನಪಿನಲ್ಲಿದ್ದಾಗ, ಸದ್ಯಕ್ಕೆ ಆಕೆಯನ

ಭೈರಪ್ಪನವರ ಭಜರಂಗಿ ಇತಿಹಾಸ


ಡಾ.ಎಸ್.ಎಲ್. ಭೈರಪ್ಪನವರು ಇತ್ತೀಚೆಗೆ ಬರೆದ ಕಾದಂಬರಿ 'ಆವರಣ' ದಾಖಲೆ ಮಾರಾಟವಾಗಿ ಸುದ್ದಿ ಮಾಡಿತು. ಈ ಬಗ್ಗೆ ವಿಜಯ ಕರ್ನಾಟಕ ದಿನಪತ್ರಿಕೆ ಕಾದಂಬರಿಯ ಮುನ್ನುಡಿಯನ್ನು ಪ್ರಕಟಿಸಿ ಭೈರಪ್ಪನವರ ವಿಶೇಷ ಸಂದರ್ಶನವನ್ನೂ ಮುದ್ರಿಸಿತು. ಇವಿಷ್ಟರಲ್ಲಿ ಪ್ರಕಟವಾದ ವಿಚಾರಗಳ ಕುರಿತಷ್ಟೇ ಪ್ರತಿಕ್ರಿಯೆ ಈ ಲೇಖನ.

"ನಿಜ ಮತ್ತು ಸುಳ್ಳುಗಳ ಸಮಸ್ಯೆಯನ್ನು ತತ್ವದ ಮಟ್ಟಕ್ಕೆ ಎತ್ತರಿಸಿ ವಿವರಿಸಿರುವುದು ಭಾರತೀಯ ದರ್ಶನಶಾಸ್ತ್ರದ ವೈಶಿಷ್ಟ"- ಎಂಬುದಾಗಿ ಭೈರಪ್ಪನವರು ಉದ್ಘೋಷಿಸುತ್ತಾರೆ. ಆದರೆ ಈ ಸಮಸ್ಯೆ ಅರಿಸ್ಟಾಟಲ್‌ನ **De Interpretation** ನಿಂದಲೇ ಆರಂಭವಾಗುತ್ತದೆ. ಥೇಲಿಸ್, ಸಾಕ್ರೆಟಿಸ್ ಕೂಡಾ ಈ ಸಮಸ್ಯೆಯನ್ನು ವಿಶ್ಲೇಷಿಸಿದ್ದಾರೆ. ಸತ್ಯದ ಕುರಿತಾಗಿ **correspondence theory, coherence theory** ಇತ್ಯಾದಿ ನಾನಾ ಸಿದ್ಧಾಂತಗಳು ಪಶ್ಚಿಮದಲ್ಲಿದೆ. ನೂರಾರು ತತ್ವಜ್ಞಾನಿಗಳು ನಿಜ ಮತ್ತು ಸುಳ್ಳುಗಳ ಸಮಸ್ಯೆಗಳ ಬಗ್ಗೆ ದಾರ್ಶನಿಕ ಚಿಂತನೆ ನಡೆಸಿದ್ದಾರೆ. ಹಾಗೆ ನೋಡಿದರೆ ಮತಧರ್ಮದಿಂದ ಮುಕ್ತವಾದ ದಾರ್ಶನಿಕ ಪರಂಪರೆ ಪಾಶ್ಚಾತ್ಯರಲ್ಲಿಯೇ ಹೆಚ್ಚು ಪ್ರಖರವಾಗಿದೆ. ಆದರೆ ತಮ್ಮ 'ಬುದ್ಧಿ' ಬೆಳೆದಿದೆಯೆಂದು ಗಾಢವಾಗಿ ನಂಬಿಕೊಂಡಿರುವ ಭೈರಪ್ಪನವರು "ನನಗೆ ಬುದ್ಧಿ ಬೆಳೆದಾಗಿನಿಂದ ನನ್ನನ್ನು ಕಾಡುತ್ತಿರುವ ಪ್ರಶ್ನೆ" ಎಂದು ತಮ್ಮ ಸಂಕಟವನ್ನು ತೋಡಿಕೊಂಡಿದ್ದಾರೆ.

ಭೈರಪ್ಪನವರು ಓದುಗರನ್ನು ಎಷ್ಟೊಂದು ಮೂರ್ಖರು ಎಂದು ಭಾವಿಸುತ್ತಾರೆ ಎಂದರೆ-ಅವರ ಈ ಕೆಳಗಿನ ಹೇಳಿಕೆಯನ್ನು ಗಮನಿಸಿ:

"ಸತ್ಯವನ್ನು ಮರೆಮಾಚುವ ಕಾರ್ಯಕ್ಕೆ ಆವರಣವೆಂದೂ, ಅಸತ್ಯವನ್ನು ಬಿಂಬಿಸುವ ಕಾರ್ಯಕ್ಕೆ ವಿಕ್ಷೇಪವೆಂದೂ ಹೆಸರು. ವ್ಯಕ್ತಿಯ ಮಟ್ಟದಲ್ಲಿ ನಡೆಯುವ ಈ ಕ್ರಿಯೆಯನ್ನು ಅವಿದ್ಯೆಯೆಂದೂ ಸಮೂಹದ ಮತ್ತು ಜಗತ್ತಿನ ಮಟ್ಟದಲ್ಲಿ ನಡೆಯುವ ಕ್ರಿಯೆಯನ್ನು ಮಾಯೆಯೆಂದೂ ಕರೆಯುತ್ತಾರೆ. ವೇದಾಂತಿಗಳು ಹೇಳುವ ಈ ಪರಿಕಲ್ಪನೆಗಳನ್ನು ಬೌದ್ಧದಾರ್ಶನಿಕರೂ ಒಪ್ಪಿದ್ದಾರೆ. ಆದರೆ ಅವರು ಅದನ್ನು ಸಂವೃತಿ ಎಂದು ಕರೆಯುತ್ತಾರೆ."

ವೇದಾಂತದಲ್ಲಿ-ಮಾಯೆ, ಅವಿದ್ಯೆ, ಅಜ್ಞಾನ, ಅಧ್ಯಾಸ, ಅಧ್ಯಾರೋಪ, ವಿವರ್ತ, ಭ್ರಾಂತಿ, ಭ್ರಮೆ ಸದಸದನಿರ್ವಚನೀಯತಾ-ಇತ್ಯಾದಿ ಶಬ್ದಗಳನ್ನು ಹೆಚ್ಚುಕಡಿಮೆ ಸಮಾನಾರ್ಥದಲ್ಲಿ ಉಪಯೋಗಿಸಲಾಗುತ್ತದೆ. 'ಆವರಣ' ಮತ್ತು 'ವಿಕ್ಷೇಪ'ವೆಂಬುದು ಮಾಯೆಯ ಕುರಿತು ಶಂಕರಾಚಾರ್ಯರ ವಿಚಾರವಾಗಿದೆ. ಮಾಯೆಯು ಅಭಾವ ರೂಪವೂ ಹೌದು; ಭಾವರೂಪವೂ ಹೌದು. ಅದರ ಅಭಾವ ಪಕ್ಷ 'ಆವರಣ'ವಾದರೆ, ಭಾವ ಪಕ್ಷ 'ವಿಕ್ಷೇಪ'. ವೇದಾಂತಕ್ಕೆ ಭಿನ್ನ ಭಿನ್ನ ಪರಸ್ಪರ ವಿರೋಧಿಯಾದ ನಾನಾ ಶಾಖೆಗಳಿವೆ. ಆದರೆ 'ಮಹಾನ್ ದಾರ್ಶನಿಕ' ಭೈರಪ್ಪನವರಿಗೆ ವೇದಾಂತವೆಂದರೆ ಅವರು ಏನು ಹೇಳುತ್ತಾರೊ ಅದುವೇ ವೇದಾಂತದ ಸಾರ. ಮಾಯೆಯೇ ಅವಿದ್ಯೆ, ಅದುವೇ ವಿವರ್ತ, ಅದುವೇ ಅಧ್ಯಾಸ. ಅದು ಬ್ರಹ್ಮನ ಅಭಿನ್ನ ಶಕ್ತಿ. ಮಾಯೆಯ ಆವರಣ ಮತ್ತು ವಿಕ್ಷೇಪ ಶಕ್ತಿಗಳ ಕಾರಣದಿಂದಾಗಿ ಬ್ರಹ್ಮನ ವಾಸ್ತವಿಕ ಸ್ವರೂಪ ಅಡಗಿಕೊಂಡಿರುತ್ತದೆ. ಇವೆರಡೂ ರೂಪಗಳು ಒಂದಕ್ಕೊಂದು ಪೂರಕ. ಆವರಣ ಶಕ್ತಿ ತಮೋರೂಪವಾದರೆ ವಿಕ್ಷೇಪ ರಜೋರೂಪ.-ಹೀಗೆ ನಾನಾ ರೀತಿಯ ವಿಶ್ಲೇಷಣೆಗಳಿವೆ. ಆದರೆ ಭೈರಪ್ಪನವರು ತಮ್ಮದೇ ಒಂದು ಅರ್ಥಕೊಟ್ಟು ಅದನ್ನೊಂದು ಬದುಕಿನ ಸಮಸ್ಯೆಯೆಂದು ಭಾವಿಸಿ ಚಿಂತಿಸಿ ಚಿಂತಿಸಿ 'ಭಯಾನಕ'ವಾದ 'ಆವರಣ' ಎಂಬ ಕಾದಂಬರಿಯನ್ನು ಬರೆಯುವಲ್ಲಿ ಸಫಲರಾಗಿದ್ದಾರೆ.



ಸುಳ್ಳು ಹೇಳುವಲ್ಲಿ ಗೋಬೆಲ್ಸ್ ಜಗದ್ವಿಖ್ಯಾತ. ಆದರೆ ಎಸ್.ಎಲ್. ಭೈರಪ್ಪ ಆತನ ಕೌಶಲಗಳನ್ನು ತಮ್ಮದಾಗಿಸಿಕೊಳ್ಳುವಲ್ಲಿ ನಿಸ್ಸೀಮರಲ್ಲದಿದ್ದರೂ ಸಾಕಷ್ಟು ಅಭ್ಯಾಸ ಮಾಡಿದ್ದಾರೆ. ಏಕೆಂದರೆ, ಮೇಲಿನ ಹೇಳಿಕೆಯನ್ನೇ ಪುನಃ ಗಮನಿಸಿ. ಮಾಯೆಯ ಬಗ್ಗೆ "ವೇದಾಂತಿಗಳು ಹೇಳುವ ಕಲ್ಪನೆಯನ್ನು ಬೌದ್ಧದಾರ್ಶನಿಕರೂ ಒಪ್ಪಿದ್ದಾರೆ. ಆದರೆ ಅವರು ಅದನ್ನು 'ಸಂವೃತಿ' ಎಂದು ಕರೆಯುತ್ತಾರೆ." 'ಮಾಯೆ'ಯ ವಿಶ್ಲೇಷಣೆ ಮಾಡಿದವರು ವೇದಾಂತಿ ಶಂಕರ. ಆತನ ವಾದವನ್ನೇ 'ಮಾಯಾವಾದ,' 'ವಿವರ್ತವಾದ' ಎಂದು ಕರೆಯುತ್ತಾರೆ. ಆತನ ಕಾಲ 8 ನೆಯ ಶತಮಾನ. ನಾಗಾರ್ಜುನ ತನ್ನ 'ಮಾಧ್ಯಮಿಕ ಕಾರಿಕೆ'ಯಲ್ಲಿ 'ಸಂವೃತಿ'ಯ ಪ್ರಸ್ತಾಪ ಮಾಡಿದ್ದು 1 ನೆಯ ಶತಮಾನದಲ್ಲಿ! 8 ನೆಯ ಶತಮಾನದಲ್ಲಿ ವೇದಾಂತಿಗಳು ಹೇಳಿದ್ದನ್ನು 1 ನೇ ಶತಮಾನದ ನಾಗಾರ್ಜುನ ಒಪ್ಪಿದ್ದಾನೆ! ಇದೆಂತಹ ಚೋದ್ಯ! ಪ್ರಾಯಶಃ ಯಾವುದೋ 'ನಾಯಿ ನೆರಳು' ಬಿದ್ದಿರಬೇಕು.

ಇನ್ನು ಭೈರಪ್ಪನವರು ತಮ್ಮ ವಿಶೇಷ ಸಂದರ್ಶನದಲ್ಲಿ ಹೇಳಿದ ಮಾತುಗಳನ್ನು ಗಮನಿಸಿ: "ಭಾರತೀಯ ಪರಂಪರೆಯ ಯಾವ ರಾಜನೂ ತಾನು ಗೆದ್ದ ರಾಜ್ಯದ ಮೇಲೆ ತನ್ನ ಧರ್ಮ ಮತ್ತು ಸಂಸ್ಕೃತಿಯನ್ನು ಹೇರಿಲ್ಲ, ಅಲ್ಲಿಯ ಹೆಂಗುಸರ ಮೇಲೆ ಅತ್ಯಾಚಾರ ಮಾಡಿಲ್ಲ, ಭಾರತೀಯ ಧರ್ಮವಂತೂ ಇದನ್ನು ಕಟ್ಟುನಿಟ್ಟಾಗಿ ನಿಷೇಧಿಸಿದೆ. ಆದರೂ ಅಲ್ಲೊಂದು ಇಲ್ಲೊಂದು ಇದರ ಉಲ್ಲಂಘನೆಯಾಗಿರಬಹುದು. ಆದರೆ ಭಾರತದಲ್ಲಿ ಯುದ್ಧ ಮಾಡಿ ಗೆದ್ದ ಪ್ರತಿಯೊಬ್ಬ ಮುಸಲ್ಮಾನ ದಾಳಿಕೋರನೂ ಇದಕ್ಕೆ ವಿರುದ್ಧವಾದುದನ್ನೇ ಮಾಡಿದ್ದಾನೆ."

ಆನಂತರ ಭೈರಪ್ಪನವರು ಕಾಳಿದಾಸನ ರಘುವಂಶ ಕಾವ್ಯವನ್ನು ಎತ್ತಿಕೊಂಡು ರಾಜಧರ್ಮವನ್ನು ವಿವರಿಸುತ್ತಾರೆ. ಆಮೇಲೆ ಕೌಟಿಲ್ಯನ ಅರ್ಥಶಾಸ್ತ್ರದ ರಾಜಲಕ್ಷಣಗಳನ್ನು ವಿವರಿಸುತ್ತಾರೆ. ತದನಂತರ ಡಾ. ಎಚ್.ಪಿ. ರಂಗಾಚಾರ್ ಬರೆದ 'ಹೆರದೋತನ ಸಮರ ಕತೆಗಳು' ಎಂಬ ಪುಸ್ತಕವನ್ನೆತ್ತಿಕೊಂಡು ಮೇಲೆ ಕೊಟ್ಟ ಹೇಳಿಕೆಗೆ ಸಂಬಂಧಪಡದ ಅನಗತ್ಯ ವಿವರಗಳನ್ನು ಕೊಡುತ್ತಾರೆ. ಇದು ಭೈರಪ್ಪನವರ ವಿಲಕ್ಷಣ ಕೌಶಲ. ಮೂರ್ಖರು ಇದನ್ನು ಅಧಿಕೃತ ಸಮರ್ಥನೆಯೆಂದು ಗ್ರಹಿಸುತ್ತಾರೆ. ಕಾವ್ಯಗ್ರಂಥಗಳನ್ನೆ ಇತಿಹಾಸ ಗ್ರಂಥಗಳೆಂದು ಭೈರಪ್ಪನವರು ಗುಟ್ಟಾಗಿ ನಂಬಿಕೊಂಡಂತೆ ಕಾಣಿಸುತ್ತದೆ.

ಹಾಗಿದ್ದರೆ, ರಘುವಂಶ, ವಲ್ಲಭದೇವ ಮಾತ್ರ ಏಕೆ ರಾಮಾಯಣ, ಮಹಾಭಾರತ, ಪುರಾಣಗಳನ್ನೆಲ್ಲಾ ತೆಗೆದ ಕೊಳ್ಳಬಹುದಲ್ಲ. ಹಿಂದೂ ಧರ್ಮವು ಪ್ರಾಚೀ ಕಾಲದಿಂದಲೂ ಇದೆ ತಾನೆ! ಮಹಾವಿಷ್ಣು ಮತ್ತೆ ಮ ಈ ಪವಿತ್ರ ಭೂಮಿ ಭಾರತದಲ್ಲಿ (ಬೇರೆ ದೇಶಗ ಪರಿಚಯ ಅವನಿಗಿರಲಿಲ್ಲ; ಪಾಪ, ಆ ಮಾತು ಬೇ ಜನ್ಮವೆತ್ತಿ ಅಸುರ-ರಾಕ್ಷಸರೊಡನೆ ಹಿಂಸಾತ್ಮಕ ಸಂಘರ್ಷ ಯುದ್ಧ ನರಮೇಧ ಮಾಡಿದ ಸಂಭಾವಿತ. ಅಸುರ ನ್ಯಾಯೋಚಿತ ಹಕ್ಕುಗಳನ್ನು ಕೂಡ ಕಸಿದುಕೊಂಡವ (ಸಮು ಮಥನ). ಇಂದ್ರನಂತವನೇನಾದರೂ ಈ ಕಲಿಯುಗದ ಇರುತ್ತಿದ್ದರೆ ಅವನಿಗೆ ನ್ಯಾಯಾಲಯ ಮರಣದಂಡನೆಯನ್ನ ವಿಧಿಸುತ್ತಿತ್ತು. ಮರ್ಯಾದಾ ಪುರುಷೋತ್ತಮ ರಾ ಶಂಬೂಕನನ್ನು, ದಲಿತನನ್ನು ಕೊಂದ, ಸ್ತ್ರೀಯರ ಮೇ ಅತ್ಯಾಚಾರ ಮಾಡಿದ (ಶೂರ್ಪನಖಿ, ಸೀತೆ). ಮಹಾಭಾರತ ಕೃಷ್ಣನಂತೂ ಎಲ್ಲಾ ಅತಿರಥ ಮಹಾರಥಿಗಳನ್ನು ಕೊಲ್ಲಿಸಿದ ಮೋಸವಂಚನೆಯ ಪರಾಕಾಷ್ಠೆಯಿಂದಲೇ. ತನ್ನ ಅಪ್ಪ ಕೊಲೆಗೆ ಪ್ರತೀಕಾರವಾಗಿ ಪರಶುರಾಮನೆಂಬೊಬ್ಬ ಹು 21 ಸಾರಿ ಭೂಮಂಡಲ ಸುತ್ತಿ ಸಿಕ್ಕಸಿಕ್ಕ ನಿರಪರಾ ಕ್ಷತ್ರಿಯರನ್ನೆಲ್ಲ ಕೊಂದ. ಆತ ಪುರಾಣ ಯುಗದ ಹಿಟ್ಲರ್ ಆ ಪರಶುರಾಮನ 'ನಾಯಿ ನೆರಳು' ಆಧುನಿ ಯುಗದಲ್ಲಿ ಮೋದಿಯ ಮೇಲೆ ಬಿದ್ದು ಭೈರಪ್ಪನವರಿ ಅತೀವ ತಂಪನ್ನೀಯುತ್ತಿರುವ ಕಾರಣ ಶ್ರೀಮಾನ್ ಭೈರಪ್ಪನವರಿಗೆ ಭಾರತೀಯ ಪರಂಪರೆ ಅತ್ಯದ್ಭುತವಾಗಿ ಕಾಣಿಸುತ್ತದೆ: "ಅಲ್ಲಿಯ ಹೆಂಗಸರ ಮೇಲೆ ಅತ್ಯಾಚಾರ ಮಾಡಿಲ್ಲ, ಭಾರತೀಯ ಧರ್ಮವಂತೂ ಇದನ್ನು ಕಟ್ಟುನಿಟ್ಟಾ ನಿಷೇಧಿಸಿದೆ." ಗುಜರಾತ್ ಹಾಗೂ ಗುಜರಾತ್‌ನಂತ ಇನ್ನಿತರ ಪ್ರದೇಶಗಳಲ್ಲಿ ನಡೆದ ಗ್ಯಾಂಗ್ ರೇಪ್ ಮಾಸ್‌ರೇಪ್, ಪೆಟ್ರೋಲ್ ಹಾಕಿ ಬೆಂಕಿ ಕೊಡುವುದ ಪ್ರಾಯಶಃ ಭೈರಪ್ಪನವರ ಪ್ರಕಾರ ಎಡಪಂಥೀಯ ಇತಿಹಾಸಕಾರರ ಕಪೋಲಕಲ್ಪನೆ ಅಥವಾ 'ಮಾಯೆ ಇರಲಿ, ಭೈರಪ್ಪ ಹೇಳುವ ಹಾಗೆ ಭಾರತೀಯ ಪರಂಪರೆಯ ಯಾವ ರಾಜನೂ ತಾನು ಗೆದ್ದ ರಾಜ್ಯದ ಮೇಲೆ ತ ಧರ್ಮ ಮತ್ತು ಸಂಸ್ಕೃತಿಗಳನ್ನು ಹೇರಿಲ್ಲ, ಅಲ್ಲವೆ ನೋಡೋಣ:

ಆರನೆಯ ಶತಮಾನದಿಂದಲೂ ದಕ್ಷಿಣ ಭಾರ ಜೈನ ಮತ್ತು ಬೌದ್ಧರ ಮೇಲೆ ಶೈವರು ಮತ್ತು ವೈಷ್ಣವರು ಮಾಡಿದ ಹಿಂಸಾತ್ಮಕ ಆಕ್ರಮಣಗಳಿಗೆ ಲೆಕ್ಕವಿದೆಯ

ಕ್ಷಕನ ಪ್ರದೇಶದಲ್ಲಿ ಒಂಟಿಯಾಗಿ ಓಡಾಡುವ ಯದ ಬಗ್ಗೆ ಎಚ್ಚರಿಸುವ ಮೂಲಕ, ಆಕೆಯು ಕೊಡ ಬುವವರೆಗೂ ಬೆಂಗಾವಲಾಗಿ ನಿಲ್ಲುವ ಮೂಲಕ ೂ ಆಕೆಯ ಕೆಲವು ಕುತೂಹಲದ ಪ್ರಶ್ನೆಗಳಿಗೆ ಧಾನದಿಂದ ಉತ್ತರಿಸುವ ಮೂಲಕ ನಾನು ಆಕೆಯ ಸದೊಂದಿಗೆ ಅತ್ಯಂತ ಕಡಿಮೆ ಅವಧಿಯಲ್ಲಿ ಇಡೀ ಯ ವಿಶ್ವಾಸವನ್ನು ಗಳಿಸಿದ್ದೆ. ಯಾವ ಸರ್ಕಾರಿ ಾರಿಯಾಗಿಲ್ಲದಿದ್ದರೂ ಸಹ ನನ್ನ ಏಕೈಕ ಉದ್ದೇಶ ಕ್ಷಕನ ಭೀತಿಯಿಂದ ಅವರನ್ನು ಮುಕ್ತಗೊಳಿಸುವುದಾಗಿದೆ ುದನ್ನು ಮನದಟ್ಟು ಮಾಡಿಸುವಲ್ಲಿ ಯಶಸ್ವಿಯಾಗಿದ್ದೆ.

ಇಲ್ಲಿದ್ದ ಗುಡಿಸಲು ಸ್ಥಳೀಯ ಫಾರೆಸ್ಟರ್‌ನ ವಸತಿ ಗಿತ್ತು. ಇದನ್ನು ರಸ್ತೆಯಿಂದ ಇಪ್ಪತ್ತು ಗಜ ಮೇಲಿದ್ದ ದ ಮೇಲೆ ಕಟ್ಟಲಾಗಿತ್ತು. ಬಾಗಿಲಿಗೆ ಒಂದು ಳಿಯನ್ನು ತೊಡರಿಸಲಾಗಿತ್ತು. ನಾನು ಅದನ್ನು ಬಿಚ್ಚಿ ೆ ಹೋದೆ. ಅದರ ಒಳಾಂಗಣ ವಿಶಾಲವಾಗಿತ್ತು ತ್ತಿ ಸ್ವಚ್ಛವಾಗಿತ್ತು. ಆದರೆ ಏನೋ ಒಂದು ಬಗೆ ಟು ವಾಸನೆ ಹೊಡೆಯುತ್ತಿತ್ತು. ಕಾರಣ, ಇದನ್ನು ನರಭಕ್ಷಕನ ಹಾವಳಿ ಶುರುವಾದ ಹದಿನೆಂಟು ಳುಗಳಿಂದ ಯಾರೂ ಬಳಸಿಲ್ಲ ಎಂಬುದು ಆಮೇಲೆ ುತು. ಗುಡಿಸಲಿನ ಎರಡೂ ಇಳಿಜಾರಿನ ಕೆಳಗೆ ೋಡೆಗಳನ್ನು ಹಾಕಿ ವಿಭಾಗಿಸಲಾಗಿತ್ತು. ಒಂದು ವನ್ನು ಅಡುಗೆ ಮನೆಯಾಗಿ ಬಳಸುತ್ತಿದ್ದರೆ ಇನ್ನೊಂದು ವನ್ನು ಸೌದೆ ಒಟ್ಟಲು ಬಳಸಲಾಗುತ್ತಿತ್ತು. ಇದು ಜನರ ವಾಸ್ತವ್ಯಕ್ಕೆ ಸುರಕ್ಷಿತವಾಗಿ, ಸಾಕಾಗುತ್ತಿತ್ತು. ರ ಹಿಂಭಾಗಕ್ಕೂ ಒಂದು ಬಾಗಿಲಿತ್ತು. ಅದನ್ನು ತೆರೆದರೆ ತದ ಮೇಲಿಂದ ತೂರಿದ ತಂಗಾಳಿ ಗುಡಿಸಲನ್ನೆಲ್ಲಾ ಿ ಮುದಗೊಳಿಸುತ್ತಿತ್ತು. ನಾನು ಗುಡಿಸಲನ್ನು ಅವರಿಗೆ ್ಟಿ ಹೊರಬಂದು ನನಗಾಗಿ ಒಂದು ಜಾಗ ುಕಿಕೊಂಡೆ. ರಸ್ತೆಗೂ ಗುಡಿಸಲಿಗೂ ನಡುವೆ ನನ್ನ ಪೌಂಡ್ ಟೆಂಟನ್ನು ಹೂಡುವುದೆಂದು ನಿರ್ಧರಿಸಿದೆ. ಯಾವುದೇ ಪೀಠೋಪಕರಣಗಳಿರಲಿಲ್ಲ, ಆದ್ದರಿಂದ ಬಂದು ಅಂಚಿನಲ್ಲಿದ್ದ ಕಲ್ಲಿನ ಮೇಲೆ ಕೂತು, ನನ್ನ ಿಗಾಗಿ ನಿರೀಕ್ಷಿಸತೊಡಗಿದೆ.

ನಾನು ಕುಳಿತಿದ್ದ ಕಣಿವೆಯ ಭಾಗ ಸುಮಾರು ಐವತ್ತು ವಿಸ್ತಾರವಾಗಿತ್ತು. ಅದರ ದಕ್ಷಿಣ ತುದಿಯಲ್ಲಿ ನಮ್ಮ ಗುಡಿಸಲಿದ್ದರೆ, ಕಣಿವೆಯ ಉತ್ತರಕ್ಕೆ ಹಳ್ಳಿ ಇತ್ತು. ಹೀಗಾಗಿ ನಾನು ಕುಂತ ಜಾಗದಿಂದ ಹಿಂದಿನದು ಕಾಣುತ್ತಿರಲಿಲ್ಲ. ನಾನು ಅಲ್ಲಿ ಕುಳಿತು ಸ್ವಲ್ಪ ಹೊತ್ತಾಗಿತ್ತು ಅಷ್ಟರಲ್ಲಿ ಹಳ್ಳಿಯ ಕಡೆಯ ಶಿಲಾ ಮುಖದ ಮರೆಯಿಂದ ತಲೆಯೊಂದು ಎತ್ತರಿಸಿಕೊಳ್ಳುತ್ತಾ ನನಗೆ ಭಾಗಭಾಗವಾಗಿ ಕಾಣಿಸಲಾರಂಭಿಸಿತು. ಅದರ ಹಿಂದೆ ಮತ್ತೆರಡು ತಲೆಗಳು ಕಾಣಿಸಿಕೊಂಡವು. ಈ ತಲೆಗಳ ಹಿಂದೆ ಇನ್ನಷ್ಟು ತಲೆಗಳು. ಈ ಎಲ್ಲಾ ತಲೆಗಳು ಕ್ರಮೇಣ ಪೂರ್ಣ ಪ್ರಮಾಣದ ಮನುಷ್ಯರಾಗಿ ಪ್ರತ್ಯಕ್ಷರಾದರು. ಇಲ್ಲಿಗೆ ಮುಂಚೆ ಭೇಟಿಯಾಗಿದ್ದ ಆ ನೀರು ತುಂಬುತ್ತಿದ್ದ ನನ್ನ ಸ್ನೇಹಿತೆ ನನ್ನ ಆಗಮನದ ಸುದ್ದಿಯನ್ನು ಹಳ್ಳಿಯಲ್ಲಿ ಹರಡಲು ತಡಮಾಡಿರಲಿಲ್ಲ.

ಸಾಮಾನ್ಯವಾಗಿ ಭಾರತದಲ್ಲಿ ಇಬ್ಬರು ಅಪರಿಚಿತರು ಭೇಟಿಯಾದರೆ ಅವರು ಎಷ್ಟೇ ಗಂಭೀರವಾದ ವಿಷಯವನ್ನು ಮಾತನಾಡುವ ತುರ್ತಿನಲ್ಲಿದ್ದರೂ ಸಹ ಪರಸ್ಪರ ಪೂರ್ತಿ ಪರಿಚಯವಾಗದೆ ಅದನ್ನು ಪ್ರಸ್ತಾಪಿಸಲು ಹೋಗುವುದೇ ಇಲ್ಲ. ಇದು ಇಲ್ಲಿನ ವಾಡಿಕೆ. ಅದು ಉದ್ದೇಶಪೂರ್ವಕವಾಗಿರಲಿ ಅಥವಾ ಆಕಸ್ಮಿಕ ವಾಗಿರಲಿ ಅವರ ಇತ್ಯೋಪರಿಗಳೆಲ್ಲಾ ಬಿಚ್ಚಿಕೊಳ್ಳಲೇಬೇಕು. ಅವು ಎಂಥವಾದರೂ ಆಗಿರಬಹುದು........ ಅವರ ಕುಟುಂಬದ ವಿಚಾರಗಳು.... ಕಷ್ಟಸುಖ..... ಮದುವೆ ಯಾಗಿದ್ದರೆ ಮಕ್ಕಳ ಸಂಖ್ಯೆ....... ಹೆಣ್ಣೆಷ್ಟು -ಗಂಡೆಷ್ಟು? ಮದುವೆಯಾಗಿಲ್ಲದಿದ್ದರೆ ಏನು ಕೆಲಸ ಮಾಡುತ್ತಿದ್ದಾರೆ? ಗಳಿಕೆ ಎಷ್ಟು? ಇವೆಲ್ಲಾ ಪ್ರಶ್ನೆಗಳನ್ನು ಕೇಳುವುದು ಮತ್ತು ಇವಕ್ಕೆ ಉತ್ತರಿಸುವುದು ಇಲ್ಲಿನ ಸಂಪ್ರದಾಯವಾಗಿಬಿಟ್ಟಿದೆ. ಅದರಲ್ಲೂ ಈ ಪರ್ವತ ಪ್ರದೇಶಗಳಲ್ಲಂತೂ ಇದು ಜೀವನ ಕ್ರಮವೇ ಆಗಿದೆ. ಹೀಗಲ್ಲದಿದ್ದರೆ ಅದೊಂದು ಅಪರಾಧ ಎಂದು ಪರಿಗಣಿಸಲಾಗುತ್ತದೆ.

ಆ ನೀರಿನ ಹೆಂಗಸು ನನ್ನ ಮುಂದಿಟ್ಟಿದ್ದ ಅನೇಕ ಪ್ರಶ್ನೆಗಳಿಗೆ ಈಗಾಗಲೇ ಉತ್ತರಿಸಿದ್ದೆ. ಆದರೆ ಕೆಲವು ವೈಯಕ್ತಿಕ/ಕೌಟುಂಬಿಕ ಪ್ರಶ್ನೆಗಳನ್ನು ಹೆಂಗಸರು ಗಂಡಸರನ್ನು ಕೇಳಲಾಗುವುದಿಲ್ಲ. ಅಂತಹ ಉಳಿದ ಪ್ರಶ್ನೆಗಳನ್ನು ಆ ಹಳ್ಳಿಗೆ ನನ್ನ ಜನ ತಲುಪುತ್ತಿದ್ದಂತೆ ಊರಿನ ಗಂಡಸರು ಕೇಳಿ ತಿಳಿದುಕೊಂಡಿದ್ದರು. ಅವರೊಂದಿಗೆ ಕೂಡಿ ನನ್ನಲ್ಲಿಗೆ ಬಂದಿದ್ದರು. ಬಂದಕೂಡಲೆ ನಮ್ಮವರು ಸಮೀಪದಲ್ಲೇ ಇದ್ದ ಚಿಲುಮೆಯಿಂದ ಪಾತ್ರೆಗೆ ನೀರು ತುಂಬಿಸಿ ಅಲ್ಲೇ ಬಿದ್ದಿದ್ದ ಸೌದೆ ಹುಡುಕಿ, ಒಲೆ ಹೂಡಿ ಟೀ ಮಾಡಲು ಸಿದ್ಧಮಾಡುತ್ತಿದ್ದರು. ನೀರು ಕುದಿಯಲು ಆರಂಭವಾಗುತ್ತಿದ್ದಂತೆ ನಾನು ಊರಿನಿಂದ ತಂದಿದ್ದ ಹಾಲಿನ ಪುಡಿ ಡಬ್ಬವನ್ನು ಒಡೆದು ನಮ್ಮವರಿಗೆ ಕೊಡಲು ಹೋದೆ. ಅಷ್ಟರಲ್ಲಿ ಅಲ್ಲಿದ್ದ ಸ್ಥಳೀಯರು ನಮ್ಮವರನ್ನು ಅದು ಏನೆಂದು ಕೇಳಿ ತಿಳಿದುಕೊಂಡು ಅಸಮಾಧಾನಗೊಂಡರು. 'ಯಾಕೆ? ಇಲ್ಲಿ ತಾಜಾ ಹಾಲೇ ದೊರೆಯುವಾಗ ನೀವೇಕೆ ಡಬ್ಬವನ್ನು ತಂದಿದ್ದೀರಿ?' ಎಂದು ಆಕ್ಷೇಪಿಸಿದರು. ಅದಕ್ಕೆ ನಮ್ಮವರು 'ಇಲ್ಲಿ ಹಾಲು ಸಿಗುವುದಿಲ್ಲವೆಂದು ತಂದಿದ್ದೇವೆ' ಎಂದರು. ಇದನ್ನು ಕೇಳಿ ತೀರಾ ಅಸಮಾಧಾನಗೊಂಡ

ಶಿಕಾರಿ ಜಿಮ್ ಕಾರ್ಬೆಟ್‌ನ ಕಥನಗಳು



ಮೋಹಾನದ ನರಭಕ್ಷಕ

ಸ್ಥಳೀಯರು ತಮ್ಮತಮ್ಮಲ್ಲೇ ಏನೇನೋ ಗೊಣಗಿಕೊಂಡರು. ಕೊನೆಯಲ್ಲಿ ನಮ್ಮವರು ಹೇಳಿದ ಅವರ ಗೊಣಗಾಟದ ಅರ್ಥವೆಂದರೆ 'ಈ ಹಾಲಿನ ಪುಡಿಯ ಡಬ್ಬವನ್ನು ತಂದಿರುವುದು ನಾವು ಅವರಿಗೆ ಮಾಡುತ್ತಿರುವ ಅವಮಾನ, ನಮಗಾಗಿ ಇಡೀ ಹಳ್ಳಿಯ ಹಾಲೇ ಮೀಸಲಿರುವಾಗ ನಾವು ಹೀಗೆ ಮಾಡಿದ್ದು ತಪ್ಪು' ಎಂದು. ಅವರಿಗಾದ ನೋವಿಗಾಗಿ ನಾನು ಅಲ್ಲೇ ಇದ್ದ ಹಳ್ಳಿಯ ಹಿರಿಯನ ಕ್ಷಮೆ ಕೇಳಿದೆ. 'ಒಂದು ಪಕ್ಷ ನೀವು ಕೊಡುತ್ತೀರಾದರೆ ನಮ್ಮ ಬಳಕೆಗೆ ಅಗತ್ಯವಾಗಿರುವಷ್ಟು ಹಾಲನ್ನು ಖರೀದಿಸಲು ಇಚ್ಛಿಸುತ್ತೇನೆ. ಊರಿನ ಎಲ್ಲಾ ಹಾಲನ್ನು ತೆಗೆದುಕೊಂಡು ನಾನೇನು ಮಾಡಲಿ' ಎಂದು ಹೇಳಿದೆ.

ಟೀ ಸಮಾರಾಧನೆಯ ನಂತರ ನಮ್ಮವರು ಹೊತ್ತು ತಂದಿದ್ದ ಗಂಟುಮೂಟೆಗಳನ್ನೆಲ್ಲಾ ಬಿಚ್ಚತೊಡಗಿದ್ದರು. ಅಷ್ಟರಲ್ಲಿ ಇನ್ನೊಂದಷ್ಟು ಜನ ಹಳ್ಳಿಗರು ಬಂದು ಕೂಡಿಕೊಂಡರು. ನಾನು ನನ್ನ ಟೆಂಟನ್ನು ಎಲ್ಲಿ ಹಾಕಬೇಕೆಂದು ನಮ್ಮವರಿಗೆ ವಿವರಿಸುತ್ತಿದ್ದೆ. ಇದನ್ನು ಕೇಳುತ್ತಿದ್ದ ಹಳ್ಳಿಗರು ಕೂಡಲೆ ಹೌಹಾರಿ 'ಖಡಾಖಂಡಿತವಾಗಿ ಹಾಗೆ ಮಾಡಬಾರದು' ಎಂದು ವಿರೋಧಿಸಿದರು. 'ಬೇಕಾದರೆ ಬನ್ನಿ ತೋರಿಸುತ್ತೇವೆ. ಪರ್ವತದ ಕಡೆಗೆ ಹೋಗುವ ದಾರಿಯಲ್ಲಿರುವ ಮನೆಗಳ ಬಾಗಿಲುಗಳನ್ನು ಮುರಿದು ಒಳನುಗ್ಗಲು ಪ್ರಯತ್ನಿಸಿ ಆ ನರಭಕ್ಷಕ ಹೇಗೆ ಬಾಗಿಲುಗಳನ್ನೆಲ್ಲಾ ಪಂಜದಿಂದ ಗೀರಿ ರಾಡಿ ಮಾಡಿದೆ' ಎಂದು ಹೇಳಿದರು. ಅದಕ್ಕೆ ನಾನು, 'ನಿಮ್ಮ ಮನೆಯ ಬಾಗಿಲುಗಳನ್ನೇ ಪರಚಿ-ಗೀರಿ ಮುರಿಯಲು ಹೊರಟಿರುವ ಹುಲಿ ಇನ್ನು ಈ ತಡಿಕೆ ಬಾಗಿಲಿನ ಹಿಂದಿರುವ ನನ್ನ ಜನರನ್ನು ಬಿಡುತ್ತದೇನು? ಅದಕ್ಕೆ ಅವರನ್ನು ರಕ್ಷಿಸಲು ನಾನು ಹೊರಗೆ ಈ ಟೆಂಟಿನಲ್ಲಿ ಇರುತ್ತೇನೆ' ಎಂದು ಹೇಳಿದೆ. ಈವರೆಗೂ ನಮ್ಮ ಚರ್ಚೆಯ ನಡುವೆ ಮೌನಪ್ರೇಕ್ಷಕರಾಗಿದ್ದ ನಮ್ಮವರ ಕಿವಿಯ ಮೇಲೂ ಈ ಮಾತುಗಳು ಬಿದ್ದವು. ಕೂಡಲೇ ಅವರೂ ಹಳ್ಳಿಗರೊಂದಿಗೆ ಕೂಡಿಕೊಂಡು ನನ್ನ ನಿರ್ಧಾರವನ್ನು ನಿರ್ದಾಕ್ಷಿಣ್ಯವಾಗಿ ವಿರೋಧಿಸಿದರು. ಬಹುಮತ ಅವರ ಕಡೆಗಿತ್ತು, ಕೊನೆಗೆ ನಾನೂ ಆ ಗುಡಿಸಲಿನ ಒಳಗೇ ಉಳಿಯುತ್ತೇನೆಂದು ಹೇಳುವುದು ಅನಿವಾರ್ಯವಾಯಿತು. ನಾನು ಈ ನಿರ್ಧಾರವನ್ನು ಘೋಷಿಸಿದ ಮೇಲೆ ಎಲ್ಲರೂ ಸಮಾಧಾನದ ನಿಟ್ಟುಸಿರು ಬಿಟ್ಟರು.

ಈಗ ನಾನು ನರಭಕ್ಷಕನ ಬಗ್ಗೆ ಜೀವಂತ ವಿವರಣೆ ಕೇಳುವ ಸಮಯವಾಗಿತ್ತು. ಅಲ್ಲಿ ನೆರೆದಿದ್ದ ಹಲವು ಮಂದಿ ಸ್ಥಳೀಯರು ಅದರ ಒಂದೊಂದು ಸಾಹಸಗಳನ್ನು ಸ್ಥಳಸಾಕ್ಷ್ಯಗಳೊಂದಿಗೆ ವಿವರಿಸುತ್ತಿದ್ದರು. ಅದು ಮೊದಲ ನರಬಲಿ ತಗೆದುಕೊಂಡಿದ್ದೆಲ್ಲಿ, ಸದ್ಯದ ಅದರ ಕೊನೆಯ ನರಬಲಿಯಾದ ಒಬ್ಬ ಹೆಂಗಸನ್ನು ಹಾಡುಹಗಲಿನಲ್ಲಿಯೇ ಎಂತಹ ಸಂದರ್ಭದಲ್ಲಿ ಕೆಳಗಿನ ಇಳಿಜಾರಿನ ಬಳಿಯಿರುವ ಮರದ ಕೆಳಗೆ ಕೊಂದು ಹಾಕಿತು. ಹುಲಿ ರಾತ್ರಿಯ ಹೊತ್ತು ಯಾವ ದಾರಿಯ ಮೂಲಕ ಹಳ್ಳಿಯತ್ತ ಬರುತ್ತದೆ, ಇತ್ಯಾದಿ ಸ್ಥಳಗಳನ್ನು ನನಗೆ ತೋರಿಸಿದರು. ಇವರ ವರ್ಣನೆಗಳಿಂದ ಈವರೆಗೂ ನನ್ನಲ್ಲಿ ಕೇವಲ ಒಂದು 'ವಸ್ತು' ಮಾತ್ರವಾಗಿ ಅಸ್ತಿತ್ವ ಪಡೆದಿದ್ದ ನರಭಕ್ಷಕ ನಿಧಾನವಾಗಿ ಜೀವಂತಗೊಳ್ಳುತ್ತಾ ನನ್ನ ಉತ್ಸಾಹವನ್ನು ಉತ್ತೇಜಿಸುತ್ತಾ ಹೋಯಿತು.

(ಮುಂದುವರೆಯುತ್ತದೆ)

ನಾವು ನೋಡುವ ಸಾವಿರಾರು ಮಂದಿರಗಳು ೆ ಜೈನ ಬಸದಿಗಳಾಗಿದ್ದವು. ಉಡುಪಿ ಶ್ರೀಕೃಷ್ಣ ದಿರದ ಪಕ್ಕದಲ್ಲಿರುವ ಅನಂತೇಶ್ವರ, ಚಂದ್ರೇಶ್ವರ ಒಂದು ದಲ್ಲಿ ಜೈನ ಬಸದಿಗಳಾಗಿದ್ದವು. (ಅನಂತನಾಥ ಬಸದಿ, ್ರನಾಥ ಬಸದಿ). ಇಂದಿಗೂ ಸಾವಿರಾರು ಮಂದಿರಗಳ ುರುಗಡೆ ಜೈನ ಬಸದಿಗಳ ಮಾನಸ್ತಂಭಗಳಿವೆ. ಉಡುಪಿ ್ಲಂತೂ ರಾಜಾಶ್ರಯದ ಬಲದಿಂದ ವಾದಿರಾಜಸ್ವಾಮಿ 20 ಕ್ಕಿಂತ ಹೆಚ್ಚು ಶೈವ ಮಂದಿರಗಳನ್ನು ವೈಷ್ಣವ ದಿರವಾಗಿಸಿದರು. ಗುರು ರಾಮಾನುಜರ ಪ್ರೇರೇಪಣೆ ದ ವಿಷ್ಣುವರ್ಧನ ಜೈನರ ತಲೆಗಳನ್ನು ಗಾಣಕ್ಕೆ ಹಾಕಿ ಸಿದ. ದಕ್ಷಿಣ ಭಾರತದಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ದ್ಧವಿಹಾರಗಳು, ಜೈನ ಉಪಸರಗಳು ನೆಲಸಮವಾದವು. ಗಳಲ್ಲೆಷ್ಟೋ ಹಿಂದೂ ಮಂದಿರಗಳಾಗಿ ರೂಪಾಂತರ ಂದಿದವು.

ಚೋಳರಾಜ ಕುಲತ್ತುಂಗ ಶೈವ ಮತಸ್ಥನು. ಆತ ವರ ಮೇಲೆ ಭಯಾನಕ ಅತ್ಯಾಚಾರಗಳನ್ನು ಮಾಡಿದ 27-31). ಆತ ವೈಷ್ಣವ ಆಚಾರ್ಯ ರಾಮಾನುಜರನ್ನು ದರ್ಬಾರಿಗೆ ಆಹ್ವಾನಿಸಿದ. ಅವನ ಮೇಲೆ ಮಾನವಿದ್ದ ರಾಮಾನುಜ ತನ್ನ ಶಿಷ್ಯರಾದ ಕುರೇಶ ು ಮಹಾಪೂರ್ಣರನ್ನು ಕಳುಹಿಸಿದ. ರಾಜ ಅವರಿಬ್ಬರ ಗಳನ್ನು ಕೀಳಿಸಿದ.

ಆದಿಶಂಕರಾಚಾರ್ಯರು ಬದರಿಯ ಬೌದ್ಧಮಠವನ್ನು ದಿರವನ್ನಾಗಿ ಪರಿವರ್ತಿಸಿದರು. ಬೌದ್ಧರನ್ನು ಊರು ಓಡಿಸಿದರು. ನಾಗಾರ್ಜುನಕೊಂಡದ ಕತೆ ಪ್ರಿಯ ಪ್ಪನವರ ದೃಷ್ಟಿಯಲ್ಲಿ 'ಸಂವೃತಿ'!

ಸಿಂಧ್, ಕಾಶ್ಮೀರ, ಪೂರ್ವಬಂಗಾಳ ಮತ್ತು ಬಿಹಾರ ಶಗಳು ಬೌದ್ಧರ ದೊಡ್ಡ ಕೇಂದ್ರಗಳಾಗಿದ್ದವು. ರಾಜರು ದೂಗಳಾಗಿದ್ದರು. ಅವರ ಅತ್ಯಾಚಾರ ತಾಳಲಾರದೆ ಾಂಶ ಬೌದ್ಧರು ಮುಸ್ಲಿಮರಾದರು. ಬಂಗಾಳದ ಶಶಾಂಕ ಬೌದ್ಧವಿಹಾರಗಳನ್ನು ನಾಶಪಡಿಸಿದ. ಚೈತ್ಯ ು ಸುಟ್ಟು ಹಾಕಿಸಿದ. ಶಶಾಂಕನು ಬೋಧಗಯಾದ ಧಿವೃಕ್ಷವನ್ನು ಬುಡಸಮೇತ ಕಡಿದು ಹಾಕಿ ಬೆಂಕಿ ಸುಟ್ಟ ವಿಚಾರವನ್ನು ಚೀನೀಯಾತ್ರಿಕ ಹ್ಯುಯನ್ ್ ಉಲ್ಲೇಖಿಸುತ್ತಾನೆ. 160 ಅಡಿ ಎತ್ತರದ ಬುದ್ಧನ ವನ್ನು ನಾಶಪಡಿಸಿ, ಶಿವನ ಮೂರ್ತಿಯನ್ನು ಸ್ಥಾಪಿಸಿದ. ನಗರದ ಬೌದ್ಧ ವಿಹಾರಗಳೆಲ್ಲವೂ ನಾಶವಾದವು. ಶಶಾಂಕ ತನ್ನ ರಾಜ್ಯದಲ್ಲಿ ಬೌದ್ಧಧರ್ಮವನ್ನು ರ್ಣವಾಗಿ ನಾಶಗೊಳಿಸಿದ. 12ನೆಯ ಶತಮಾನದಲ್ಲಿ ಯತರು ಜೈನರನ್ನು ಸದೆಬಡಿದರು.

ಬ್ರಿಟಿಷರ ಕಾಲದಲ್ಲಿ ಹಿಂದೂ ಮತಾಂಧರ ಹಿಂಸೆ ುಕತೆ ಮತ್ತೆ ಭುಗಿಲೆದ್ದಿತು. 1947 ರಲ್ಲಿ ಹಿಂದೂ ಮರು ಭಯಾನಕ ಹಿಂಸೆಗಿಳಿದು ಲಕ್ಷಾಂತರ ಜೀವಿಗಳು ಬಲಿಯಾದವು. ಅಂದಿನಿಂದ ಇವತ್ತಿನ ತನಕ 54000 ಕ್ಕಿಂತ ಹೆಚ್ಚು ಹಿಂದೂ ಮುಸ್ಲಿಮ್ ಗಲಭೆಗಳಾಗಿವೆ. 1984 ರ ಸಿಖ್ ಮಾರಣಹೋಮದಲ್ಲಿ 3000 ಜನರ ಕಗ್ಗೊಲೆಯಾಗಿದ್ದರೆ 2002 ರ ಸರ್ಕಾರಿಪ್ರೇರಿತ ಗುಜರಾತಿನ ಮತಾಂಧರಿಂದ 4000 ಕ್ಕೂ ಅಧಿಕ ಮಂದಿ ಜೀವ ಕಳೆದುಕೊಂಡರು. ಅತ್ಯಾಚಾರ, ಕೊಲೆ, ಮತಾಂತರಗಳಲ್ಲಿ ಹಿಂದೂಗಳು ಇತರ ಮತಾವಲಂಬಿಗಳಿಗಿಂತ ಬಹಳ ಹಿಂದೇನೂ ಬಿದ್ದಿಲ್ಲ. ಆದರೆ 'ಸಂವೃತಿ' 'ಮಾಯೆ'ಗೊಳಗಾದ ಭೈರಪ್ಪನವರ 'ಸ್ವಚ್ಛ' ದೃಷ್ಟಿಗೆ- "ಭಾರತದಲ್ಲಿ ಮೊದಲಿನಿಂದಲೂ ಬಂದ ಜಿಜ್ಞಾಸೆ ಮತ್ತು ವಾಗ್ವಾದಗಳ ಪರಂಪರೆಯಿಂದ ಈ ದೇಶದಲ್ಲಿ ಮುಕ್ತ ಚರ್ಚೆ ಸಾಧ್ಯವಾಗಿದೆ" ಎಂದೇ ಕಾಣಿಸುತ್ತದೆ. ಭಾರತದಲ್ಲಿ ಯುದ್ಧ ಮಾಡಿ ಗೆದ್ದ ಪ್ರತಿಯೊಬ್ಬ ಮುಸಲ್ಮಾನ ದಾಳಿಕೋರನು ಇದಕ್ಕೆ ವಿರುದ್ಧವಾದುದನ್ನೇ ಮಾಡಿದ್ದಾನೆ" (ಅಂದರೆ, ಧರ್ಮ ಮತ್ತು ಸಂಸ್ಕೃತಿಯನ್ನು ಹೇರಿದ್ದಾನೆ. ಮಂದಿರಗಳನ್ನು ನಾಶ ಮಾಡಿದ್ದಾನೆ) ಎಂದು ಭೈರಪ್ಪ ವಾದಿಸುತ್ತಾರೆ. ಈ ಕುರಿತು ಅವರು ಉದಾಹರಿಸುವುದು ಔರಂಗಜೇಬನನ್ನು ಮಾತ್ರ. ಅಕ್ಬರ್ ಇವರ ಕಣ್ಣಿಗೆ ಏಕೆ ಕಾಣಿಸುವುದಿಲ್ಲ? 50 ಉಪನಿಷತ್ತುಗಳನ್ನು ಫಾರಸೀ ಭಾಷೆಗೆ ಅನುವಾದಿಸಿದ ದಾರಾಶಿಕೋಹ್ ಏಕೆ ಕಾಣಿಸುವುದಿಲ್ಲ? ಟಿಪ್ಪು ಶೃಂಗೇರಿ ಮಠವನ್ನು ರಕ್ಷಿಸಿದ್ದಾಗಲಿ, ನೂರಾರು ದೇವಾಲಯಗಳಿಗೆ ಉರುಳಿ ಬಿಟ್ಟುದಾಗಲಿ, ಮರಾಠರಿಂದ ಹಾನಿಗೊಳಗಾದ ರಂಗನಾಥ ದೇವಾಲಯವಾಗಲೀ ಏಕೆ ಕಾಣಿಸುವುದಿಲ್ಲ? ಲಕ್ಷಾಂತರ ಸೂಫಿಗಳು ಇವರ ಕಣ್ಣಿಂದ ಮರೆಯಾದುದೇಕೆ? ಕಬೀರ್, ಜಾಯಸಿ, ದಾದೂ, ರಹೀಮ್, ಶಿಶುನಾಳರಂಥ ಮಹಾಕವಿಗಳು ಯಾವ 'ಮಾಯೆ'ಗೆ ಒಳಗಾಗಿ ತೋರದಾಗಿದ್ದಾರೆ?

> 'ಆವರಣ' ಮತ್ತು 'ವಿಕ್ಷೇಪ'ವೆಂಬುದು ಮಾಯೆಯ ಕುರಿತು ಶಂಕರಾಚಾರ್ಯರ ವಿಚಾರವಾಗಿದೆ. ಮಾಯೆಯು ಅಭಾವ ರೂಪವೂ ಹೌದು; ಭಾವರೂಪವೂ ಹೌದು. ಅದರ ಅಭಾವ ಪಕ್ಷ 'ಆವರಣ'ವಾದರೆ, ಭಾವ ಪಕ್ಷ 'ವಿಕ್ಷೇಪ'. ವೇದಾಂತಕ್ಕೆ ಭಿನ್ನ ಭಿನ್ನ ಪರಸ್ಪರ ವಿರೋಧಿಯಾದ ನಾನಾ ಶಾಖೆಗಳಿವೆ. ಆದರೆ 'ಮಹಾನ್ ದಾರ್ಶನಿಕ' ಭೈರಪ್ಪನವರಿಗೆ ವೇದಾಂತವೆಂದರೆ ಅವರು ಏನು ಹೇಳುತ್ತಾರೊ ಅದುವೇ ವೇದಾಂತದ ಸಾರ.

ಯಾವ ಏಕಮಾತ್ರ ಭಾರತೀಯ ರಾಜ ಬ್ರಿಟಿಷರೊಡನೆ ಯುದ್ಧ ಮಾಡುತ್ತಾ ರಣರಂಗದಲ್ಲಿ ಸತ್ತ?-ಟಿಪ್ಪೂಸುಲ್ತಾನ್. ಯಾವ ಭಾರತೀಯ ರಾಜ ದೇವರ ಮೂರ್ತಿಗಳನ್ನು ನಾಶಪಡಿಸಿ ತನ್ನ ಕೋಶ ತುಂಬಿಸಿಕೊಳ್ಳಲು ಒಂದು ವಿಭಾಗವನ್ನೇ ತೆರೆದು ಅದಕ್ಕೆ 'ದೇವೋತ್ಪಾಟನ ನಾಯಕ'ನೆಂಬ ಅಧಿಕಾರಿಯನ್ನು ಕೂಡಿಸಿದ?- ಕಾಶ್ಮೀರದ ರಾಜ ಹರ್ಷದೇವ. (ಕಲ್ಹಣನ ರಾಜ ತರಂಗಿಣಿಯಲ್ಲಿ ಉಲ್ಲೇಖಿತ).

ಆದರೆ ಇವೆಲ್ಲಾ 'ಆವರಣ'ದೊಳಗಿರುವುದರಿಂದ ಭೈರಪ್ಪನವರ ಗಮನಕ್ಕೆ ಬರುವುದಿಲ್ಲ. ಮುಸ್ಲಿಂ ಆಕ್ರಮಣದ ಒಂದೆರಡು ಉದಾಹರಣೆಗಳನ್ನು ನೋಡೋಣ:

ಮಹಮ್ಮದ್ ಗಝ್ನಿ ಪ್ರಸಿದ್ಧ ಸೋಮನಾಥ ಮಂದಿರವನ್ನು ಲೂಟಿ ಮಾಡಿದ. ಸೋಮನಾಥಕ್ಕೆ ಬರುವ ದಾರಿಯಲ್ಲಿ ಆತನನ್ನು ತಡೆದವನು ಮುಲ್ತಾನಿನ ಸುಲ್ತಾನ ಮಹಮ್ಮದ್ ಫತ್ ದಾವೂದ್. ಯುದ್ಧದಲ್ಲಿ ಆತನೂ ಸತ್ತ. ಅಂತೆಯೇ ಹಾದಿಯಲ್ಲಿ ಥಾನೇಶ್ವರದ ಹಿಂದೂ ರಾಜ ಆನಂದಪಾಲ ಗಝ್ನಿಗೆ ಸೋಮನಾಥ ತಲುಪಲು ಸಹಾಯ ಮಾಡಿದ. ಗಝ್ನಿ ಸೇನೆಯಲ್ಲಿ ಎಷ್ಟೋ ಹಿಂದೂ ಸಿಪಹ್‌ಸಾಲಾರ್‌ಗಳಿದ್ದರು (ಸೇನಾಪತಿಗಳು). ಸಂಪತ್ತನ್ನು ದೋಚುವುದೇ ಗಝ್ನಿಯ ಉದ್ದೇಶವಾಗಿತ್ತು.

ಮೊಘಲ್ ರಾಜರುಗಳು ಉದಾರ ನೀತಿಯನ್ನು ಹೊಂದಿದ್ದರು. ಔರಂಗಜೇಬನೂ ಇದಕ್ಕೆ ಸಂಪೂರ್ಣ ಅಪವಾದವಲ್ಲ. ವೃಂದಾವನ ಶೋಧ ಕೇಂದ್ರದಲ್ಲಿರುವ ದಸ್ತಾವೇಜುಗಳಿಂದ ಆ ಮಂದಿರಗಳಿಗೆ ಅಕಬರ, ಜಹಾಂಗೀರ, ಶಾಹಜಹಾನ್ ಸಾಕಷ್ಟು ಜಾಗೀರು ಕೊಟ್ಟ ಉಲ್ಲೇಖಗಳಿವೆ: ಔರಂಗಜೇಬ ಇಲಾಹಾಬಾದ್ ನಗರದ ಸೋಮನಾಥ ಮಹಾದೇವ ಮಂದಿರಕ್ಕೆ ಜಮೀನು ಮತ್ತು ನಗದು ಕಾಣಿಕೆ ಸಲ್ಲಿಸಿದ. ಉಜ್ಜೈನಿಯಲ್ಲಿರುವ ಮಹಾಕೇಶ್ವರ ಮಂದಿರ, ಚಿತ್ರಕೂಟದ ಬಾಲಾಜಿ ಮಂದಿರ, ಗೌಹಾತಿಯ ಉಮಾನಂದ ಮಂದಿರ, ಶತ್ರುಂಜಯದಲ್ಲಿ ಜೈನಮಂದಿರ, ಉತ್ತರ ಭಾರತದಲ್ಲಿ ಹರಡಿರುವ ಹಲವಾರು ಗುರುದ್ವಾರಗಳಿಗೆ ಅನುದಾನ ನೀಡಿದ (1659 ರಿಂದ 1691 ರಲ್ಲಿ ಔರಂಗಜೇಬ ಹೊರಡಿಸಿದ ಆದೇಶಗಳು). ಇದರ ಅರ್ಥ ಔರಂಗಜೇಬ ಮಂದಿರಗಳನ್ನು ನಾಶ ಮಾಡಿಲ್ಲ ಎಂದು ಸಾಧಿಸುವುದಲ್ಲ; ಬದಲಿಗೆ ಇವುಗಳಿಗೆಲ್ಲಾ ರಾಜಕೀಯ, ಆರ್ಥಿಕ ಕಾರಣಗಳಿರುತ್ತಿದ್ದವಲ್ಲದೆ ತಥಾಕಥಿತ ಭಜರಂಗಿಗಳು ಹೇಳುವಂತಹ ಮತೀಯ ಕಾರಣಗಳಲ್ಲ ಎಂಬುದನ್ನು ವಿಶದಪಡಿಸುವುದಾಗಿದೆ.

ಭೈರಪ್ಪನವರಿಗೆ ಉತ್ತರ ಭಾರತದ ಖಯಾಲ್ ಶಬ್ದ ಪರ್ಷಿಯನ್ನರದು ಎಂಬುದನ್ನು ಒಪ್ಪಲು ಹಿಂಸೆಯಾಗುತ್ತದೆ. ಅದಕ್ಕೆ ಅವರು ಹೀಗೆ ನಂಬಿಕೊಂಡವರ ಬಗ್ಗೆ ಕನಿಕರಪಡುತ್ತಾ "ಇತ್ತೀಚಿನ ಸಂಗೀತ ವಿದ್ವಾಂಸರು ಇದನ್ನು ಸಂಸ್ಕೃತದ ಖೇಲ್ (ಖೇಲತಿ) ಶಬ್ದದಿಂದ ಹುಟ್ಟಿದುದು.... ಎಂದು ಸಂಶೋಧಿಸಿದ್ದಾರೆ" ಎಂದಿದ್ದಾರೆ. ಇದು ಎಂತಹ ಬೇಜವಾಬ್ದಾರಿ ಹೇಳಿಕೆಯೆಂದರೆ- "ಇತ್ತೀಚಿನ ಸಂಗೀತ ವಿದ್ವಾಂಸರು"-ಯಾರು? ಗೊತ್ತಿಲ್ಲ. ಮೇಲಾಗಿ ಒಂದು ಶಬ್ದ ಯಾವ ಭಾಷೆಯದ್ದು ಎಂದು ನಿರ್ಣಯಿಸುವವರು ಯಾರು? ಭಾಷಾಶಾಸ್ತ್ರಜ್ಞರೋ? ಸಂಗೀತ ವಿದ್ವಾಂಸರೋ? ಭೈರಪ್ಪನಂತಹ ಮಹಾ ಸಾಹಿತಿಗೆ ಅಷ್ಟೂ ತಿಳಿಯದೆ?

ಇಸ್ಲಾಂ ಕುರಿತ ಭೈರಪ್ಪನವರ ಇನ್ನೊಂದು ಮಾತು: "ಇಸ್ಲಾಂ ಜಗತ್ತಿನಲ್ಲಾದರೋ ಯುರೋಪಿನಲ್ಲಿ ನಡೆದಂಥ ಆಲೋಚನಾ ಕ್ರಾಂತಿಯಾಗಲೀ ವೈಜ್ಞಾನಿಕ ಕ್ರಾಂತಿಯಾಗಲೀ ನಡೆಯಲಿಲ್ಲ. ನಡೆಯಲು ಇನ್ನೂ ಬಿಟ್ಟಿಲ್ಲ. ಇದರ ಪರಿಣಾಮವಾಗಿ ಮತಧರ್ಮದ ವಿಷಯಗಳನ್ನು ನಿರ್ಭಯವಾಗಿ ಚರ್ಚಿಸಲು ಯಾವ ಮುಸ್ಲಿಂ ದೇಶಗಳಲ್ಲಿಯೂ ಸಾಧ್ಯವಿಲ್ಲ." ಭಾರತದಲ್ಲಿ ಸುಧಾರಣೆ-ಪರಿವರ್ತನೆಯ ಗತಿ ಅತ್ಯಂತ ದುರ್ಬಲವಿದೆ. ಆದರೆ ಸಿರಿಯಾ, ತುರ್ಕಿ, ಇಂಡೋನೇಷ್ಯಾದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ವಿವಾಹ ವಿಚ್ಛೇದನಕ್ಕೆ ನ್ಯಾಯಾಲಯಕ್ಕೆ ಹೋಗಬೇಕು. ಬಹುಪತ್ನಿತ್ವ ಇಲ್ಲ. ಇರಾನಿನಲ್ಲಿ ಮಹಿಳೆಯರ ಸಾಕ್ಷರತೆ ಶೇ. 80 ಕ್ಕಿಂತ ಹೆಚ್ಚು, ಹೆಚ್ಚಿನ ದೇಶಗಳಲ್ಲಿ ಬುರ್ಖಾ ಇಲ್ಲ.

ಆದರೂ ಇಸ್ಲಾಂ ಜಗತ್ತಿನಲ್ಲಿ ಯಾವ ಬದಲಾವಣೆಯೂ ಆಗಿಲ್ಲ ಎನ್ನುವುದು ಅಜ್ಞಾನ. ಮಧ್ಯ ಏಷ್ಯಾದಲ್ಲಿ ಸೂಫಿ ಪಂಥದ ಮೂಲವೆನ್ನಬಹುದಾದ ತಸವ್ವುಫ್ ಬೆಳೆದು ಬರಲಿಲ್ಲವೆ? ಸೂಫಿಗಳಿಗೆ ಶರಿಯತ್ ನಿಯಮವಾಗಲೀ 'ಯಾವುದೇ ಭಯ!'ವಾಗಲೀ ಇದೆಯೇ? ಕ್ರಾಂತಿಕಾರಿ ಸೂಫಿ ಪಂಥ ಇಸ್ಲಾಮಿನ ವೈಚಾರಿಕ ಕ್ರಾಂತಿ ಅಲ್ಲವೆ? ಬೌದ್ಧಭಿಕ್ಷುಗಳಂತೆ ಜೀವನ ಸಾಗಿಸುವ 'ಫಾರಾಬಿ'ಗಳು ಯಾರು? ಫಾರಾಬಿ ಪಂಥವು ತರ್ಕಶಾಸ್ತ್ರ ಮತ್ತು ಭೌತಿಕ ಶಾಸ್ತ್ರಕ್ಕೆ ಹೆಚ್ಚಿನ ಮಹತ್ವ ಕೊಟ್ಟಿತು. ಸನಾತನಿ ಮುಸ್ಲಿಮರು ಇವರನ್ನು ಕಾಫಿರರೆಂದು ಕರೆದರು. ಬೂ-ಅಲೀ-ಸೀನಾ (980-1037) ಬುಖಾರದ ಕ್ರಾಂತಿಕಾರಿ. ಮೂಢ ನಂಬಿಕೆಗಳ ಕಡುವಿರೋಧಿ. ಈತನ ಸಿದ್ಧಾಂತ ಭಾರತೀಯ ಸಾಂಖ್ಯವನ್ನು ಹೋಲುತ್ತದೆ.

5000 ವರ್ಷಗಳ ಮತ ಧರ್ಮಗಳ ಇತಿಹಾಸ ಇರುವ ಭಾರತದ ಧರ್ಮಗಳನ್ನೂ ಕೇವಲ 1300 ವರ್ಷ ಪ್ರಾಯದ ಇಸ್ಲಾಂ ಅನ್ನು ಒಂದೇ ತಕ್ಕಡಿಯಲ್ಲಿ ತೂಗಿ ಇಲ್ಲಿ ವೈಜ್ಞಾನಿಕ ಕ್ರಾಂತಿ ಸಾಧ್ಯವೇ ಇಲ್ಲ ಎಂದು ಬೊಬ್ಬಿರಿಯುವುದು, ನಡೆದ ಬದಲಾವಣೆಗಳ ಬಗ್ಗೆ ಕಣ್ಣುಮುಚ್ಚಿಕೊಂಡಿರುವುದು ಭಜರಂಗಿಗಳ ಮನೋವೃತ್ತಿ. ಭೈರಪ್ಪನವರೂ ಅವರಂತೆ ಚಾಲುಚಾಲಾಗಿ ಯೋಚಿಸುವುದು ದುರಂತ.

–ಡಾ. ಜಿ. ಭಾಸ್ಕರ ಮಯ್ಯ

ಅಂಬರೀಷ್ ಅಣ್ಣಾರ ಹುಡುಕಿಕೊಡಿ

ಗೊತ್ತಿಲ್ಲ. ಕಳೆದ ತಿಂಗಳು ಕಾವೇರಿ ತಾಯಿಯ ಹೋರಾಟಕ್ಕೆ ಮಂಡ್ಯಕ್ಕೆ ಬಂದಿದ್ದರು. ಅವತ್ತೇ ಕೊನೆ. ಮಂಡ್ಯದ ಕಡೆ ತಲೆ ಹಾಕಿಲ್ಲ.

ಮಂಡ್ಯದಲ್ಲಿ ಒಂದು ಮನೆ ಇದೆ. ಅದರ ಮುಂದೆ ಅಂಬರೀಷ್, ಸಂಸದರು ಅನ್ನುವ ನಾಮಫಲಕ ಇದೆ. ಅಲ್ಲಿ ವಿಚಾರಿಸಲೆಂದು ಹೋದರೆ... ಬಾಗಿಲು ತೆರೆದರು. 'ಅಂಬರೀಷ್' ಅನ್ನುತ್ತಿದ್ದಂತೆ ಮುಖದ ಮೇಲೆ ರಾಚುವಂತೆ ಬಾಗಿಲು ಬಡಿದರು.

ಬೆಂಗಳೂರಿನ ಜೆಪಿನಗರದ ಮನೆಗೆ ಹೋದರೆ... ಗೂರ್ಖಾ ಸ್ವಾಗತಿಸಿದ. ವಿಚಾರಿಸಲಾಗಿ ದೆಹಲಿ ಕಡೆಗೆ ಕೈ ತೋರಿಸಿದ. 'ಪಾರ್ಲಿಮೆಂಟ್ ಹೈನಾ' ಅಂದ. ಅಂಬರೀಷ್‌ಗೆ ಇಂತಹ ದುರ್ಬುದ್ಧಿ ಯಾವಾಗಿನಿಂದ ಬಂತು. ಸಂಸತ್ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಸಂಸತ್ತಿಗೆ ಹೋಗಬೇಕು ಅನ್ನಿಸಿರಬೇಕು. ಹಾಳಾದ ಮನಸ್ಸೇ ಹೀಗೆ- ಇದ್ದಾಗ ಬಿಸಾಕೋಣ ಅನ್ನಿಸುತ್ತೆ, ಇಲ್ಲದಾಗ ಕಿತ್ಕೊಳ್ಳೋಣ ಅನ್ನಿಸುತ್ತೆ. ಅಣ್ಣಾರಿಗೂ ಹಂಗೇ ಆಗಿರಬೇಕು ಅನ್ನಿಸಿತು.

ದೆಹಲಿಗೆ ಹೋದೆ. ಅವರ ಕಚೇರಿ ತಡಕಾಡಿದೆ. ರಾಜ್ಯ ಸರ್ಕಾರದ ಕಚೇರಿಗಳೇ ವಾಸಿ. ಕಚೇರಿಗಳಲ್ಲಿ ನೌಕರರು ತೂಕಡಿಸುತ್ತಾ ಆದರೂ ಕುಳಿತಿರುತ್ತಾರೆ. ದೆಹಲಿಯಲ್ಲಿ ಹಾಗಲ್ಲ. ಬಿಸಿಲ ಝಳ ನೋಡಿ. ಕಚೇರಿಗೇ ನೌಕರರು ಬರಲ್ಲ! ಕಛೇರಿ ಬಾಗಿಲು ಅಂತ ಒಂದು ತೆಗೆಯಬೇಕಲ್ಲ, ವೇಳೆ ಮುಗಿಯುತ್ತಿದ್ದಂತೆ ಅದಕ್ಕೆ ಬೀಗ ಅಂತ ಒಂದು ಹಾಕಬೇಕಲ್ಲ ಅನ್ನೋ ಸಂಕಟಕ್ಕೆ ಅಲ್ಲೊಬ್ಬರು ಇಲ್ಲೊಬ್ಬರು ನೌಕರರು ಕಾಣಿಸಿಕೊಳ್ಳುತ್ತಿದ್ದರು. ಯಾರಾದರೂ ಇನ್ನು ಮುಂದೆ ಕಚೇರಿಗಳಲ್ಲಿ ದಿನದ 24 ಗಂಟೆಯೂ ಕೆಲಸ ಮಾಡಲಾಗುತ್ತದೆ ಅಂತ ಒಂದು ಕಾನೂನು ತಂದರೆ ಎಷ್ಟೊಂದು ಮಜವಾಗಿರುತ್ತೆ! ಆಗ ಬಾಗಿಲು ತೆಗೆದು ಮುಚ್ಚುವ ಸಂಕಟವೇ ಇರೋಲ್ಲ! ಇಂತಹ ಕಾನೂನು ಇನ್ನೂ ಬರದೇ ಇರುವುದರಿಂದ ಕಚೇರಿಗೆ ಬಂದಿದ್ದ ಒಬ್ಬಾತನನ್ನು ಕೇಳಿದೆ...'ಅಂಬರೀಷ್ ಸಾರ್?'. 'ಮಂಡ್ಯ... ಮಂಡ್ಯಾ ಮೆ ಹೈ' ಅಂದ. 'ನಾನು ಅಲ್ಲಿಂದ್ಲೇ ಬಂದಿದೀನಿ' ಅಂದೆ. 'ಅಲ್ಲೇ ಹುಡ್ಕೀಸಾ' ಅಂದಿತು ಮಂಡ್ಯದ ಹುಲಿ.

ಅವನ ಮಾತ ಕೇಳಿ ನಮ್ಮೂರಲ್ಲೇ ಇದ್ದಂಗಾಯ್ತು. ದೆಹಲಿಯಲ್ಲಿ ಕರ್ನಾಟಕ ಭವನ ಅಂತ ಇದೆ. ಅಲ್ಲಿ ಕನ್ನಡ ಬಿಟ್ಟು ಬೇರೆ ಭಾಷೆಗಳೆಲ್ಲ ಕಿವಿ ಮೇಲೆ ಬೀಳ್ತಾ ಇರ್ತವೆ. ಕನ್ನಡತ್ವ ಕಾಣಬೇಕು ಅಂದರೆ ದೆಹಲಿಯಿಂದ ಹೊರಟು ರಾಮನಗರ ಬಿಟ್ಟ ಮೇಲೇನೇ. ಅಂತಹದ್ದರಲ್ಲಿ ಅಚ್ಚ ಕನ್ನಡಿಗನನ್ನು ಕಂಡು ಹಾಲನ್ನು ಉಂಡ ಹಾಗಾಯಿತು. ಅಂಬರೀಷ್ ಸಿಗದಿದ್ದರೂ ಇವನಾದರೂ ಸಿಕ್ಕಿದನಲ್ಲ ಅಂತ ಸಂತೋಷದಿಂದಲೇ ಹಿಂತಿರುಗಿದೆ.

ಮಂಡ್ಯಕ್ಕೆ ಬರುವುದಕ್ಕೆ ಸರಿಯಾಗಿ ಯುಗಾದಿ ಹಬ್ಬ ಬಂದಿತ್ತು. ಅವತ್ತು ಅದೃಷ್ಟ ಪರೀಕ್ಷೆ ಮಾಡೋದಕ್ಕೆ ಅಂತ, ಹೊಲಮನೆ ಮಾರಿಹೋದರೂ ಚಿಂತೆಯಿಲ್ಲ, ಜೂಜಾಡಲೇ ಬೇಕು ಅನ್ನುವ ಅಲಿಖಿತ ನಿಯಮ ಇದೆ. ಇಂತಹ ಪವಿತ್ರ ಕಾರ್ಯಕ್ಕೆ ಅಂತ ಅಂಬರೀಷಣ್ಣಾರು ಇಲ್ಲಿಗೆ ಪಾದ ಬೆಳೆಸಿ ಗುಂಡುತುಂಡುವಿನ ನಡುವೆ ಇಸ್ಪೀಟು ಪಾರಾಯಣ ಮಾಡೋದು ಲಾಗಾಯ್ತಿನಿಂದ ಬಂದ ಪದ್ಧತಿ. ಇಸ್ಪೀಟು ಅಡ್ಡೆಗೆ ಹೋಗಿ ತಡಕಾಡಿದೆ. 'ಈ ಸಲ ಅಂಬರೀಷ್ ಬರ್‍ದೆ ಕಳೇನೇ ಇಲ್ಲ' ಅಂತ ಅಖಾಡಾದವರು ಮಾತನಾಡಿಕೊಳ್ಳುತ್ತಿದ್ದುದು ಕಿವಿಗೆ ಬಿದ್ದಿತು.

ಇತ್ತೀಚೆಗೆ ಕಾವೇರಿ ನ್ಯಾಯಮಂಡಲಿ ತೀರ್ಪನ್ನು ವಿರೋಧಿಸಿ ಮಂಡ್ಯದಲ್ಲಿ ತಮ್ಮ ಅದ್ಭುತ ವಾಕ್ಚಾತುರ್ಯ ಪ್ರದರ್ಶಿಸಿದ ಸಂಸದ ಈ ತೀರ್ಪನ್ನು ಹಿಂದೆ ಪಡೆಯಬೇಕು; ಒಂದು ವೇಳೆ ಹಾಗೆ ಮಾಡದೆ ಈಗ ಇರುವ ತೀರ್ಪಿನಂತೆಯೇ ತಮಿಳುನಾಡಿಗೆ ನೀರು ಬಿಡುತ್ತೇನೆ ಎಂದು ಸರ್ಕಾರ ಘೋಷಿಸಿದರೆ... ನಾನು.... ಮೇಕೆದಾಟಿನ ಬಳಿ ದೊಣ್ಣೆ ಹಿಡಿದು ನಿಂತುಕೊಳ್ಳಲೂ ಸಿದ್ಧ ಎಂದು ಸಾರಿದರು. ಅಲ್ಲಿಂದ ತಾನೆ ತಮಿಳುನಾಡಿಗೆ ಕಾವೇರಿ ನೀರು ಹರಿದು ಹೋಗುವುದು! ಈ ದೊಣ್ಣೆಗೂ ಕಾವೇರಿ ನೀರಿಗೂ ಏನು ಸಂಬಂಧ? ಅದನ್ನು ಹಿಡಿದು ನಿಂತುಕೊಂಡರೆ ಹರಿಯುತ್ತಿರುವ ಕಾವೇರಿ ಸ್ತಬ್ಧಳಾಗುತ್ತಾಳಾ? ಅದೇನು ಮಂತ್ರದಂಡವ? ಅದರ ಬದಲು ಅಗಸ್ತ್ಯ ಮಹರ್ಷಿಯ ರೂಪತಾಳಿ ಕಾವೇರೀನ ಹೀರಿ ಹಾಕ್ತೀನಿ ಅಂತಾದರೂ ಅಂದಿದ್ದರೆ ಅದೊಂದು ತರಹ ಇರುತ್ತಿತ್ತು, ಅದು ಹಾಗಿರಲಿ ಸಂಸದೆಯ ಮಾತಿನಿಂದ ಪ್ರಭಾವಿತರಾದ ಅಂಬರೀಷ್ ಏನಾದರೂ ದೊಣ್ಣೆ ಹಿಡಿದುಕೊಂಡು ನಿಂತಿರಬಹುದಾ ಅನ್ನುವ ಅನುಮಾನ ಬಂದಿತು. ತಲಕಾವೇರಿಯಿಂದ ಹಿಡಿದು ಮೇಕೆದಾಟಿನವರೆವಿಗೂ ನದಿ ದಂಡೆಯಲ್ಲಿ ಹೋಗಿ ತಡಕಾಡಿದೆ. ಅಂಬರೀಷ್ ಕಾಣಿಸಲಿಲ್ಲ!



ಕಾವೇರಿಗಾಗಿ ಕರ್ನಾಟಕದಲ್ಲಿ ಹೋರಾಟ ನಡೆಯುತ್ತಿದೆ. ಜನರ ಭಾವನೆಗೆ ಸ್ಪಂದಿಸಿದ ಅಂಬರೀಷ್ ತಮ್ಮ ಸಂಸದರ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಆದರೆ ಚಳವಳಿಯಲ್ಲಿ ಅವರಿಲ್ಲ! ಸಂಸತ್ತಿನಲ್ಲೂ ಕಾಣಿಸುತ್ತಿಲ್ಲ! ಹಾಗಾದರೆ ಎಲ್ಲಿ ಹೋರಾಡುತ್ತಿದ್ದಾರೆ ಅಂಬರೀಷ್?

ಅವರನ್ನು ಹುಡುಕಿಕೊಡಿ ಅಂತ ಪೊಲೀಸಿನವರಿಗೆ ದೂರು ಇತ್ತರೆ ಪ್ರಯೋಜನ ಇಲ್ಲ, ಸಿಓಡಿ, ಸಿಬಿಐ ಮೇಲೆ ಸರ್ಕಾರಗಳಿಗೆ ನಂಬಿಕೆಯೇ ಇಲ್ಲ! ಹೀಗಾಗಿ ಅಂಬರೀಷ್ ಅವರು ಕಾಣೆಯಾಗಿರುವುದರ ಬಗ್ಗೆ ಒಂದು ಜಾಹೀರಾತು ನೀಡಿದೆ. ಅದು ಈ ರೀತಿ ಇತ್ತು,

ಅಂಬರೀಷ್ ಕಾಣೆಯಾಗಿದ್ದಾರೆ

ಹೆಸರು ಅಂಬರೀಷ್. ವಯಸ್ಸು ಮೇಕಪ್ಪಿನಲ್ಲಿದ್ದಾಗ ನಲವತ್ತು ಇಲ್ಲದಾಗ ಅರವತ್ತರ ಹತ್ತಿರ ಹತ್ತಿರ. ಐದೂವರೆ ಅಡಿ ಎತ್ತರ. ತುಂಬಿದ ಮೈ, ಮಾತನಾಡಲು, ನಡೆದಾಡಲು ಏದುಸುರಿನ ತೊಂದರೆ.

ಇವರು ಮೂರು ಬಾರಿ ಮಂಡ್ಯ ಕ್ಷೇತ್ರದಿಂದ ಸಂಸದರಾಗಿದ್ದರು ಎಂಬ ಮಾತು ಇದೆ. ಹಿಂದೊಮ್ಮೆ ರಾಜೀನಾಮೆ ನೀಡಿದ್ದರು. ಅದು ತಿರಸ್ಕಾರಗೊಂಡಿತೋ ಇಲ್ಲವೋ ಎಂಬುದು ತಿಳಿದು ಬಂದಿಲ್ಲ. ಸಂಸದರಾಗಿಯೇ ಮುಂದುವರೆದಿದ್ದರು ಎಂಬ ಅನುಮಾನ ಇದೆ. ಈಗಲೂ ರಾಜೀನಾಮೆ ನೀಡಿದ್ದಾರೆ. ಅದರ ಗತಿ ಏನಾಗಿದೆಯೋ ತಿಳಿದಿಲ್ಲ.

ನಟನಾ ಸಾಮರ್ಥ್ಯ ಇದೆ ಎಂದು ಹೇಳಲಾಗುತ್ತಿದೆ. ಆದುದರಿಂದ ಎಲ್ಲಿಯಾದರೂ ಛದ್ಮವೇಷಧಾರಿಯಾಗಿ ಇರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಐಶಾರಾಮಿ ಹೋಟೆಲುಗಳಲ್ಲಿ, ಕ್ಲಬ್ಬುಗಳಲ್ಲಿ, ಬಾರುಗಳಲ್ಲಿ, ಕುದುರೆ ರೇಸಿನ ಮೈದಾನದಲ್ಲಿ ಸಿಗುವ ಸಾಧ್ಯತೆ ಹೆಚ್ಚು.

ಇವರನ್ನು ಹುಡುಕಿಕೊಟ್ಟವರಿಗೆ ಸೂಕ್ತ ಬಹುಮಾನ ಉಂಟು.

ಮಧ್ಯಾಹ್ನದ ಉರಿಬಿಸಿಲು. ಬಸ್ಸಿಗೆ ಬ್ರೇಕ್ ಹಾಕಿದಾಗ ತಕ್ಷಣ ಎಚ್ಚರ ಆಯಿತು. ಥೂ ಕನಸು ಎಂದು ಬೈದುಕೊಂಡೆ.

-ಎಚ್.ಎಲ್.ಕೇಶವಮೂರ್ತಿ

ಸರಕಾರವೇ ಬೆತ್ತಲೆ ನಿಂತಿರುವುದನ್ನು ತೋರಿಸಿದ 'ಲಂಕೇಶ್'

ಮಾರ್ಚ್ 8ರ ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ 'ಲಂಕೇಶ್-72' ಕಾರ್ಯಕ್ರಮ ನಿಜಕ್ಕೂ ಅರ್ಥಪೂರ್ಣವೂ, ಅಪೂರ್ವವೂ ಆಗಿತ್ತು, ರಾಜಕಾರಣಿಗಳ ಆರ್ಭಟವಿಲ್ಲದ ಸ್ವಾರಸ್ಯಕರ ಕಾರ್ಯಕ್ರಮ ಅದಾಗಿತ್ತು, ವೇದಿಕೆಯಲ್ಲೂ, ಪ್ರೇಕ್ಷಕ ವರ್ಗದಲ್ಲೂ ಹೆಸರಾಂತ ಲೇಖಕರು, ವಿಮರ್ಶಕರು, ವೇದಿಕೆಯಿಂದ ಮಾತನಾಡಿದ ಸಾ.ರಾ., ಕಿ.ರಂ., ಗೌರಿ, ಈಶ, ಹೀಗೇ ಎಲ್ಲರದೂ ವೈಚಾರಿಕತೆಯ ಕರಾರುವಾಕ್ ಮಾತುಗಳು. ನೆರೆದಿದ್ದ ಸಭಿಕರಿಗೆ ಹೊಸ ಅನುಭವ. ಸರ್ಜಾಶಂಕರ್‌ರವರಿಂದ ಅಚ್ಚುಕಟ್ಟಾದ, ಎಲ್ಲೂ ನೀರಸವಾಗದ ಕಾರ್ಯಕ್ರಮ ನಿರೂಪಣೆ. ಇದರೊಡನೆ ಮರಾಠಿಯ 'ಮಾತಿಮಾಯ್' ನಂತಹ ಅರ್ಥಪೂರ್ಣ ಕಲಾತ್ಮಕ ಚಿತ್ರದಿಂದ ಜನ ವಿಸ್ಮಯಗೊಂಡಿದ್ದರು.

ಚಿತ್ರವೆಂದರೆ ಕೊಡಲಿ-ಗುರಾಣಿ ಮಾತ್ರವಲ್ಲ, ಹೀಗೂ ಚಿತ್ರಗಳಿವೆ ಎಂದು ತೋರಿಸಿಕೊಟ್ಟರು. ಪ್ರದರ್ಶನದ ಮಧ್ಯೆ ಎರಡು ಬಾರಿ ವಿದ್ಯುತ್ ಕೈಕೊಟ್ಟರೂ ಜನರು ತುಟಿಪಿಟಿಕ್ಕೆನ್ನದೆ ಕುಳಿತಿದ್ದರೆಂದರೆ ಅದು ಲಂಕೇಶರ ಬಗ್ಗೆ, ಗೌರಿಯವರ ಬಗ್ಗೆ, ಪತ್ರಿಕಾ ಬಳಗದ ಬಗ್ಗೆ ಜನರು ತೋರಿದ ಆದರ, ಗೌರವದ ಸಂಕೇತ.

ಇಂತಹ ಒಳ್ಳೆಯ ಕಾರ್ಯಕ್ರಮ ನೀಡಿದ ಗೌರಕ್ಕನವರಿಗೂ, ಪತ್ರಿಕಾ ಬಳಗದವರಿಗೂ ಧನ್ಯವಾದಗಳು.

-ಬಾವಾ ಮಾಲ್ದಾರ, ಬೆಂಗಳೂರು

ಲಂಕೇಶ್-72 ಕಾರ್ಯಕ್ರಮವನ್ನು ಸರಳ ಹಾಗೂ ಚೊಕ್ಕವಾಗಿಸಿದ್ದಕ್ಕೆ ತಮಗೆ ಧನ್ಯವಾದಗಳು. ಇನ್ನು, ಕಾರ್ಯಕ್ರಮದ ಕೊನೆಯಲ್ಲಿ ತೋರಿಸಿದ 'ಮಾತಿಮಾಯ್' ಚಿತ್ರವಂತೂ ನನ್ನನ್ನು ಅಗಾಧವಾದ ಚಿಂತನೆಗೆ ಈಡುಮಾಡಿದೆ.

-ಮೋಹನ್ ಡಿಬ್ಬೂರ್,
ತುಮಕೂರು

ಮಾರ್ಚ್ 21ರ ಸಂಚಿಕೆಯಲ್ಲಿ ಪತ್ರಕರ್ತ ಬಿ.ವಿ. ಸೀತಾರಾಂ ಬಂಧನದಲ್ಲಿ ಧರ್ಮಸ್ಥಳ ಹೆಗ್ಗಡೆಯ ಪಾತ್ರವನ್ನು ಸ್ಪಷ್ಟವಾಗಿ ವಿವರಿಸಿದ್ದೀರಿ. ಧರ್ಮಸ್ಥಳದವರ ಅನಾಚಾರ, ದುರಾಸೆ ಮತ್ತು ದಬ್ಬಾಳಿಕೆಯನ್ನು ಪ್ರಶ್ನಿಸುವವರೇ ಇಲ್ಲವಾಗಿದ್ದಾರೆ. ಪ್ರಶ್ನಿಸುವವರಿಗೆ ಕೇಡು ತಪ್ಪಿದ್ದಲ್ಲ, ಹೀಗೆ ಇದು ಇನ್ನೊಂದು 'ಡಿ' ಕಂಪೆನಿಯಾಗಿದೆ. ಇವರ ದೈವೋದ್ಯಮ ಮತ್ತು ಕೃತ್ಯಗಳು ಇದೇ ರೀತಿ ಬೆಳೆಯುತ್ತಾ ಹೋದರೆ, ಮುಂದಿನ ದಿನಗಳು ಇಲ್ಲಿನ ಸ್ಥಳೀಯ ರಿಗೆ ದುಃಸ್ವಪ್ನವಾಗುವುದು ಖಂಡಿತ. ನಿಮ್ಮಂತೆ ಬೇರೆ ಪತ್ರಿಕೆಗಳೂ ಈ ಕುರಿತು ಬೆಳಕು ಚೆಲ್ಲಿ ಜನಜಾಗೃತಿ ಮೂಡಿಸಬೇಕಿದೆ.




ಶಂಕರಭಟ್ಟ, ಬೆಳ್ತಂಗಡಿ

'ಲಂಕೇಶ್' ವಾರಪತ್ರಿಕೆ ಎರಡನೇ ವಾರ್ಷಿಕೋತ್ಸವ ಹಾಗೂ 'ಗೈಡ್' ಮಾಸಿಕದ ಒಂದನೇ ವಾರ್ಷಿಕೋತ್ಸವ ಜರುಗಿದ್ದು ಸಂತೋಷದ ಸಂಗತಿ. ಈ ಸಂದರ್ಭದಲ್ಲಿ ಡಾ. ಜಿ. ರಾಮಕೃಷ್ಣ, ಶ್ರೀಮತಿ ಸಾರಾ, ಡಾ. ಕಿರಂ ಹಾಗೂ ಡಾ. ಮರುಳಸಿದ್ದಪ್ಪನವರು ಭಾಗವಹಿಸಿದ್ದು ಅರ್ಥಪೂರ್ಣವಾಗಿದೆ.

ಕನ್ನಡ ಸಾಹಿತ್ಯ ಲೋಕದ ಅಂಕುಶದಂತಿದ್ದ ಲಂಕೇಶರನ್ನು ಈ ಸಂದರ್ಭದಲ್ಲಿ ನೆನಪಿಸುವುದು ಕೂಡ ಅನಿವಾರ್ಯ ಮತ್ತು ಅಗತ್ಯವಾಗಿದೆ. ಇಂದಿನ ಹುಚ್ಚಾಬಟ್ಟೆ ಆರ್ಭಟಗಳು, ಅನರ್ಥಕಾರಿ ಸಂಗತಿಗಳಿಗೆ ಲಂಕೇಶ್ ಚಿಂತನೆಗಳು ಉತ್ತರವಾಗಬೇಕಿದೆ. ಈ ದಿಶೆಯಲ್ಲಿ ನಿಮ್ಮ ಕಾರ್ಯ ನಡೆಯಲಿ ಎಂದು ಆಶಿಸುವೆ.

-ಸತೀಶ್ ಕುಲಕರ್ಣಿ, ಹಾವೇರಿ



ಪತ್ರಕರ್ತ ಸೀತಾರಾಂ ಜೈನ ಮುನಿಗಳ ಬಗ್ಗೆ ಬರೆದುದರಲ್ಲಿ ತಪ್ಪೇನಿದೆ? ಆದಿಮಾನವರಾದರೂ ನಾಗರಿಕತೆ ತಿಳಿಯದೆ ಬೆತ್ತಲೆ ಅಡ್ಡಾಡುತ್ತಿದ್ದರು. ಇವರೇನು ಆದಿಮಾನವರೂ ಅಲ್ಲ ಬದಲಿಗೆ ಆಧುನಿಕ ಜಗತ್ತಿಗೆ ಮಾರ್ಗದರ್ಶಕರಾಗಿರುವವರು. ಇಂಥವರಿಗೆ ಮರ್ಯಾದೆ ಮುಚ್ಚಲು ಸ್ವಲ್ಪವಾದರೂ ಬಟ್ಟೆ ಬೇಡವೇ? ನಮ್ಮ ಊರಿನ ಸಣ್ಣ ಮಕ್ಕಳೂ ಇವರನ್ನು ಮುಜುಗರದಿಂದ ನೋಡುತ್ತಾರೆ. ಇನ್ನು ಕಾಲೇಜು ವಿದ್ಯಾರ್ಥಿಗಳಂತೂ ಮುಖ ಮುಚ್ಚಿಕೊಂಡು ಹೋಗುತ್ತಾರೆ. ಬೆತ್ತಲೆ ಸೇವೆ ನಿಷೇಧಕ್ಕೆ ಹೋರಾಡುವ ಸರ್ಕಾರ ಈ ಬೆತ್ತಲೆಗೆ ಇನ್ನೂ ಏಕೆ ನಿಷೇಧವೇರಿಲ್ಲ?

ಇದರ ವಿರುದ್ಧ ಬರೆದ ಸೀತಾರಾಮ್‌ರಿಗಂತೂ ನನ್ನ ನೈತಿಕ ಬೆಂಬಲವಿದೆ.

ಟಿ.ಯು. ಕುಮಾರ್,
ಬೆಳಗಾಂ

ಹೊಗಳಿಕೆ ತೆಗಳಿಕೆ

ದಕ್ಷಿಣ ಕನ್ನಡ ಜಿಲ್ಲೆಯ ಪ್ರಭಾವಿ ಪತ್ರಿಕೆಗಳಾದ ಕರಾವಳಿ ಅಲೆ, ಕನ್ನಡ ಜನ ಅಂತರಂಗ ಎಂಬ ಸಂಜೆ ಪತ್ರಿಕೆಗಳ ಸಂಪಾದಕರಾದ ಬಿ.ವಿ. ಸೀತಾರಾಂರವರ ಬಂಧನದ ವಿರುದ್ಧ ಪ್ರತಿಭಟನಾ ಲೇಖನ ಅರ್ಥಪೂರ್ಣವಾಗಿತ್ತು.

ಪ್ರಾಣಿಪಕ್ಷಿಗಳು ತನ್ನ ಬಾಲ ಮತ್ತು ಗರಿಗಳ ಮೂಲಕ ಅಲ್ಪಸ್ವಲ್ಪವಾದರೂ ತನ್ನ ಮಾನವನ್ನು ಕಾಪಾಡಿಕೊಳ್ಳುತ್ತಿರುವಾಗ, ತನ್ನ ಮಾನವನ್ನು ಕಾಪಾಡಲೇಬೇಕಾದ ಮತ್ತು ತನ್ನ ಮಾನವನ್ನು ಕಾಪಾಡದಿದ್ದರೆ ಅಸಹ್ಯವಾಗಿ ಕಾಣುವ ಮಾನವನೇ ತನ್ನ ಮಾನವನ್ನು ಕಾಪಾಡಿಕೊಳ್ಳದ ಬಗ್ಗೆ ಬಿ.ವಿ. ಸೀತಾರಾಮ್‌ರವರು ಬರೆದ ಲೇಖನ ಅರ್ಥಪೂರ್ಣವೇ ಆಗಿದ್ದರೂ ಅದು ಅವರ ಬಂಧನಕ್ಕೆ ದಾರಿಯಾದದ್ದು ಮಾತ್ರ ವಿಪರ್ಯಾಸವೇ ಸರಿ. ಬಿ.ವಿ. ಸೀತಾರಾಮ್‌ರವರ ಬಂಧನದ ವಿರುದ್ಧ ಇಲ್ಲಿನ ಇತರ ಪತ್ರಿಕೆಗಳು ಒಗ್ಗಟ್ಟಾಗಿ ಪ್ರತಿಭಟನೆ ವ್ಯಕ್ತಪಡಿಸದಿದ್ದುದರಿಂದ ಈ ರೀತಿಯ ಸಮಸ್ಯೆಗಳು ಇತರ ಪತ್ರಿಕೆಗಳಿಗೂ ವ್ಯಾಪಿಸುವುದರಲ್ಲಿ ಅನುಮಾನವೇ ಇಲ್ಲ.

ಸೂತ್ರಬೆಟ್ಟು ಚಂದ್ರಶೇಖರ್ ರೈ, ಪುತ್ತೂರು.

ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಭೈರಪ್ಪನವರ 'ಆವರಣ'ದ ಬಗ್ಗೆ ಶಿವಸುಂದರ್ ಬರೆದ ಲೇಖನ ಚೆನ್ನಾಗಿದೆ. ಆ ಕಾದಂಬರಿ, ಬಿಸಿ ದೋಸೆ, ಗರಮಾಗರಂ ಕಳ್ಳೇಕಾಯಿಯಂತೆ ಮಾರಾಟವಾಗುತ್ತಿದೆಯಂತೆ! (ಕ್ಲೀಷೆಗಾಗಿ ಕ್ಷಮಿಸಿ. ಭೈರಪ್ಪ ಎಂದರೇ ಹೀಗೆ- ಕ್ಲೀಷೆ ಮತ್ತು ಕೆಟ್ಟ ಗದ್ಯ!) ಹಾಗಾಗಿ ಅದರ ಬಗ್ಗೆ ವಿಜಯ ಕರ್ನಾಟಕದ ತುತ್ತೂರಿ ಯಾಕೋ ನನಗೆ ಅರ್ಥವಾಗು ತ್ತಿಲ್ಲ. 'ಆವರಣ'ದ ನಿರೂಪಣಾ ತಂತ್ರದ ಹಾಗೆಯೇ ವಿ.ಕ.ದ ವಕಾಲತ್ತು ಕೂಡ ನಗು ತರಿಸುತ್ತದೆ.

ಆದರೆ "ಮುಸ್ಲಿಮರನ್ನು ಕೊಲ್ಲಿ; ಇಲ್ಲವಾದರೆ ಅವರು ನಿಮ್ಮನ್ನು ಕೊಲ್ಲುತ್ತಾರೆ'' ಎಂಬುದು ಕಾದಂಬರಿಯ ಸಂದೇಶ. ಅದು ಬಟ್ಟರೆ ಕಾದಂಬರಿಯಲ್ಲಿ ಏನಿದೆ?- ನೆನೆಸಿಕೊಂಡರೆ ನಗು ಮಾಯವಾಗಿ ಭಯ ಆವರಿಸಿಕೊಳ್ಳುತ್ತದೆ. ಆದಾಗ್ಯೂ ಭೈರಪ್ಪನವರ ಶೈಲಿ ಹಾಗೂ ಪಾತ್ರ ಚಿತ್ರಣದ ವೈಖರಿ ನೋಡಿ ನಗುವುದಕ್ಕೆ ನಮಗೆ ಸಾಧ್ಯವಾಗಬೇಕು. One should dare to laugh at the likes of Byrappa and Modi ಎಂದು ಈಗ ನನಗೆ ಅನ್ನಿಸುತ್ತಿದೆ. ಭಯವಂತೂ ಖಂಡಿತ ಸಲ್ಲದು. ಅದು ಇನ್ನಷ್ಟು ಹಿಂಸೆಯನ್ನೇ ಸೃಷ್ಟಿಸೀತು.

ಜಿ. ರಾಜಶೇಖರ, ಉಡುಪಿ

ಅಣ್ಣಾವ್ರು ಹೋಗ್ಬಿಟ್ರಂತೆ ಹೌದಾ?

ಹೀಗಿಂತ ಒಂದು ಸುದ್ದಿ ಬರಸಿಡಿಲಿನಂತೆ ಬಂದೆ ಗಿದಾಗ ನಾನು ಗಾಜನೂರಿನಲ್ಲಿದ್ದೆ. ಒಂದೇ ಸಮನೆ ಫೋನುಗಳ ಸುರಿಮಳೆಯಾಗುತ್ತಿತ್ತು. ಆತಂಕಗೊಂಡ ನಾನು ಕೂಡಲೇ ಮನೆಗೆ ಫೋನು ಮಾಡಿದೆ. ನಾನು "ಹಲೋ" ಎಂದ ತಕ್ಷಣ "ಏನ್ ಕಂದಾ, ನೀನು ೂಡಾ ಅದೇ ವಿಷಯಕ್ಕೆ ಫೋನ್ ಮಾಡ್ತಾ ಇರೋದಾ.....?" ಎಂದು ಫೋನ್ ಎತ್ತಿದ ಅಪ್ಪಾಜಿಯೇ ನಕ್ಕುಬಿಟ್ಟರು. ಆ ಕ್ಷಣ ನಾನು ಯಾವುದೋ ಸಿನಿಮಾದಲ್ಲಿ ನಟಿಸುತ್ತಿದ್ದೇನೋ ಎಂದೆನಿಸಿತು. ಅಪ್ಪಾಜಿ ಮಾತನಾಡುತ್ತಿದ್ದಾಗ ನಾನು ದೇವರನ್ನು ಮನಸ್ಸಿನಲ್ಲೇ ಸ್ಮರಿಸುತ್ತಿದ್ದೆ; ನನ್ನ ಬಾಯಿಂದ ಯಾವ ಮಾತುಗಳೂ ಹೊರಬರಲಿಲ್ಲ. ಅದನ್ನು ಗಮನಿಸಿದ ಅಪ್ಪಾಜಿ "ನಿನ್ನ ಅಪ್ಪಾಜಿಗೆ ಏನೂ ಆಗಲ್ಲ ಂದ... ನೀನು ಆರಾಮಾಗಿರು" ಎಂದರು.

ಅಷ್ಟೊತ್ತಿಗೆ 'ಅಣ್ಣಾವ್ರು ಹೋಗ್ಬಿಟ್ರಂತೆ' ಎಂಬ ಸುದ್ದಿ ಇಡೀ ಬೆಂಗಳೂರಿನಲ್ಲಿ ಕಾಡ್ಗಿಚ್ಚಿನಂತೆ ಹಬ್ಬಿತ್ತು. ಅಭಿಮಾನಿಗಳು ಕಲ್ಲಣಗೊಂಡರು, ಹಲವು ಅಂಗಡಿಗಳು ಮುಂಗಟ್ಟುಗಳನ್ನು ಮುಚ್ಚಿದರು, ಕೆಲವೆಡೆ ಕಲ್ಲು ತೂರಾಟ ಆರಂಭವಾಯಿತು. ಕಚೇರಿ ಮತ್ತು ಸ್ಕೂಲುಗಳಿಂದ ಮನೆಗೆ ಹೋಗುವವರೆಗೆ ತೊಂದರೆಯಾಯಿತು. ನಾವೆಲ್ಲಾ "ಅಣ್ಣಾವ್ರಿಗೆ ಏನೂ ಆಗಿಲ್ಲ" ಎಂದು ಹೇಳಿದರೂ ಯಾರೂ ನಂಬಲಿಲ್ಲ. ಅಷ್ಟೇ ಅಲ್ಲ, ಅಭಿಮಾನಿಗಳನ್ನು ಸಮಾಧಾನಿಸುವುದು ಯಾರಿಂದಲೂ ಸಾಧ್ಯವಾಗಲಿಲ್ಲ. ಪರಿಸ್ಥಿತಿ ಕೈ ಮೀರಿ ಹೋಗುತ್ತಿರುವುದನ್ನು ಗಮನಿಸಿದ ಅಧಿಕಾರಿಗಳು ಕೊನೆಗೆ ಅಪ್ಪಾಜಿಯೇ ಟಿವಿಯಲ್ಲಿ ಕಾಣಿಸಿಕೊಂಡರೆ ಒಳಿತು ಎಂದು ಸಲಹೆ ನೀಡಿದರು.

"ಈ ನಿಮ್ಮ ರಾಜ್ಕುಮಾರ್‌ಗೆ ಏನೂ ಆಗಿಲ್ಲ... ಗುಂಡ್ಕಲ್, ಗುಂಡ್ಕಲ್ ಥರ ಅವ್ನೆ ಈ ನಿಮ್ಮ ರಾಜ್ಕುಮಾರ..." ಎಂದು ನಗುನಗುತ್ತಾ ಎರಡು ವಾಕ್ಯವನ್ನು ದೂರದರ್ಶನದಲ್ಲಿ ಅಪ್ಪಾಜಿ ಹೇಳಿದ ನಂತರ ಬೆಂಗಳೂರು ಮತ್ತೆ ಯಥಾಸ್ಥಿತಿಗೆ ಮರಳಿತು. ನಮಗೂ ಸ್ವಲ್ಪ ರಿಲೀಫ್ ಸಿಕ್ಕಿತು. ಫೋನುಗಳ ಆರ್ಭಟ ನಿಂತುಹೋಯಿತು.

ಅವತ್ತು ನಾವು ಮನೆಯಲ್ಲೇ ಪತ್ರಿಕಾಗೋಷ್ಠಿಯನ್ನು ಕೂಡಾ ಕರೆದಿದ್ದೆವು. ಯಾಕೆಂದರೆ ರಾಜ್‌ಕುಮಾರ್ ನಿಧನ ಹೊಂದಿದ್ದಾರೆ ಎಂಬ ಗಾಳಿ ಸುದ್ದಿಯ ಕಾರಣದಿಂದ ಜನಸಾಮಾನ್ಯರ ಆಸ್ತಿಪಾಸ್ತಿಗಳಿಗೆ ನಷ್ಟವಾಗಬಾರದು, ಯಾರಿಗೂ ನೋವಾಗಬಾರದು ಎಂದು. ಅಂದು ಬೆಂಗಳೂರಿನ ಎಲ್ಲ ಪತ್ರಿಕೆಯ ವರದಿಗಾರರು ಜಮಾಯಿಸಿದ್ದರು.

ಅಪ್ಪಾಜಿ ಬಂದು ಪತ್ರಕರ್ತರ ಎದುರು ಕುಳಿತುಕೊಂಡಾಕ್ಷಣ ಒಂದೇ ಸಮನೆ ಫೋಟೋ ಗ್ರಾಫರ್‌ಗಳು ಕೆಮೆರಾ ಕ್ಲಿಕ್ಕಿಸುತ್ತಾ ಹೋದರು. ಅಪ್ಪಾಜಿಗೆ ಏನು ಮಾತಾಡಬೇಕೆಂಬುದೇ ತೋಚಲಿಲ್ಲ. ಪತ್ರಕರ್ತರಿಗೂ ಅಷ್ಟೇ.... ಈ ವಿಷಯವನ್ನು ಹೇಗೆ ಪ್ರಸ್ತಾಪಿಸುವುದು ಎಂಬ ಮುಜುಗರವೋ ಏನೋ, ಅವರೂ ಮೌನವಾಗಿದ್ದರು.

ಕೊನೆಗೆ ಪತ್ರಕರ್ತರೊಬ್ಬರು ""ಈ ಸುದ್ದಿಗೆ **what is your reaction** ಡಾ. ರಾಜ್‌ಕುಮಾರ್ ಅವರೇ?" ಎಂದು ಕೇಳಿದರು. ಅದಕ್ಕೆ





ಅಪ್ಪಾಜಿಯವರು "ನಂದೇನು ಭಾಗ್ಯ ನೋಡಿ. ಸಾಧಾರಣವಾಗಿ ಸತ್ಮೇಲೆ ಮನುಷ್ಯಂಗೆ ಅವ್ನ ದೇಹ ನೋಡುವ ಭಾಗ್ಯ ಸಿಗುವುದಿಲ್ಲ. ಆದ್ರೆ ನನ್ಗೆ ಅಂತಹ ಒಂದು ಸೌಭಾಗ್ಯವನ್ನು ಆ ದೇವ್ರು ನೀಡಿದ್ದಾನೆ. ನಾನು ಸತ್ಹೋಗ್‌ಬಿಟ್ರೆ ಎಷ್ಟು ಜನ ಕಷ್ಟ ಪಡುವವರಿದ್ದಾರೆ ನೋಡಿ? ಈ ರಾಜ್‌ಕುಮಾರ್ ಇಷ್ಟು ಅಭಿಮಾನಿ ದೇವರುಗಳನ್ನು ಸಂಪಾದನೆ ಮಾಡಿದ್ದಾನಲ್ಲಾ.... ನಾನು ಧನ್ಯ. ಯಾವ ಮನುಷ್ಯನಿಗೆ ಇಂಥ ಸೌಭಾಗ್ಯ ಸಿಗುತ್ತೆ? ಸಾಕು.... ಸಾರ್ಥಕವಾಯಿತು ನನ್ನ ಜೀವನ.... ಇನ್ನೇನಾದ್ರೂ ಪರವಾಗಿಲ್ಲ...." ಎಂದು ಫಿಲಾಸಾಫಿಕಲ್ ಆಗಿ ಉತ್ತರಿಸಿದರು.

ಆ ಮಾತುಗಳನ್ನು ಕೇಳಿದಾಗ ಪತ್ರಕರ್ತರಿಗೆ ಏನನ್ನಿಸಿತೋ ಏನೋ? "ಅಯ್ಯಯ್ಯಯ್ಯೋ ಹಿಂಗೆಲ್ಲಾ ಹೇಳ್ಬೇಡಿ ರಾಜ್‌ಕುಮಾರ್ ಅವರೇ.... ನೀವು ನೂರ್ಕಾಲ ಬದುಕಿ ಬಾಳಬೇಕು" ಎಂದು ಹಾರೈಸಿದರು.


ಪತ್ರಿಕಾಗೋಷ್ಠಿ ಮುಗಿದ ನಂತರ ಅಪ್ಪಾಜಿಗೆ ನಾನೊಂದು ಪ್ರಶ್ನೆಯನ್ನು ಕೇಳಿದೆ. "ಅಪ್ಪಾಜಿ ಈ ಸುದ್ದಿ ಕೇಳಿ ನಿಮಗೇನನ್ನಿಸುತ್ತಿದೆ?" ಎಂದಾಗ ಅವರು "ನೋಡು ಕಂದಾ.... ಸಾವು ಎಂಬುದು ಈ ಮನುಷ್ಯನ ಜೀವನದ ಒಂದು ಅವಿಭಾಜ್ಯ ಅಂಗ. ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಹಾಗಂಥ ಸಾವಿಗೆ ಹೆದರಿಕೊಂಡು ಬದುಕುವ ಅಗತ್ಯವೂ ಇಲ್ಲ. ಸಾಯುವ ಭಯವೇ ಈ ನಮ್ಮ ಬದುಕಿಗೆ ಸ್ಫೂರ್ತಿಯಾಗಬೇಕೇ ವಿನಃ ಅದಕ್ಕೆ ಹೆದರಿ ಮುದುಡಿ ಕುಳಿತುಕೊಳ್ಳಬಾರದು" ಎಂದರು. ನಾನು ಅವರ ಮಾತು ಕೇಳಿ ಸ್ತಂಭೀಭೂತನಾದೆ. ಅಂತಹ ಸಂದರ್ಭದಲ್ಲೂ ಅವರು ಸಾವಿನ ಬಗ್ಗೆ ತೋರಿಸಿದ ತಾತ್ಸಾರ, ಜೀವನದ ಬಗ್ಗೆ ತೋರಿಸಿದ ಉತ್ಸಾಹ ನನಗೆ ಸ್ಫೂರ್ತಿಯಾಯಿತು. ಭೂತಕಾಲದ ಬಗ್ಗೆ ಕರುಬದ, ಭವಿಷ್ಯದ ಬಗ್ಗೆ ಹೆದರದ, ವರ್ತಮಾನದಲ್ಲಿ ಪ್ರತಿ ಕ್ಷಣವನ್ನೂ ಅನುಭವಿಸಬೇಕು ಎಂಬ ಒಂದು ಅದ್ಭುತ ಸಿದ್ಧಾಂತವನ್ನು ಅವರ ಮಾತಿನಲ್ಲಿ ಕಂಡುಕೊಂಡೆ. ರಾಜ್‌ಕುಮಾರ್ ವಿದ್ಯಾವಂತ ರಲ್ಲ. ಆದರೆ ಅವರು ಆಡುತ್ತಿದ್ದ ಮಾತುಗಳು ಯಾವ ವಿದ್ಯಾವಂತರಿಗೂ ಕಡಿಮೆಯಿರಲಿಲ್ಲ ಎಂದು ನಾನು ಅಂದದ್ದು.

ಅಂದು ಅಪ್ಪಾಜಿಗೆ ಏನೂ ಆಗಿಲ್ಲ ಎಂಬ ಸಂತೋಷ ಮತ್ತು ಸಮಾಧಾನ ನಮ್ಮದಾಗಿದ್ದರೂ ಅದೇ ಮೊದಲ ಬಾರಿಗೆ 'ಸಾವು' ನಮ್ಮ ಮನೆಯ ಬಾಗಿಲು ತಟ್ಟಿದ್ದು ನಮ್ಮನ್ನೆಲ್ಲಾ ದಿಗಿಲುಗೊಳಿಸಿತ್ತು. ಆಗ ಯಾರೋ ಒಬ್ಬರು 'ಕವಿರತ್ನ ಕಾಳಿದಾಸ' ಚಿತ್ರದಲ್ಲಿ ಅಪ್ಪಾಜಿ ಇಂತಹದ್ದೇ ಒಂದು ಪಾತ್ರವನ್ನು ನಿರ್ವಹಿಸಿದ್ದರ ಬಗ್ಗೆ ನೆನಪಿಸಿಕೊಂಡರು. ಆ ಚಿತ್ರದಲ್ಲಿ ಕಾಳಿದಾಸನ ಪಾತ್ರದಲ್ಲಿದ್ದ ಅಪ್ಪಾಜಿ ಚರಮಗೀತೆ ಹಾಡಿದಾಗ ಭೋಜರಾಜ ಸತ್ತುಹೋಗುತ್ತಾನೆ. ಆ ನಂತರ ಅಪ್ಪಾಜಿ ಮತ್ತೊಂದು ಶ್ಲೋಕವನ್ನು ಹಾಡಿದಾಗ ಭೋಜರಾಜ ಮತ್ತೆ ಜೀವ ತಳೆಯುತ್ತಾನೆ. ರೀಲ್ ಲೈಫ್‌ನಲ್ಲಿ ಹಾಗಾಗಿದ್ದರೆ, ರಿಯಲ್ ಲೈಫ್‌ನಲ್ಲಿ ಈ ಥರ ಆಗಿತ್ತು ನೋಡಿ....

ಬಾಲ್ಯದಿಂದಲೂ ನಾವು ಸಂತೋಷ, ಸಂಭ್ರಮ, ಶತಮಾನೋತ್ಸವ, ಹೀಗೆ... ಸುಖವನ್ನೇ ಅನುಭವಿಸಿಕೊಂಡು ಬಂದವರು. ಇದೇ ಮೊದಲ ಬಾರಿಗೆ ಅಪ್ಪಾಜಿಯ ಅನಾರೋಗ್ಯದ ಸುದ್ದಿ — ಅದು ಸುಳ್ಳಾಗಿದ್ದರೂ ಸಹ— ನಮ್ಮನ್ನೆಲ್ಲ ಅಲುಗಾಡಿಸಿತ್ತು. ಅಂದು ರಾತ್ರಿ ಮಲಗಿದಾಗ ನೂರೆಂಟು ವಿಷಯಗಳು ನನ್ನನ್ನು ಕಾಡಿದವು. ಅದೆಲ್ಲವನ್ನು ಹೇಳಲೂ ನನ್ನಿಂದ ಆಗುತ್ತಿಲ್ಲ.

ನಿರೂಪಣೆ: ಸದಾಶಿವ ಶೆಣೈ

45




ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಅಂತಹ ಒಂದು ಕೆಟ್ಟ ರಾತ್ರಿ ನನ್ನ ಜೀವನದಲ್ಲಿ ಮತ್ತೊಮ್ಮೆ ಬಾರದಿರಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತಾ ನಿದ್ದೆಗೆ ಜಾರಿದ್ದೆ...

ಇದನ್ನೆಲ್ಲ ಹೇಳುವಾಗ ನನಗೆ ಕಳೆದ ವರ್ಷ ಅಪ್ಪಾಜಿಯನ್ನು ಕಳೆದುಕೊಂಡ ಏಪ್ರಿಲ್ ೧೨ ನನ್ನನ್ನು ಕಾಡುತ್ತಿದೆ. ಭಾವುಕತೆ ನನ್ನನ್ನು ಆವರಿಸಿಕೊಳ್ಳುತ್ತಿದೆ.... ಅಪ್ಪಾಜಿ ಐ ರಿಯಲಿ ಮಿಸ್ ಯೂ...

(ಮುಂದುವರೆಯುತ್ತದೆ)

ಕಡಲ ತೀರದವರ ಸಾಧನೆಗಳು



ರಿಚರ್ಡ್ ಕ್ಯಾಸ್ಟಲಿನೋ ಎಂಬ ತುಳು ಚಿತ್ರದ ನಿರ್ದೇಶಕ ಹತ್ತು ವರ್ಷದ ಗ್ಯಾಪ್ ನಂತರ 'ಬದಿ' ಎಂಬ ಚಿತ್ರದ ಮುಖಾಂತರ ಮತ್ತೆ ಪ್ರತ್ಯಕ್ಷವಾಗಿದ್ದಾರೆ. ಇವರ ನಿರ್ದೇಶನದ ಬಂಗಾರ್ ಪಟ್ಲೇರ್' ಶತದಿನೋತ್ಸವ ಆಚರಿಸಿತ್ತು ಮಾತ್ರವಲ್ಲ, ರಾಷ್ಟ್ರಪ್ರಶಸ್ತಿಯನ್ನೂ ಪಡೆದಿತ್ತು. ಅದಾದ ನಂತರ ಕೇವಲ ಇಪ್ಪತ್ನಾಲ್ಕು ಗಂಟೆಯಲ್ಲಿ 'ಸೆಪ್ಟೆಂಬರ್ 8' ಎಂಬ ಚಿತ್ರವನ್ನು ನಿರ್ಮಿಸಿ ಸುದ್ದಿ ಮಾಡಿದ್ದರು. ಅವರ ಮೂರನೇ ಪ್ರಯತ್ನ ಕೊಣ್ಣಾಸ' ಎಂಬ ಕೊಂಕಣಿ ಚಿತ್ರ ಮಾತ್ರ ಕೈ ಕೊಟ್ಟಿತ್ತು. ಈಗ ಮತ್ತೆ ಬಂದಿದ್ದಾರೆ.

ಈ ಚಿತ್ರದ ನಿರ್ಮಾಪಕರಾದ ಫರ್ನಾಂಡೀಸ್ ಒಂದು ಚಿತ್ರದಾದ ದಾಖಲೆ ಮಾಡುತ್ತಿದ್ದಾರೆ. ಇವರ ನಿರ್ಮಾಣದ ಮೊದಲ ಚಿತ್ರ 'ಪಾದ್ರಿ' ಒಂದು ಕೊಂಕಣಿ ಚಿತ್ರ. ಈಗ ಉಪೇಂದ್ರರನ್ನು ಹಾಕಿಕೊಂಡು 'ಮನ್ಮಥ' ಎಂಬ ಕನ್ನಡ ಚಿತ್ರ ಮಾಡುತ್ತಿದ್ದಾರಲ್ಲದೆ, ಅದರ ಜೊತೆಗೆ 'ಬದಿ' ಎಂಬ ತುಳು ಚಿತ್ರವನ್ನೂ ನಿರ್ಮಿಸುತ್ತಿದ್ದಾರೆ. ಸದ್ಯದಲ್ಲೇ ಅವರು ಕೊಡವ ಚಿತ್ರವೊಂದನ್ನೂ ಆರಂಭಿಸುವ ಆಲೋಚನೆಯಲ್ಲಿದ್ದಾರೆ. ಅಲ್ಲಿಗೆ ಕರ್ನಾಟಕದ ನಾಲ್ಕು ಭಾಷೆಗಳಲ್ಲಿ ಚಿತ್ರ ನಿರ್ಮಿಸಿದ ಮೊದಲ ನಿರ್ಮಾಪಕ ಎಂಬ ಹೆಗ್ಗಳಿಕೆಗೆ ಅವರು ಪಾತ್ರವಾಗಲಿದ್ದಾರೆ.

ಗುಲಾಮಳಾದ ಕ್ರೇಜಿ ಕ್ವೀನ್

ಯುಗಾದಿ ಹಬ್ಬದ ದಿನದಂದು ಟಿ.ವಿ. ಚಾನೆಲ್‌ನವರು ಇತ್ತೀಚೆಗೆ ತಾನೆ ಮದುವೆಯಾದ ರಕ್ಷಿತಾಳ ಸಂದರ್ಶನದಲ್ಲಿ "ಹೇಗಿದೆ ನಿಮ್ಮ ವೈವಾಹಿಕ ಜೀವನ?" ಎಂದು ಕೇಳಿದರೆ, ಈ ಹುಡುಗಿ ಏನೆಂದು ಉತ್ತರಿಸಿದಳು ಗೊತ್ತಾ?

"ಡಿಫರೆಂಟಾಗಿದೆ" ಎಂದಳಾಕೆ.

ಅಲ್ಲಾ, ನಟ-ನಟಿಯರು ತಮ್ಮ ಹೊಸ ಚಿತ್ರಗಳ ಬಗ್ಗೆ, ಅದರಲ್ಲಿನ ತಮ್ಮ ಪಾತ್ರಗಳ ಬಗ್ಗೆ "ಡಿಫರೆಂಟಾಗಿದೆ" ಎಂದು ಹೇಳುವುದನ್ನು ಕೇಳಿದ್ದೇವೆ. ಆದರೆ ಕೇವಲ ಹತ್ತು ದಿನಗಳ ವೈವಾಹಿಕ ಜೀವನವನ್ನೇ "ಡಿಫರೆಂಟಾಗಿದೆ" ಎಂದರೆ ಏನೆನ್ನಬೇಕು?

ಅದೆಲ್ಲ ಇರಲಿ, "ನಿಮ್ಮ ಸಿನಿಮಾ ಪ್ರೊಡಕ್ಷನ್ ಕೆಲಸ ಯಾವಾಗ ಪ್ರಾರಂಭಿಸುತ್ತೀರಾ?" ಎಂಬ ಮತ್ತೊಂದು ಪ್ರಶ್ನೆಗೂ ರಕ್ಷಿತಾ ಉತ್ತರಿಸಿದ್ದು ಹೀಗೆ: "ಇವರು (ಪತಿ ಪ್ರೇಮ್) ಡೇಟ್ಸ್ ಕೊಟ್ಟಾಗ, ಇವರಿಗೆ ಬಿಡುವಾದಾಗ ಶುರು ಮಾಡುತ್ತೇನೆ."

ಅಲ್ಲಾ, ಗಂಡನಿಂದಲೇ ಡೇಟ್ಸ್, ಟೈಮ್ ಎಂದೆಲ್ಲಾ ಕ್ರೇಜಿ ಕ್ವೀನ್ ಕಾಯುವ ಬದಲಾಗಿ ತನ್ನ ಸ್ವಂತಿಕೆಯನ್ನು ಪ್ರದರ್ಶಿಸಬಾರದೇಕೆ? ಅಥವಾ ಮದುವೆ ಎಂಬ ಸಂಕೋಲೆಯಲ್ಲಿ ಸಿಲುಕಿ ಈ ಕ್ರೇಜಿ ಹುಡುಗಿ ಗುಲಾಮಳಾದಳೇ?



ಅನಿಲ್ ಕುಂಬ್ಳೆ ಸಿನಿಮಾ ಹೀರೋ!



ಮೊನ್ನೆ ಬಾಂಗ್ಲಾ ಹಾಗೂ ಶ್ರೀಲಂಕಾದ ವಿರುದ್ಧ ಆಡಿ ಹೀನಾಯವಾಗಿ ಸೋತು ವರ್ಲ್ಡ್ ಕಪ್‌ನಿಂದ ಭಾರತ ಹೊರಬಂದಿದ್ದು ನಿಮಗೆಲ್ಲಾ ಗೊತ್ತೇ ಇದೆ. ಇದರಿಂದ ಕುಪಿತಗೊಂಡಿರುವ ಕ್ರಿಕೆಟ್ ಪ್ರೇಮಿಗಳು ಇತ್ತ ಬೆಂಗಳೂರಿನಲ್ಲಿರುವ ಸ್ಪಿನ್ ಮಾಂತ್ರಿಕ ಅನಿಲ್ ಕುಂಬ್ಳೆಯ ಮನೆಗೆ ಕಲ್ಲು ತೂರಲು ಕಾಯುತ್ತಿದ್ದರೆ, ಅತ್ತ ಅನಿಲ್ ಕುಂಬ್ಳೆ ಮಾತ್ರ ಪ್ರೀತಿಶ್ ನಂದಿ ಕಮ್ಯುನಿಕೇಶನ್‌ರವರ ಹೊಸ ಚಿತ್ರ 'ಮೀರಾಬಾಯಿ ನಾಟ್‌ಔಟ್' ನಲ್ಲಿ ಹೀರೋ ಆಗಿ ನಟಿಸಲು ಅಣಿಯಾಗುತ್ತಿದ್ದಾರೆ.

ಹೆಚ್ಚಿನ ವಿವರಗಳು ಗುಪ್ತವಾಗಿದ್ದರೂ ಈ ಚಿತ್ರದಲ್ಲಿ ಹಿಂದಿ ನಟಿ ಮಂದಿರಾ ಬೇಡಿ ಅನಿಲ್ ಕುಂಬ್ಳೆಯ ಅಭಿಮಾನಿ 'ಮೀರಾ'ಳ ಪಾತ್ರದಲ್ಲಿ ನಟಿಸಲಿದ್ದಾಳೆ. ನಿಜ ಬದುಕಿನಲ್ಲಿ ಕ್ರಿಕೆಟರ್ ಆಗಿರುವ ಕುಂಬ್ಳೆ ಈ ಚಿತ್ರದಲ್ಲೂ ಕ್ರಿಕೆಟರ್ ಪಾತ್ರದಲ್ಲಿ ಅಭಿನಯಿಸಲಿದ್ದಾರೆ. ಚಂದ್ರಕಾಂತ ಕುಲಕರ್ಣಿ ಈ ಚಿತ್ರದ ನಿರ್ದೇಶಕರಂತೆ.

ಕ್ರಿಕೆಟ್ ಮತ್ತು ಸಿನಿಮಾ ಭಾರತದಲ್ಲಿ ಅತ್ಯುತ್ತಮ ಜನಪ್ರಿಯ, ಬಲಶಾಲಿ ರಂಗಗಳು. ಕ್ರಿಕೆಟ್ ಹೀರೋ ಕುಂಬ್ಳೆ ಸಿನಿಮಾ ಹೀರೋ ಆಗಿ ಸಕ್ಸಸ್ ಆಗುತ್ತಾರೆಯೇ ಎಂಬುದನ್ನು ಕಾದುನೋಡಬೇಕು.

ಭಾವನಾ ಬ್ಯಾಕ್



ಬಾಲಿವುಡ್‌ನಲ್ಲಿ ತನ್ನ ಭವಿಷ್ಯವನ್ನು ಅರಸಿಕೊಂಡು ಹೋಗಿದ್ದ ಅಚ್ಚ ಕನ್ನಡತಿ ಭಾವನಾ ಮೊನ್ನೆ ಬೆಂಗಳೂರಿನ ಸಮಾರಂಭವೊಂದರಲ್ಲಿ ನಿರೂಪಕಿಯಾಗಿ ಪ್ರತ್ಯಕ್ಷವಾದಳು. ಅದು ISIFA ಪ್ರಶಸ್ತಿಯ ಉದ್ಘಾಟನಾ ಸಮಾರಂಭ. ಈ ಪ್ರಶಸ್ತಿ ದುಬೈನಲ್ಲಿ ನಡೆಯಲಿದೆಯಂತೆ. ಹೀಗಾಗಿ ಕನ್ನಡ ಚಿತ್ರರಂಗದ ಬಹುತೇಕ ಎಲ್ಲ ನಾಯಕ ನಾಯಕಿಯರೂ ಅಲ್ಲಿ ಉಪಸ್ಥಿತರಿದ್ದರು. ಇದೆಲ್ಲಾ ಇಲ್ಲಿ ನಗಣ್ಯ.



"ಭಾವನಾ ಬ್ಯಾಕ್ ಟು ಕನ್ನಡ ಇಂಡಸ್ಟ್ರೀನಾ?" ಎಂದು ಕೆಲವರು ಆಕೆಯನ್ನು ಕೇಳಿದಾಗ "ಅವಕಾಶ ಸಿಗುವ ಸಾಧ್ಯತೆಯಿದೆ" ಎಂದಷ್ಟೇ ಆಕೆ ಹೇಳಿದಳು. ಅದಕ್ಕಿಂತಲೂ ಅಂದು ಹೆಚ್ಚು ಸುದ್ದಿಯಾಗಿದ್ದು ಆಕೆಯ ಬ್ಯಾಕ್! ಅರ್ಥಾತ್ ಬೆನ್ನು.

ಸಭೆಗೆ ಬೆನ್ನು ತೋರಿಸುವುದು ಸಭಾ ಮರ್ಯಾದೆಯಲ್ಲ. ಅದನ್ನು ಯಾರೂ ನಿರೀಕ್ಷಿಸುವುದೂ ಇಲ್ಲ. ಆದರೆ ಅಂದು ಭಾವನಾ ಸಭೆಗೆ ಬೆನ್ನು ಹಾಕಿ ನಿಲ್ಲಲಿ ಎಂದು ಸಭಿಕರು ಬಯಸಿದಂತಿತ್ತು. ಅದಕ್ಕೆ ಕಾರಣ ನಾವು ಹೇಳೊಲ್ಲ, ಇಲ್ಲಿರುವ ಫೋಟೋ ನೋಡಿದರೇ ನಿಮಗೇ ಅರ್ಥವಾಗುತ್ತದೆ!!



'ಅಮೃತವಾಣಿ' ಚಿತ್ರದಲ್ಲಿ ರಾಧಿಕಾ

ಸೋಲೂ ಸಂತಸ ತಂದಾಗ...



ಜೈ ಜಗದೀಶ್ ಪಾಲಿಗೆ 'ಏಕದಂತ' ಬಾಕ್ಸಾಫೀಸಿನಲ್ಲಿ ಬಿದ್ದುಹೋಗಿದ್ದು ವರವಾಗಿದೆ. ಏಕೆಂದರೆ ಅವರ ನಿರ್ಮಾಣದ, ವಿಷ್ಣು-ದರ್ಶನ್ ಅಭಿನಯದ ಹೊಸ ಚಿತ್ರಕ್ಕೆ 'ಏಕದಂತ'ದ ಸಚಿನ್‌ನನ್ನೇ ನಿರ್ದೇಶಕನನ್ನಾಗಿಸಬೇಕೆಂದು ವಿಷ್ಣುವರ್ಧನ್ ತಾಕೀತು ಮಾಡಿದ್ದರು. ಆದರೆ 'ಏಕದಂತ' ಮುಗ್ಗರಿಸಿರುವುದರಿಂದ ಈಗ ವಿಷ್ಣುಗೂ ಸಚಿನ್ ಬಗ್ಗೆ ಅಂತಹ ಆಸಕ್ತಿ ಇಲ್ಲ. ಹೀಗಾಗಿ ಸ್ವತಃ ಜೈ ಜಗದೀಶ್ ಈ ಚಿತ್ರವನ್ನು ನಿರ್ದೇಶಿಸಲು ನಿರ್ಧರಿಸಿದ್ದಾರೆ. ಈ ತೀರ್ಮಾನದಿಂದ ಕನಿಷ್ಠ ಇಪ್ಪತ್ತು ಲಕ್ಷ ರೂಪಾಯಿ ಉಳಿಸಿದ ಸಮಾಧಾನದಲ್ಲಿದ್ದಾರೆ ಜೈಜಗದೀಶ್.

ಸಚಿನ್‌ಗೆ ಬಲಗೈ ಬಂಟನಾಗಿದ್ದ ಭಾಸ್ಕರ್ ಈಗ ಜೈ ಜಗದೀಶ್ ಹೆಗಲಿಗೆ ಹೆಗಲು ಕೊಟ್ಟು ನಿಂತಿದ್ದಾರೆ. 'ಮದನ' ಚಿತ್ರ ಬಾಕ್ಸಾಫೀಸಿನಲ್ಲಿ ಮೊದಲ ದಿನವೇ ಅಡ್ಡಡ್ಡ ಮಲಗಿದ ನಂತರ ನಿರ್ದೇಶನದ ಸಹವಾಸವೇ ಬೇಡ ಎಂದು ಪ್ರತಿಜ್ಞೆ ಮಾಡಿದ್ದ ಜೈಜಗದೀಶ್‌ಗೆ ಇದು ಬಯಸದೇ ಬಂದ ಭಾಗ್ಯ ಎಂದರೆ ತಪ್ಪಾಗಲಾರದು.

'ಕಿರಣ್ ಬೇಡಿ' ಎಂಬ ಅಗ್ನಿಪರೀಕ್ಷೆ



ಓಂ ಪ್ರಕಾಶ್ ಮತ್ತು ರಾಮು ಎಂಬ ಜೋಡಿ ಮತ್ತೊಮ್ಮೆ ಜೊತೆಯಾಗಿದೆ. ಈ ಜೋಡಿಯ ಪ್ರಯಾಣ ಆರಂಭವಾಗಿದ್ದು ದೇವರಾಜ್ ನಟಿಸಿದ್ದ 'ಲಾಕಪ್ ಡೆತ್' ಚಿತ್ರದ ಮುಖಾಂತರ. ಆ ನಂತರ ಶಿವರಾಜ್‌ಕುಮಾರ್ ನಟಿಸಿದ್ದ 'ಸಿಂಹದ ಮರಿ' ಹಾಗು 'ಎಕೆ 47', ಮತ್ತು ಇತ್ತೀಚೆಗೆ ದರ್ಶನ್-ರಕ್ಷಿತಾ ನಟಿಸಿದ್ದ 'ಕಲಾಸಿಪಾಳ್ಯ' ತನಕ ಈ ಜೋಡಿ ಪಯಣಿಸಿತ್ತು. ಈ ನಾಲ್ಕು ಚಿತ್ರಗಳಲ್ಲಿ ಎರಡು ಸಿಲ್ವರ್ ಜ್ಯೂಬಿಲಿ, ಇನ್ನೆರಡು ಶತದಿನೋತ್ಸವ ಆಚರಿಸಿದ್ದವು. ಹೀಗಾಗಿ ಐದನೇ ಚಿತ್ರವೂ ಸೂಪರ್ ಹಿಟ್ ಆಗಬಹುದು ಎಂದು ಯಾರೂ ಲೆಕ್ಕಹಾಕುವಂತಿಲ್ಲ. ಬದಲಾಗಿ ಗಾಂಧಿನಗರದ 'ತಜ್ಞರ' ಪ್ರಕಾರ ಓಂ ಪ್ರಕಾಶ ಪಾಲಿಗೆ ಇದೊಂದು ಅಗ್ನಿಪರೀಕ್ಷೆ. ಯಾಕೆಂದರೆ ಈ ಚಿತ್ರದ ನಾಯಕಿ ಬೇರೆ ಯಾರೂ ಅಲ್ಲ, ರಾಮು ಪತ್ನಿ ಮಾಲಾಶ್ರೀ! 'ಕಿರಣ್ ಬೇಡಿ' ಎಂಬ ಹೆಸರಿನ ಈ ಚಿತ್ರ ಮುಂದಿನ ವಾರ ಸೆಟ್ಟೇರಲಿದೆ.

ಈಗ ಇರುವುದೊಂದೇ ಪ್ರಶ್ನೆ: ಓಂಪ್ರಕಾಶ್ ತನ್ನ ಜಯದ ಸರಪಳಿಯನ್ನು ಮುಂದುವರಿಸುತ್ತಾರೋ ಅಥವಾ ಮಾಲಾಶ್ರೀಯ ಸೋಲಿನ ಸರಪಳಿಯಲ್ಲಿ ಸಿಲುಕುತ್ತಾರೋ ಎಂಬುದು?!


ರಾಮು ಮತ್ತು ಮಾಲಾಶ್ರೀಯ ಪ್ರೀತಿ, ಪ್ರೇಮ, ಪ್ರಣಯದ ಬಗ್ಗೆ ಒಂದು ಪುಟ್ಟ ಟಿಪ್ಪಣಿ ಇಲ್ಲಿದೆ:

'ಮುತ್ತಿನಂತ ಹೆಂಡತಿ' ಚಿತ್ರವನ್ನು ನಿರ್ಮಿಸುವಾಗ ರಾಮು ಮತ್ತು ಮಾಲಾಶ್ರೀ ನಡುವೆ ಪ್ರೇಮಾಂಕುರವಾಗಿತ್ತು. ಆ ಚಿತ್ರ ಬಾಕ್ಸಾಫೀಸಿನಲ್ಲಿ ಮುಗ್ಗರಿಸಿದ್ದರೂ "ನನಗೆ ಮುತ್ತಿನಂತಹ ಹೆಂಡತಿ ಸಿಕ್ಕಿದಳು" ಎಂಬ ಆನಂದ ರಾಮುರದ್ದಾಗಿತ್ತು. ಆನಂತರ 'ಸರ್ಕಲ್ ಇನ್ಸ್‌ಪೆಕ್ಟರ್' ಎಂಬ ಚಿತ್ರವನ್ನು ರಾಮು ತನ್ನ ಮುದ್ದಿನ ಹೆಂಡತಿಗಾಗಿ ತುಂಬಾ ಅದ್ದೂರಿಯಾಗಿಯೇ ನಿರ್ಮಿಸಿದರು. ಅವರ ದುರಾದೃಷ್ಟಕ್ಕೆ ಅದೂ ಬಾಕ್ಸಾಫೀಸಿನಲ್ಲಿ ಕೈಕೊಟ್ಟಿತು. ಮೂರನೆ ಯತ್ನ ಎಂಬಂತೆ 'ಚಾಮುಂಡಿ' ಎಂಬ ಮತ್ತೊಂದು ಚಿತ್ರವನ್ನು ತೆರೆಗಿತ್ತರು. ಇದರಿಂದ ರಾಮು ಮತ್ತಷ್ಟು ನಷ್ಟ ಅನುಭವಿಸಿದರು. ಆದರೂ ತನ್ನ ಹೆಂಡತಿಯಲ್ಲಿ ನಂಬಿಕೆ ಕಳೆದುಕೊಳ್ಳದ ರಾಮು 'ದುರ್ಗಿ' ಎಂಬ ಚಿತ್ರವನ್ನು ನಿರ್ಮಿಸಿದರು. ಗಾಂಧಿನಗರದವರ ಪ್ರಕಾರ ಈ ಚಿತ್ರವೂ ತೋಪು.

ಈಗ ನಾಲ್ಕು ತೋಪು ಚಿತ್ರಗಳು ಮತ್ತು ಮೂರು ವರ್ಷಗಳ ಗ್ಯಾಪ್ ನಂತರ ಮಾಲಾಶ್ರೀ ಮತ್ತೆ 'ಕಿರಣ್ ಬೇಡಿ' ಎಂಬ ಚಿತ್ರಕ್ಕೆ ಮುಖಕ್ಕೆ ಬಣ್ಣ ಬಳಿದುಕೊಳ್ಳುತ್ತಿದ್ದಾರೆ.

ಇದನ್ನು ಅತಿಯಾದ ಆತ್ಮವಿಶ್ವಾಸ ಎನ್ನಬೇಕೋ ಅಥವಾ ಗಂಡ ಹೆಂಡತಿಯ ಪ್ರೀತಿಯ ಪರಾಕಾಷ್ಠೆ ಅನ್ನಬೇಕೋ ನೀವೇ ನಿರ್ಧರಿಸಿ.

ಜೊತೆ ಜೊತೆಯಲಿ





KES ನೇಮಕಾತಿ

ಸಮೃದ್ಧ ಮಾಹಿತಿ, ಅಧ್ಯಯನ ಸಾಮಗ್ರಿ
ಮಾದರಿ ಪ್ರಶ್ನಪತ್ರಿಕೆಗಳ

ವಿಶೇಷಾಂಕ

ಹೊಸ ಸಂಚಿಕೆ ಎಲ್ಲೆಡೆ ಲಭ್ಯ